ಪುಸ್ತಕ ಪ್ರಪಂಚ

ಸಂಪುಟ ೪೫ ಸೆಪ್ಟೆಂಬರ್ ೧೯೯೪ ಸಂಚಿಕೆ ೧



ವಿಷಯ ಸೂಚಿಕೆ

ಮುಖಚಿತ್ರ: ಪು. ತಿ. ನರಸಿಂಹಾಚಾರ್

ಪು.ತಿ.ನ.

ಲತಾ ರಾಜಶೇಖರ್

ಪು.ತಿ.ನ ಅವರು ಆಧುನಿಕ ಕನ್ನಡ ಕಾವ್ಯದ 'ರತ್ನತ್ರಯ'ರಲ್ಲಿ ಒಬ್ಬರಾಗಿದ್ದಾರೆ. ಪು.ತಿ.ನ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಪು.ತಿ. ನರಸಿಂಹಾಚಾರ್ ಅವರು ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಮೇಲುಕೋಟೆಯಲ್ಲಿ, ೧೯೦೫ನೆಯ ಇಸವಿ ಮಾರ್ಚ್ ತಿಂಗಳ ಹದಿನೇಳರ ದಿನಾಂಕ ಜನಿಸಿದರು. ಇವರು ಶ್ರೀ ತಿರುನಾರಾಯಣ ಅಯ್ಯಂಗಾರ್ ಮತ್ತು ರಾಮಮ್ಮ ದಂಪತಿಗಳ ಹಿರಿಯ ಮಗ. ಸುಸಂಸ್ಕೃತ ಮನೆತನದ ಹಿನ್ನೆಲೆಯಿಂದ ಬಂದ ಅವರು ತಮ್ಮ ತಂದೆಯಿಂದ ವಿಶೇಷವಾಗಿ ಪ್ರಭಾವಿತರಾದರು.

ತಿರುನಾರಾಯಣ ಅಯ್ಯಂಗಾರ್ ಅವರು ಜನಸಾಮಾನ್ಯರಿಂದ ಹಿಡಿದು ವಿದ್ವಾಂಸರವರೆಗೆ ತುಂಬ ಜನಪ್ರಿಯತೆಯನ್ನು ಪಡೆದಂತಹ ವ್ಯಕ್ತಿ. ವೇದಾಂತ, ತರ್ಕಗಳಲ್ಲಿ ಅಸದೃಶ ಪಾಂಡಿತ್ಯವನ್ನು ಪಡೆದಿದ್ದ ಅವರಿಗೆ ರಾಮಾಯಣ, ಭಾರತ, ಭಾಗವತಗಳು ಕರತಲಾಮಲಕವಾಗಿದ್ದವು. ಅವರು ಪ್ರವಚನ ವ್ಯಾಖ್ಯಾನಗಳಲ್ಲಿ ನಿಪುಣರಾಗಿದ್ದರು. ಅವರ ಮನೆ ವಿದ್ವಾಂಸರ ಯಾತ್ರಾಸ್ಥಳವಾಗಿತ್ತು. ಬೆಳ್ಳಾವೆ ನರಸಿಂಹಶಾಸ್ತ್ರಿ, ರಾ. ನರಸಿಂಹಾಚಾರ್, ಮಾಸ್ತಿ ವೆಂಕಟೇಶ ಅಯ್ಯಂಗಾರ್, ದೇವಶಿಖಾಮಣಿ, ಅಳಸಿಂಗ್ರಾಚಾರ್, ಪ್ರೊ. ಹಿರಿಯಣ್ಣ ಮೊದಲಾದ ಗಣ್ಯ ವಿದ್ವನ್ಮಣಿಗಳು ತಂದೆಯ ಜೊತೆ ನಡೆಸುತ್ತಿದ್ದ ಚರ್ಚೆಯಲ್ಲಿ ಬಾಲಕನಿಗೆ ಅಪಾರ ಕುತೂಹಲ. ಹೀಗೆ ಬಾಲ್ಯದಿಂದಲೇ ಪು.ತಿ.ನ ಅವರಿಗೆ ವಿದ್ವತ್ ಪರಿಸರ ದೊರಕಿದ್ದರಿಂದ ಅವರ ಮುಂದಿನ ಬೆಳವಣಿಗೆಗೆ ಸುಭದ್ರವಾದ ಹಿನ್ನೆಲೆ ಒದಗಿತು.

ಆಧುನಿಕ ಕನ್ನಡ ಸಾಹಿತ್ಯವನ್ನು ಬಹುಮುಖವಾಗಿ, ಅಷ್ಟೆ ವೈಶಿಷ್ಟ್ಯಪೂರ್ಣವಾಗಿ ಬೆಳೆಸಿದ ಕನ್ನಡದ ಅತ್ಯಂತ ಮಹತ್ವದ ಲೇಖಕರಲ್ಲಿ ಪು.ತಿ.ನ ಒಬ್ಬರಾಗಿದ್ದಾರೆ. ಬದುಕಿನಂತೆಯೇ ಬರಹದಲ್ಲೂ ವೈಶಿಷ್ಟ್ಯತೆಯನ್ನು ಸಾಧಿಸಿರುವ ಇವರು ಪರಂಪರೆ, ಸಮಕಾಲೀನತೆ ಹಾಗೂ ಪ್ರಗತಿಯ ಮುನ್ನೋಟಗಳನ್ನು ಒಳಗೊಂಡ ತ್ರಿಕಾಲ ಪ್ರಜ್ಞೆಯ ಸತ್ವಶಾಲಿ ಕವಿಯಾಗಿದ್ದಾರೆ.

ಚಿಂತನದ ಗರಿಮೆ ಹಾಗೂ ಸಂಗೀತದ ಸುಗಂಧದ ವಿಶಿಷ್ಟ ಗುಣಾಂಶಗಳು ಒಟ್ಟುಗೂಡಿರುವ ಪು.ತಿ.ನ ಅವರ ಸಾಹಿತ್ಯ ಕೃತಿಗಳು ಆಧುನಿಕ ಸಾಹಿತ್ಯ ಭಂಡಾರದ ಅಮೂಲ್ಯ ರತ್ನಗಳಾಗಿವೆ. ಸುಮಾರು ಮುವತ್ತಾರು ಕೃತಿಗಳನ್ನು ರಚಿಸಿರುವ

ಅವರು ತಮ್ಮ ಭಾವೋಜ್ವಲ ಹಾಗೂ ಚಿಂತನದೀಪ್ತ ಕೃತಿಗಳಿಂದ ಕನ್ನಡ ಸಾರಸ್ವತ ಲೋಕವನ್ನು ಬೆಳಗಿಸಿದ್ದಾರೆ.

ಹಣತೆ,ಮಾಂದಳಿರು, ಶಾರದಯಾಮಿನಿ, ಮಲೆದೇಗುಲ, ರಸಸರಸ್ವತಿ ಮತ್ತು ಇತರ ಕವನಗಳು, ಹೃದಯವಿಹಾರಿ, ಇರುಳ ಮೆರುಗು, ಹಳೆಯ ಬೇರು ಹೊಸ ಚಿಗುರು ಇವು ಪು.ತಿ.ನ ಅವರ ಯಶಸ್ವೀ ಕವನ ಸಂಕಲನಗಳು. ಅವರ ಕವಿತೆಗಳನ್ನು ಕುರಿತಂತೆ ಶ್ರೀ ಎಂ. ಹಿರಿಯಣ್ಣನವರು ಹೇಳಿರುವ ಮಾತುಗಳು ಗಮನಾರ್ಹ—"ಮಳೆ ಬಂದಾಗ ನೀರು ತುಂಬಿಕೊಂಡು ಬಿಸಿಲು ಬಂದಾಗ ಬತ್ತಿಹೋಗುವ ಜಲದಂತೆ ಅಲ್ಲ, ಎಷ್ಟು ತೋಡಿದರೂ ನೀರು ಸಿಕ್ಕದ ಸೀ ನೀರಿನ ಬಾವಿಯಂತೆ." 'ಛಂದೋಬಂಧಗಳ ವಿವಿಧ ಪ್ರಯೋಗ, ಸೌಂದರ್ಯ ಪ್ರಜ್ಞೆ....' ಇವು ಪು.ತಿ.ನ ಅವರ ಕವಿತೆಗಳಲ್ಲಿ ಕಾಣುವ ವಿಶೇಷ ಅಂಶಗಳು.

ಪು.ತಿ.ನ ಅವರ ನಾಟಕಗಳು 'ಕಾವ್ಯ ವೈಭವಕ್ಕೆ ನಿಲುಗನ್ನಡಿಯಾಗಿರುವಂಥವು'. ಅಹಲ್ಯೆ, ಗೋಕುಲ ನಿರ್ಗಮನ, ಕವಿ ಮತ್ತು ದೋಣಿಯ ಬಿನದ, ಶಬರಿ, ವಿಕಟಕವಿ ವಿಜಯ, ಹಂಸದಮಯಂತಿ ಮತ್ತು ಇತರ ರೂಪಕಗಳು, ಶ್ರೀ ರಾಮ ಪಟ್ಟಾಭಿಷೇಕ, ಸತ್ಯಾಯನ ಹರಿಶ್ಚಂದ್ರ, ಕುಚೇಲ ಕೃಷ್ಣ, ಜಾಹ್ನವಿಗೆ ಜೋಡಿ ದೀವಿಗೆ— ಇವು ನಾಟಕ ಕ್ಷೇತ್ರಕ್ಕೆ ಕವಿಯ ಗಮನಾರ್ಹ ಕೊಡುಗೆಗಳು.

ಅವರ ಗೀತ ನಾಟಕಗಳಲ್ಲಿ 'ಸತ್ಯಾಯನ ಹರಿಶ್ಚಂದ್ರ', 'ಅಹಲ್ಯೆ', 'ವಿಕಟಕವಿ ವಿಜಯ' ಮೊದಲಾದವು ಸಾಹಿತ್ಯಪ್ರಧಾನವಾದರೆ ಹಂಸ ದಮಯಂತಿ ಮತ್ತು ಇತರ ರೂಪಕಗಳು ಸಂಗೀತಪ್ರಧಾನ. ಸಾಹಿತ್ಯ ಸಂಗೀತಗಳೆರಡೂ 'ಗೋಕುಲ ನಿರ್ಗಮನ'ದಲ್ಲಿ ಸಮಾನವಾಗಿರುವುದನ್ನು ಕಾಣಬಹುದು. 'ಅಹಲ್ಯೆ' ಚಿಂತನಶೀಲತೆ ಮತ್ತು ಕಾವ್ಯಸತ್ಯಗಳಿಂದ ಅರಳಿರುವ ವಿಶಿಷ್ಟ ನಾಟಕವಾಗಿದ್ದರೆ 'ಸತ್ಯಾಯನ ಹರಿಶ್ಚಂದ್ರ' ಅನುಭಾವಿಕವಿ ಪು.ತಿ.ನ ಅವರ ಅಮೂಲ್ಯ ಕೃತಿಯಾಗಿದೆ. 'ಗೋಕುಲ ನಿರ್ಗಮನ'ವಂತೂ ಅವರ ನಾಟಕಗಳಲ್ಲಿ ತುಂಬ ಪ್ರತ್ಯೇಕವಾಗಿ ನಿಲ್ಲುವಂಥ ಸಂಗೀತ ಶಿಲ್ಪ ಕೃತಿ. ಒಟ್ಟನಲ್ಲಿ ಪು.ತಿ.ನ ಕನ್ನಡದಲ್ಲಿ ಗೀತ ನಾಟಕ ಪ್ರಕಾರವನ್ನು ವಿಶಿಷ್ಟವಾಗಿ ಪ್ರಯೋಗಿಸಿ, ದೃಢವಾಗಿ ನೆಲೆಗೊಳಿಸಿರುವ ಆಚಾರ್ಯ ಪುರುಷರಾಗಿದ್ದಾರೆ.

ಅತ್ಯಂತ ಶ್ರೇಷ್ಠ ಗದ್ಯ ಬರಹಗಳಿಗೂ ಹೆಸರಾಗಿರುವ ಪು.ತಿ.ನ ಅವರ ಕಾವ್ಯಗುಣ ಅವರ ಗದ್ಯದ ಮೇಲೂ ತನ್ನ ಮುದ್ರೆಯನ್ನೊತ್ತಿವೆ. 'ಈಚಲು ಮರದ ಕೆಳಗೆ' ಅವರ ಅತ್ಯಂತ ಮಹತ್ವದ ಪ್ರಬಂಧ ಸಂಕಲನ. ಈ ಕೃತಿ ಕನ್ನಡ ಪ್ರಬಂಧ ಸಾಹಿತ್ಯಕ್ಕೇ ಒಂದು ಹೊಸ ಆಯಾಮವನ್ನು ತಂದು ಕೊಟ್ಟಿದೆ. ನವುರಾದ ಹಾಸ್ಯ, ಗಂಭೀರವಾದ ಚಿಂತನಾಂಶ ಇವುಗಳ ಸಮ್ಮಿಲನವೇ ಪು.ತಿ.ನ ಪ್ರಬಂಧಗಳು. ಭಾವಗೀತ ಶೈಲಿಯ ಪ್ರಬಂಧಕಾರರಾಗಿ ಅವರು ಸಹೃದಯರ ಮನ ಗೆಲ್ಲುತ್ತಾರೆ. 'ಕನ್ನಡದ ವಿಚಾರಾತ್ಮಕ ಪ್ರಬಂಧಗಳ ಪಿತಾಮಹ' ಎಂಬ ಹೆಗ್ಗಳಿಕೆಗೆ ಪಾತ್ರರಾದ ಇವರ ರಾಮಾಚಾರಿಯ ನೆನಪು, ಧ್ವಜರಕ್ಷಣೆ, ರಥಸಪ್ತಮಿ, ಧೇನುಕಪುರಾಣ ಇವುಗಳು ಕಥೆ ಪ್ರಬಂಧ ಪ್ರಕಾರದ ಇನ್ನಿತರ ಕೃತಿಗಳಾಗಿವೆ.

ರಸಪ್ರಜ್ಞೆ, ದೀಪರೇಖೆ, ಕಾವ್ಯ ಕುತೂ

ಹಲ—ಇವು ಕನ್ನಡ ವಿಮರ್ಶೆಯ ಕ್ಷೇತ್ರಕ್ಕೆ ಪು.ತಿ.ನ ಅವರ ಮಹತ್ವಪೂರ್ಣ ಕೊಡುಗೆಗಳು. ಡಾ. ಸಿ.ಪಿ.ಕೆ ಅವರು ಹೇಳುವಂತೆ 'ಕಾವ್ಯ ಕುತೂಹಲ'ದಂಥ ಕೃತಿಗಳು ಕನ್ನಡದಲ್ಲಾಗಲಿ ಮತ್ತಾವ ಭಾಷೆಯಲ್ಲಾಗಲಿ ಬಹಳ ಇರುವುದು ಸಾಧ್ಯವಿಲ್ಲ. 'ಇಲ್ಲಿರುವುದು ಕೇವಲ ಕಾವ್ಯ ಮೀಮಾಂಸೆಯಲ್ಲ. ಅದರ ವ್ಯಾಜದಲ್ಲಿ ಭರತ ಖಂಡದ ಸಮಗ್ರ ಸಂಸ್ಕೃತಿಯ ಮೀಮಾಂಸೆಯೇ ವ್ಯವೆತ್ತಿದೆ.'

ಕನ್ನಡ ಭಗವದ್ಗೀತೆ, ಮಹಾಪ್ರಸ್ಥಾನ, ಸಿರಿಬಾಯಿನುಡಿ, ಬದಲಿಸಿದ ತಲೆಗಳು, ಸಮಕಾಲೀನ ಭಾರತೀಯ ಸಾಹಿತ್ಯ, ನಮ್ಮಾಳ್ವಾರ್—ಇವು ಪು.ತಿ.ನ ಅವರ ಗಮನಾರ್ಹವಾದ ಅನುವಾದಿತ ಕೃತಿಗಳು.

ಸಂತ ಕವಿ, ಚಿಂತನಶೀಲ, ವಾಗ್ಗೇಯಕಾರ, ರಾಷ್ಟ್ರೀಯವಾದಿ ಹೀಗೆ ಬಹುಮುಖವಾದ ವಿಶಿಷ್ಟ ವ್ಯಕ್ತಿತ್ವವನ್ನು ಪಡೆದಿರುವ ಪು.ತಿ.ನ ಅವರು ಕನ್ನಡಿಗರ ಪ್ರೀತ್ಯಾದರ, ಗೌರವ, ಪುರಸ್ಕಾರಗಳನ್ನು ಪಡೆದಿರುವ ಹಿರಿಯ ಕವಿ. ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ (೧೯೬೬), ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ (೧೯೭೧), ಚಿಕ್ಕಮಗಳೂರಿನಲ್ಲಿ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ (೧೯೮೧), 'ಯದುಗಿರಿಯ ವೀಣೆ' ಪ್ರಕಟಣೆ ಹಾಗೂ ಪ್ರೊ. ದೇಜಗೌ ಅವರ ಪ್ರಧಾನ ಸಂಪಾದಕತ್ವದಲ್ಲಿ 'ಯದುಗಿರಿ' ಅಭಿನಂದನ ಗ್ರಂಥ ಸಮರ್ಪಣೆ (೧೯೮೧), ಕೇಂದ್ರ ಸಾಹಿತ್ಯ ಅಕಾಡೆಮಿ ಫೆಲೋಷಿಪ್ (೧೯೯೪) ಮೊದಲಾದವು ಅವರಿಗೆ ದೊರೆತ ಪುರಸ್ಕಾರಗಳಲ್ಲಿ ಮುಖ್ಯವಾದವು.

ಪು.ತಿ.ನ ಅವರ ಕಾವ್ಯಸಿದ್ಧಿಯ ಶಿಖರವಾಗಿ ಮೂಡಿಬಂದ ಮಹತ್‌ಕೃತಿ 'ಶ್ರೀಹರಿ ಚರಿತೆ'. ಇದು ಬೃಹತ್ ಛಂದಸ್ಸಿನಲ್ಲಿ ರಚಿತವಾದ ಮಹಾಕಾವ್ಯ. "ಶ್ರೀ ಕೃಷ್ಣ ನನ್ನ ಆತ್ಮಕ್ಕೆ ತುಂಬ ಹತ್ತಿರವಾದ ದೇವರು. ಶ್ರೀ ಹರಿ ಚರಿತೆಯಲ್ಲಿ ನಾನು ಆ ಪುರುಷೋತ್ತಮನನ್ನು ಅನೇಕ ಪರಿಗಳಲ್ಲಿ ನೆನೆದಿದ್ದೇನೆ" ಎಂದಿದ್ದಾರೆ ಕವಿ.

ಭಾರತ ಸರ್ಕಾರದ ಪದ್ಮಶ್ರೀ ಪ್ರಶಸ್ತಿಯ ಮನ್ನಣೆಗೆ ಪಾತ್ರರಾಗಿರುವ ಪು.ತಿ.ನ ಅವರು ತಮ್ಮ ಮಹತ್ವಪೂರ್ಣ ಮಹಾಕಾವ್ಯ 'ಶ್ರೀಹರಿ ಚರಿತೆ'ಗಾಗಿ ಕರ್ನಾಟಕ ಸರ್ಕಾರದ ಪ್ರತಿಷ್ಠಿತ 'ಪಂಪ ಪ್ರಶಸ್ತಿ'ಯ ಗೌರವಕ್ಕೂ ಪಾತ್ರರಾಗಿರುವುದು ಬಹಳ ಸಂತೋಷದ ಸಂಗತಿ.

ಶ್ರೀಕವಿ ಪು.ತಿ.ನ ಅವರ ಬರಹ, ಬದುಕು ಉದಾತ್ತ. ಅವರ ಸಾಹಿತ್ಯ ಕೃತಿಗಳು ಚಿರಂತನ ಗುಣಮೌಲ್ಯ ಸಮನ್ವಿತ.

ಕನ್ನಡದ ಸಂಸ್ಕೃತಿಗೆ, ಸಜ್ಜನಿಕೆಗೆ ಮತ್ತೊಂದು ಹೆಸರಾಗಿರುವ ಸ್ನೇಹಜೀವಿ, ಚಿಂತನಶೀಲ ಪು.ತಿ.ನ ಅವರು ಕನ್ನಡದ ಮಾರ್ಗದರ್ಶಕ ದೀಪ್ತಿಯಾಗಿ ನೂರುಕಾಲ ಬಾಳಲಿ ಎಂಬುದು ಕನ್ನಡಿಗರೆಲ್ಲರ ಹಾರೈಕೆ.

'ನೆನಪು ಸಾಯದ ಮಹಾನ್ ಕೃತಿಕಾರ ವೈಕಂ'

ಪರಮಶಿವ ನಡುಬೆಟ್ಟ

ಮಲೆಯಾಳಂ ಸಾಹಿತ್ಯದಲ್ಲಿ ಹಲವಾರು ಉತ್ತಮ ಸಾಹಿತಿಗಳನ್ನು ಕಾಣುತ್ತೇವೆ. ಅವರಲ್ಲಿ ಕೇಶವದೇವ್, ತಕಳಿ ಶಿವಶಂಕರ ಪಿಳ್ಳೈ, ಎಸ್. ಕೆ. ಪೊಟ್ಟೆಕಾಟ್, ಲಲಿತಾಂಬಿಕಾ, ಕರೂರು ನೀಲಕಂಠಪಿಳ್ಳೈ, ಪಿ. ಸಿ. ಕುಟ್ಟಿ ಕೃಷ್ಣನ್, ಎಂ. ಟಿ. ವಾಸುದೇವನ್ ನಾಯರ್ ಇವರೆಲ್ಲರಂತೆಯೆ ಈಚೆಗೆ ನಿಧನರಾದ ವೈಕಂ ಮಹಮದ್ ಬಷೀರ್ ಸಹ.

ಮಲೆಯಾಳಂ ಸಾಹಿತ್ಯದಲ್ಲಿ ಮಣ್ಣಿನ ವಾಸನೆ, ಬದುಕಿನ ಹಲವಾರು ಮುಖಗಳನ್ನು ಬಿಚ್ಚಿ ಕಥೆ, ಕಾದಂಬರಿಗಳಲ್ಲಿ ಇಟ್ಟವರು ಬಷೀರರು. ಜೀವನದ ಹಲವಾರು ಅನುಭವಗಳನ್ನು ತಮ್ಮ ಕೃತಿಗಳ ಮೂಲಕ ಓದುಗರೊಂದಿಗೆ ಹಂಚಿಕೊಂಡವರು. ಪರಿಪೂರ್ಣತಾವಾದದಲ್ಲಿ ನಂಬಿಕೆ ಇಟ್ಟುಕೊಂಡವರು. ಮಾನವ ಪ್ರೇಮಕ್ಕಿಂತ ಹೆಚ್ಚಿನ ಧರ್ಮ ಒಂದಿಲ್ಲ ಎಂದು ನಂಬಿ ಯಾವ ರಾಜಕೀಯದ ಸಾಮೀಲಿನಲ್ಲೂ ಬೆರೆಯದೆ, ಬದುಕಿನುದ್ದಕ್ಕೂ ತನ್ನ ತನವನ್ನು ಕಾಯ್ದಿಟ್ಟುಕೊಂಡು ಬಂದಿದ್ದ ಬೇಪೂರಿನ ಸುಲ್ತಾನ ಎಂದೇ ಹೆಸರಾಗಿದ್ದ ಮಹಾನ್ ಕೃತಿಕಾರ ವೈಕಂ ಮಹಮದ್ ಬಷೀರ್ ಅವರು ಕಳೆದ ಜುಲೈ ೫ ರಂದು ನಿಧನರಾದರು.

ವೈಕಂ ಮಹಮದ್ ಬಷೀರರ ಬಗ್ಗೆ ಗೆಳೆಯ ಆಲನಹಳ್ಳಿ ಕೃಷ್ಣ ಬದುಕಿದ್ದಾಗ ಪುಸ್ತಕ ಪ್ರಪಂಚದ ಒಂದು ವಿಶೇಷ ಸಂಚಿಕೆಯನ್ನೇ ತರಲಾಗಿತ್ತು. ಆಗ ಅವರ ಕೃತಿಗಳನ್ನು ವಿವಿಧ ರೀತಿಯಲ್ಲಿ ನೋಡಿದ್ದಾಗಿತ್ತು. ಒಂದೆರಡು ಕತೆಗಳನ್ನು ಅನುವಾದ ಮಾಡಿ ಪ್ರಕಟಿಸಿದ್ದಾಗಿತ್ತು. ಈಗ ಬಷೀರ್ ಅವರು ತಮ್ಮ ಆತ್ಮಕತೆಯ ಬಗ್ಗೆ ಮಲೆಯಾಳಂ ಪ್ರಸಿದ್ಧ ಪತ್ರಿಕೆಗಳಲ್ಲಿ ಒಂದಾದ 'ಮಲೆಯಾಳಂ ಮನೋರಮ' ಪತ್ರಿಕೆಗೆ ಬರೆದ ಒಂದು ಲೇಖನದ ಭಾವಾನುವಾದ ಇದು.

ವೈಕಂ ಮಹಮದ್ ಬಷೀರ್ ಅವರು ಕೇರಳದ ತಲಯೋಲಪ್ಪರಂಬಿನ ಅಬ್ದುರೆಹಮಾನ್ ಮತ್ತು ಕುಞಾಚ್ಚುಮ್ಮ ಇವರ ಮೊದಲ ಮಗನಾಗಿ ಹುಟ್ಟಿದರು. ಹುಟ್ಟಿದ್ದೂ ತಲಯೋಲಪ್ಪರಂಬಿನಲ್ಲಿ. ಅಬ್ದುಲ್ ಖಾದರ್, ಮಹಮದ್ ಹನೀಫ್ ಸಹೋದರರಂತೆ, ಅಬುಬಾಕರ್, ಪಾತುಮ್ಮ ಆನುಮ್ಮ ಇವರು ಸಹೋದರಿಯರು.

ಇವರನ್ನೆಲ್ಲಾ ಶಾಲೆಗೆ ಸೇರಿಸಿದಂತೆ ಬಷೀರ್ ಅವರನ್ನೂ ಸೇರಿಸಲಾಯಿತು. ಬಷೀರ್‌ರವರು ತಲಯೋಲಪ್ಪರಂಬಿನ ಶಾಲೆಯಲ್ಲಿ ನಾಲ್ಕನೆಯ ತರಗತಿ ಪಾಸಾದ ನಂತರ ವೈಕಂನ ಇಂಗ್ಲಿಷ್ ಶಾಲೆಗೆ ಸೇರಿದರು. ತಮ್ಮ ಖಾದರ್ ಏಳನೆಯ ತರಗತಿ ಪಾಸಾಗಿ ಶಾಲಾ ಮಾಸ್ತರರಾದರು. ಈ ಎಲ್ಲಾ ಕುಟುಂಬದ ಕತೆಯನ್ನು ತಮ್ಮ 'ಪಾತುಮ್ಮಯುಡೆ ಆಡು' (ಪಾತುಮ್ಮನ ಆಡು) ಕೃತಿಯಲ್ಲಿ ಹೇಳಿದ್ದಾರೆ. 'ಪಾತುಮ್ಮಯುಡೆ ಆಡು' ಕಡು ಬಡತನದ ಮುಸ್ಲಿಂ ಕುಟುಂಬವೊಂದರ ನೈಜ ಚಿತ್ರಣ. ಆದುದರಿಂದಲೇ ಈ ಕತೆಯ ವಸ್ತು ಸಹಸ್ರಾರು ವರ್ಷ ಕಾಲ ಉಳಿಯುವಂತದ್ದು ಎಂದು ಬಷೀರರೇ ಹೇಳಿಕೊಂಡಿದ್ದಾರೆ.

ವೈಕಂ ಮಹಮದ್ ಬಷೀರ್ ಅವರು ಐದನೆ (ಇಂದಿನ ಒಂಬತ್ತನೆ ತರಗತಿಗೆ ಸಮ) ತರಗತಿಯವರೆಗೆ ಕಲಿತರು. ಅಂದು ಸ್ವಾತಂತ್ರ್ಯ ಚಳುವಳಿಯ ಕಾಲ. ಗಾಂಧೀಜಿಯವರು ಕೇರಳಕ್ಕೆ ಆಗಮಿಸಿದ್ದರು. ಬಷೀರರು ಶಾಲೆ ವ್ಯಾಸಂಗಕ್ಕೆ ಶರಣು ಹಾಕಿ ಗಾಂಧೀಜಿಯವರೊಂದಿಗೆ ಚಳುವಳಿಯಲ್ಲಿ ಭಾಗಿಯಾಗಲು ಮನೆಬಿಟ್ಟು ಓಡಿದರು. ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿ ಪೋಲಿಸರ ಲಾಠಿ ಪೆಟ್ಟು ತಿಂದು, ಸೆರೆವಾಸವನ್ನು ಅನುಭವಿಸಬೇಕಾಗಿ ಬಂತು. ಇವರನ್ನು ಕೋಝಿಕೂಡ್, ಕಣ್ಣಾನೂರ್ ಸೆರೆಯಲ್ಲಿಟ್ಟರು. ಗಾಂಧಿ ಮತ್ತು ಇರವಿನ್ನರ ಒಪ್ಪಂದದ ಮೇರೆಗೆ ಬಿಡುಗಡೆ ಮಾಡಲಾಯಿತು. ಇದನ್ನು ಕುರಿತಾದ ಕಥೆಯೇ 'ಅಮ್ಮ' ಕಥೆ. ಇದರಲ್ಲಿ ತಮ್ಮ ಜೀವನದ ವಾಸ್ತವತೆಯನ್ನು ಬಿಚ್ಚಿ ತೋರುವುದರೊಂದಿಗೆ ತಾಯಿಯ ಬಗ್ಗೆಯೂ ಹೇಳಿಕೊಂಡಿದ್ದಾರೆ.

ನಂತರ ಮನೆಯಿಂದ ಕೊಚ್ಚಿಗೆ ಹೋದ ಬಷೀರರು ಸೈಮುದ್ದೀನ್ ಎಂಬ ಗೆಳೆಯರ ಜೊತೆ ಕೂಡಿಕೊಂಡು 'ಉಜ್ಜೀವನಂ' ಎಂಬ ಹೆಸರಿನಲ್ಲಿ ಒಂದು ವಾರ ಪತ್ರಿಕೆಯನ್ನು ಪ್ರಕಟಿಸಲಾರಂಭಿಸಿದರು. ಉಗ್ರ ಹೋರಾಟವನ್ನೂ ಮಾಡಿದರು. 'ಉಜ್ಜೀವನಂ' ಪ್ರಕಟಿಸಿದ್ದರಿಂದ ಸರ್ಕಾರ ಇವರನ್ನು ಬಂಧಿಸಲು ಯತ್ನಿಸಿತು. ಅವರು ಎತ್ತಿನ ಗಾಡಿಯಲ್ಲಿ ಹತ್ತಿ ಅಲ್ಲಿಂದ ತಲೆಮರೆಸಿಕೊಂಡರು. ಏಳು ವರ್ಷ ಕಾಲ ಇಡೀ ಭಾರತವನ್ನು ಸಂಚರಿಸಿದರು. ಹಡಗಿನಲ್ಲಿ, ಹೋಟಲಿನಲ್ಲಿ, ಕಾರ್ಖಾನೆಯಲ್ಲಿ, ವರ್ಕ್‌ಶಾಪ್‌ಗಳಲ್ಲಿ ವಿವಿಧ ರೀತಿಯ ಕೆಲಸ ಮಾಡುತ್ತ ತಲೆಮರೆಸಿಕೊಂಡದ್ದಾಯಿತು.

ಏಳು ವರ್ಷಗಳ ನಂತರ ಮತ್ತೆ ಮನೆಗೆ ಹಿಂದಿರುಗಿದ ಅವರು ದೇಶ ಪರ್ಯಟನೆ ಹಾಗು ಆ ಸಮಯದಲ್ಲಿ ಉಂಡ ಕಷ್ಟಗಳೆಲ್ಲವನ್ನು ಅಕ್ಷರಗಳಲ್ಲಿ ಭಟ್ಟಿ ಇಳಿಸಲು ಸಾಹಿತಿಯಾಗಲು ತೀರ್ಮಾನಿಸಿದರು. ಕೊಚ್ಚಿಯಲ್ಲಿದ್ದುಕೊಂಡೆ ಪತ್ರಿಕೆಗಳಿಗೆ ಲೇಖನ ಬರೆಯತೊಡಗಿದರು. ಅದು ಪ್ರಾಂತೀಯ ಕಾಂಗ್ರೆಸ್ಸಿನ ಆರಂಭ ಕಾಲದ ಸಂದರ್ಭ. 'ರಾಜ್ಯಾಭಿಮಾನಿ' ಎಂಬ ಪತ್ರಿಕೆಯಲ್ಲಿ 'ಪಟ್ಟತ್ತಿಂಡೆ ಕಿನಾವು' ಎಂಬೊಂದು ನಾಟಕವನ್ನು ಪ್ರಕಟಿಸಿದರು. ಇದು ಸರ್ಕಾರವನ್ನು ಆನೇಕ ಮಾಡುವಂತ ಲೇಖನವೆಂಬ ಆರೋಪದ ಮೇಲೆ ಇವರಿಗೆ ವಾರಂಟ್ ನೀಡಲಾಯಿತು. ಅಲ್ಲದೆ ಅವರ ಲೇಖನದಲ್ಲಿದ್ದ ಪ್ರಚೋದನೆಯನ್ನು ಅರಿತು ಪ್ರಕಟಣೆಯನ್ನೆ ನಿಷೇಧಿಸಲು ಯತ್ನಿಸಲಾಯಿತು. ಬಷೀರ್ ಅವ

ರನ್ನು ಬಂಧಿಸಿ ಎರಡು ವರ್ಷ ಕಾಲ ಕಠಿಣ ಸಜೆ ಹಾಗೂ ಸಾವಿರ ರೂಪಾಯಿಗಳ ದಂಡ ವಿಧಿಸಿ ತಿರುವನಂತಪುರದ ಸೆರೆ ಮನೆಯಲ್ಲಿಡಲಾಯಿತು. ಈ ಘಟನೆ ೧೯೪೧ರಲ್ಲಿ ಸಂಭವಿಸಿದ್ದು ಎಂದು ಅವರೇ ಹೇಳಿಕೊಂಡಿದ್ದಾರೆ.

ಸೆರೆವಾಸದಲ್ಲಿದ್ದಾಗ ಅವರು ಅನುಭವಿಸಿದ ಕಷ್ಟ; ಪೋಲಿಸರು ನಡೆದುಕೊಂಡ ರೀತಿ, ಅವರ ಶೋಷಣೆ, ದೌರ್ಜನ್ಯ ಮುಂತಾದುವನ್ನು ಕಥಾ ರೂಪದಲ್ಲಿ ಸೆರೆ ಹಿಡಿದಿದ್ದಾರೆ.

೧೯೫೮ ಡಿಸೆಂಬರ್ ೧೮ರಲ್ಲಿ ಕೋಝಿಕೂಡಿನ ಚೆರುವಣ್ಣೂರಿನ ಕೋಯಕುಟ್ಟಿ ಮಾಸ್ತರರ ಮೊದಲ ಮಗಳಾದ ಫೋಟಿ ಅವರನ್ನು ಮದುವೆಯಾದರು. ಷಹೀನಾ ಬಷೀರ್, ಅನೀಸ್ ಬಷೀರ್ ಹಾಗು ಮಗಳು ಹುಟ್ಟಿದರು. ಬಷೀರರ ಅತ್ತೆ ಮಾವ ತೀರಿಕೊಂಡ ನಂತರ ಚೆರುವನ್ನೂರಿಗೆ ಬಂದು ನೆಲೆಸಿದರು. ತರುವಾಯ ಬೇಪೂರಿನಲ್ಲಿ ಒಂದು ಮನೆ ಮಾಡಿದರು. ಜಮೀನುಕೊಂಡುಕೊಂಡರು; ಬೇಪೂರಿನ ಸುಲ್ತಾನ್ ಎಂದೇ ಹೆಸರಾದರು.

ಅವರ ಹಲವಾರು ಕೃತಿಗಳಲ್ಲಿ 'ಬಾಲ್ಯ ಕಾಲ ಸಖಿ'ಯೂ ಒಂದು. ಇದರಲ್ಲಿ ಮುಕ್ಕಾಲು ಭಾಗದಷ್ಟು ಅವರ ಜೀವನ ಕುರಿತಾಗಿದೆ. ಮುಸ್ಲಿಂ ಸಂಪ್ರದಾಯವನ್ನು ಪ್ರತಿಬಿಂಬಿಸುವ ಉತ್ತಮ ಕೃತಿಯಾಗಿದೆ. ಆ ತಲೆಮಾರಿನ ಅಂತ್ಯದ ಬಗ್ಗೆ ಒಂದು ಸುಂದರ ಚಿತ್ರವೆನಿಸಿದೆ. ಅದೇ ರೀತಿ 'ನುಪ್ಪುಪ್ಪಾಕ್ಕೊರಾನೆಯುಂಡಾಯಿರುನ್ನು' (ನನ್ನಜ್ಜನಿಗೊಂದು ಆನೆ ಇತ್ತು) ಒಂದು ಉತ್ತಮ ಕೃತಿಯೆಂದು ಅಂದಿನ ಮದರಾಸು ಸರ್ಕಾರ ಐದು ಸಾವಿರ ರೂಪಾಯಿ ಹಾಗು ಪಾರಿತೋಷಕ ನೀಡಿಗೌರವಿಸಿದರು. ಬದುಕಿನಲ್ಲಿರುವ ನಂಬಿಕೆ, ಸಂಪ್ರದಾಯದ ಸೋಲನ್ನು ಪ್ರತಿಬಿಂಬಿಸುವ ಮಲೆಯಾಳಂನ ಒಂದು ಶ್ರೇಷ್ಠ ಕೃತಿ. ಸರ್ವಕಾಲಕ್ಕೂ ನೆನಪಾಗಿಯೇ ಉಳಿವ ಪಾತ್ರ 'ಕುಞಪಾತುಮ್ಮ'ನ್ನದು. ಮತ್ತೊಂದು ಕೃತಿಯಾದ 'ಕಥಾಬೀಜಂ' ಎಂಬ ನಾಟಕಕ್ಕೆ ಸಾಹಿತ್ಯ ಪರಿಷತ್ತಿನ ಬಹುಮಾನ ಲಭಿಸಿತು. ೧೯೭೦ರಲ್ಲಿ ಉತ್ತಮ ಕಾದಂಬರಿಕಾರ ಎಂದು ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನ ಬಂದಿತು.


'ಬಾಲ್ಯ ಕಾಲಸಖಿ' 'ಮಾಂತ್ರಿಕ ಪುಚ್ಚ' 'ಪ್ರೇಮ ಲೇಖನಂ' 'ಜೀವಿತ ನಿಳಲ್ಪ್ಪಾಟ್‌ಕಳ್' 'ಸ್ಥಲತ್ತೆ ಪ್ರಧಾನದಿವ್ಯನ್' 'ಶಬ್ದಂಗಳ್', 'ಅನುರಾಗತ್ತಿಂಡೆ ದಿನಂಗಳ್' 'ಮುಚ್ಚಿಟ್ಟು ಕಳಿಕಾರನ್ಡೆ ಮಗಳ್' 'ಮರಣತ್ತಿಂಡೆ ನಿಳಲಿಲ್' 'ಜನ್ಮದಿನಂ' 'ಪಾದಪಟ್ಟವರುಡೆ ವೇಶ್ಯ' 'ಒರು ಭಗವದ್ಗೀತೆಯುಂ ಕುರೇ ಮುಲಕಳುಂ' 'ಕಥಾಬೀಜಂ' 'ನುಪ್ಪುಪ್ಪಾಕ್ಕೊರಾನೆಯುಂಡಾಯಿರುನ್ನು' ಇಂಥ ಹತ್ತು ಹಲವಾರು ಕತೆ, ಕಾದಂಬರಿ, ನೀಳ್ಗತೆಗಳನ್ನು ಸಾಹಿತ್ಯ ಲೋಕಕ್ಕೆ ನೀಡಿದ ವೈಕಂ ಮುಹಮದ್ ಬಷೀರ್ ತಮ್ಮ ಅನುಭವದ ಕೃಷಿಯನ್ನು ಸಾಹಿತ್ಯದಲ್ಲಿ ಬೆಳೆದರು.

ಪತ್ರಕರ್ತರಾಗಿ, ಸ್ವತಂತ್ರ ಹೋರಾಟಗಾರರಾಗಿ ಲೇಖಕರಾಗಿದ್ದರಷ್ಟೆ ಅಲ್ಲ. ಬಷೀರ್ ಬುಕ್‌ಸ್ಟಾಲ್‌ನಂತ ಪುಸ್ತಕದ ಅಂಗಡಿಗಳನ್ನು ಇಟ್ಟುಕೊಂಡು ಸಾಹಿತ್ಯ ವಿತರಕರೂ ಆಗಿದ್ದರು.

ಒಟ್ಟಾರೆ ವೈಕಂ ಅವರ ಕೃತಿಗಳಲ್ಲಿ ಸಾಮಾಜಿಕ ಸಮಸ್ಯೆಗಳ ಚಿತ್ರಣ, ಭಗ್ನ

ಪ್ರೇಮದ ತೀವ್ರ ಚಿಂತೆ, ಸಾಂಸ್ಕೃತಿಕ ಹಾಗೂ ನೈತಿಕ ಅದಃಪತನ, ಬಡತನದ ನೋವು, ವ್ಯಭಿಚಾರ, ಕಳ್ಳತನ ಇವುಗಳ ನಡುವೆಯೂ ಮನುಷ್ಯತ್ವದ ಅನಾವರಣವನ್ನು ಗುರ್ತಿಸ ಹೊರಟಿದ್ದಾರೆ. ಜೈಲಿನಲ್ಲಿ ಕಂಡ, ಅನುಭವಿಸಿದ ಶಿಕ್ಷೆ, ಯಾತನೆ ಅಧಿಕಾರಿಗಳ ದರ್ಪ, ಶೋಷಣೆ ಇವೆಲ್ಲವನ್ನು ಮನಮಿಡಿಯುವಂತೆ ಚಿತ್ರಿಸುವ ಕೌಶಲ್ಯವನ್ನು ಅವರಲ್ಲಿ ಕಾಣುತ್ತೇವೆ.

ಇಂಥ ಒಬ್ಬ ಮಹಾನ್ ಲೇಖಕ, ಮಣ್ಣಿನ ಬದುಕಿನಲ್ಲಿ ಗಾಢ ಪ್ರೀತಿಯಿಟ್ಟು, ವಸ್ತುಸ್ಥಿತಿಯನ್ನು ಕೃತಿಗಳಲ್ಲಿ ತೆರೆದು ತೋರಿದ ಚೈತನ್ಯಮೂರ್ತಿ ವೈಕಂ ಮಹಮದ್ ಬಷೀರ್ ಸತ್ತರೂ ಅವರ ನೆನಪು ಸಾಯಲಾರದು.



ನಂಬಿಗೆಯೇ ಎಲ್ಲ ಧೈರ್ಯ ಸಾಹಸಗಳಿಗೆ ಮೂಲ ಆಧಾರ, ನಂಬಿಗೆ ಇಲ್ಲದವನ ಹೃದಯ ಮನಸ್ಸುಗಳೆರಡೂ ಚಿಂತೆ, ಭಯ, ಅಡ್ಡಿ ಆತಂಕ ಪಾಪಗಳಿಂದ ಕೂಡಿರುತ್ತವೆ. ನಂಬಿಗೆಯೂ ವಿಶ್ವಾಸ, ಶ್ರದ್ಧೆ ಮತ್ತು ವಿಜಯಗಳ ಮೂಲವಾಗಿರುತ್ತದೆ.

—ಬುದ್ಧ

ಸುಳ್ಳು ಹೇಳುವುದು, ಅಸಭ್ಯತೆಯಿಂದಿರುವುದು, ದುರ್ವಿಚಾರ ಮಾಡುವುದು, ದೂಷಿಸುವುದು, ದ್ವೇಷಿಸುವುದು, ಹಿಂಸಿಸುವುದು, ಇವೆಲ್ಲವೂ ಕೊಲೆ ಮಾಡಿದಷ್ಟೇ ದೊಡ್ಡ ಪಾಪಗಳು.

—ಭಗವಾನ್ ಬುದ್ಧ

ಹಾವೂ ಮತ್ತು ಕನ್ನಡಿಯೂ

ಪರಮಶಿವ ನಡುಬೆಟ್ಟ

ನಾವು ಒಬ್ಬ ಆಯುರ್ವೇದಿ ವೈದ್ಯರೊಂದಿಗೆ ಹಾವಿನ ಬಗ್ಗೆ ಮಾತನಾಡುತ್ತಾ ಕುಳಿತಿದ್ದೆವು. "ಒಂದು ಭರ್ಜರಿಯಾದ ನಾಗರ ಹಾವು ನಿಮ್ಮ ಶರೀರದ ಯಾವುದಾದರೂ ಭಾಗದಲ್ಲಿ ಸುತ್ತಿಕೊಂಡಿದೆಯೆ?" ಎಂದನವ. ವೈದ್ಯರು ಇದನ್ನು ಮುಂದುವರೆಸುತ್ತಾರೇನೊ ಎಂದು ನಾವೆಲ್ಲ ನಿಶ್ಶಬ್ದರಾದೆವು.

ಅದು ಬಿರುಬಿಸಿಲಿನ ಒಂದು ರಾತ್ರಿ. ಸುಮಾರು ಹತ್ತು ಗಂಟೆಯಾಗಿತ್ತು. ನಾನು ಹೋಟಲಿನಲ್ಲಿ ಊಟ ಮುಗಿಸಿ ನನ್ನ ಕೊಠಡಿಗೆ ಹಿಂದಿರುಗಿದೆ. ಬಾಗಿಲು ತೆರೆಯುತ್ತಿದ್ದಂತೆ ಮೇಲಿಂದ ಬುಸುಗುಡುವ ಶಬ್ದ ಕೇಳಿಸಿತು. ನನ್ನೊಂದಿಗೆ ಈ ಕೊಠಡಿಯಲ್ಲಿ ಇಲಿಯೂ ವಾಸವಾಗಿದೆ ಎಂಬುದು ಎಲ್ಲರಿಗೂ ಗೊತ್ತು. ಬೆಂಕಿಪೆಟ್ಟಿಗೆಯನ್ನು ತೆಗೆದು ಮೇಜಿನ ಮೇಲಿದ್ದ ಸೀಮೆಎಣ್ಣೆ ದೀಪವನ್ನು ಒತ್ತಿಸಿದೆ.

ಮನೆಗೆ ವಿದ್ಯುಚ್ಛಕ್ತಿ ಹಾಕಿಸಿರಲಿಲ್ಲ. ಅದೊಂದು ಸಣ್ಣ ಬಾಡಿಗೆ ಕೊಠಡಿ. ವೈದ್ಯಕೀಯ ವೃತ್ತಿಯನ್ನು ಆಗಷ್ಟೆ ಹಿಡಿದಿದ್ದ ನನ್ನ ವರಮಾನ ಹೇಳಿಕೊಳ್ಳುವಂತೇನೂ ಇರಲಿಲ್ಲ. ನನ್ನ ಸೂಟ್‌ಕೇಸಿಗೆ ಸುಮಾರು ಅರವತ್ತು ರೂಪಾಯಿಗಳು ಇದ್ದಿರಬೇಕು. ಇದರೊಟ್ಟಿಗೆ ಆಗ ಧರಿಸುತ್ತಿದ್ದ ಕೆಲವು ಅಂಗಿಗಳು, ಪಂಚೆಗಳು, ಒಂದೇ ಒಂದು ಕಪ್ಪು ಕೋಟು ಇದ್ದಿತು.

ನಾನು ಕಪ್ಪು ಕೋಟನ್ನು, ಬಿಳಿಯ ಅಂಗಿಯನ್ನು ಮತ್ತು ಅಷ್ಟೇನೂ ಬಿಳಿಯದಲ್ಲದ ಜುಬ್ಬವನ್ನು ತೆಗೆದು ನೇತುಹಾಕಿದ್ದೆ. ಕೊಠಡಿಯ ಎರಡೂ ಕಿಟಕಿಗಳನ್ನು ತೆರೆದೆ. ನಾನು ವಾಸವಾಗಿದ್ದ ಕೊಠಡಿಯ ಒಂದು ಗೋಡೆ ಹೊರವಲಯಕ್ಕೆ ಮುಖ ಮಾಡಿದಂತೆ ಇದೆ. ಅದೊಂದು ಹೆಂಚು ಹೊದಿಸಿದ ತ್ರಿಕೋನಾಕಾರದ ಎತ್ತರವಾದ ಗೋಡೆಯ ಕೊಠಡಿ, ಅದೂ ಗೋಡೆಯ ಮೇಲೆ ಗೆದ್ದಲು ಹತ್ತಿದೆ. ಅಲ್ಲೇನೂ ಸೀಲಿಂಗ್ ಮಾಡಿಲ್ಲ. ತೊಲೆಯಿಂದ ತೊಲೆಗೆ ಇಲಿಗಳು ಸರಾಗವಾಗಿ ಓಡಾಡಲು ದಾರಿ ಇದೆ. ನಾನು ಹಾಸಿಗೆಯನ್ನು ಗೋಡೆಗೆ ಸೇರಿದಂತೆ ಇಟ್ಟಿದ್ದೆ. ನಾನು ಕೆಳಗೆ ಕುಳಿತಿದ್ದೆ. ಆದರೆ ಮಲಗಿರಲಿಲ್ಲ. ಈಗ ಎದ್ದವನೆ ಹೊರಗೆ ವರಾಂಡದಲ್ಲಿ ತಣ್ಣಗೆ ಬೀಸುವ ಗಾಳಿಯನ್ನು ಸೇವಿಸಲು ಹೊರಟೆ. ಅಷ್ಟರಲ್ಲಿ ವಾಯುದೇವನ ಆರ್ಭಟ ನಿಂತು ಹೋಯಿತು.

ಕೊಠಡಿಯ ಒಳಕ್ಕೆ ಹಿಂದಿರುಗಿದವನೇ ಕುರ್ಚಿಯ ಮೇಲೆ ಆಸೀನನಾದೆ. ಮೇಜಿನ ಕೆಳಗಿದ್ದ ಪೆಟ್ಟಿಗೆಯನ್ನು ತೆಗೆದು ಔಷಧೋಪ

ಮೂಲ: ಮಲಯಾಳಂ. ಲೇಖಕ: ವೈಕಂ ಮುಹಮ್ಮದ್ ಬಷೀರ್,

ಚಾರ ಎಂಬ ಒಂದು ಪುಸ್ತಕವನ್ನು ಹೊರಕ್ಕೆ ತೆಗೆದುಕೊಂಡೆ. ಮೇಜಿನ ಮೇಲಿದ್ದ ದೀಪ ಮತ್ತು ನಿಲುಗನ್ನಡಿಯ ಬಳಿ ನಿಂತು ಆ ಪುಸ್ತಕವನ್ನು ತೆರೆದೆ. ಒಂದು ಸಣ್ಣ ಬಾಚಣಿಗೆಯೂ ಅದರ ಪಕ್ಕದಲ್ಲಿತ್ತು.

ದೇಹದ ಅಂದಚಂದಗಳನ್ನು ಬಯಸುವ ಯಾವನೊಬ್ಬತಾನೆ ತನ್ನ ಬಳಿ ಇರುವ ಕನ್ನಡಿಯನ್ನು ನೋಡದಿರಲಾರ? ನನಗಂತೂ ನಾನೂ ಸುಂದರವಾಗಿದ್ದೇನೆ ಎಂಬ ನಂಬಿಕೆಯಿಂದ ಕನ್ನಡಿಯಲ್ಲಿ ಒಮ್ಮೆ ನೋಡಿಕೊಂಡೆ. ಅಲ್ಲದೆ ನಾನೊಬ್ಬ ಅವಿವಾಹಿತ ವೈದ್ಯ ಕೂಡ. ಬಾಚಣಿಗೆಯನ್ನು ತೆಗೆದುಕೊಂಡು ಅಸ್ತವ್ಯಸ್ತವಾಗಿದ್ದ ಕೂದಲನ್ನು ಬಾಚಿಕೊಂಡೆ.

ಮತ್ತೆ ಮೇಲಿಂದ ಬುಸ್....ಬುಸ್.... ಶಬ್ದ ಕೇಳಿಸಿತು.

ಕನ್ನಡಿ ಮುಂದೆ ನಿಂತು ನೋಡುತ್ತಿದ್ದಂತೆ ನಾನೊಬ್ಬ ಸುಂದರವಾಗಿ ಕಾಣುವ ಅವಿವಾಹಿತ ತರುಣ ವೈದ್ಯ ಆದ್ದರಿಂದ ನನ್ನ ಸೌಂದರ್ಯ ಮತ್ತಷ್ಟು ಎದ್ದು ಕಾಣುವಂತಾಗಲು ಕನಿಷ್ಟ ನಿತ್ಯವೂ ಕ್ಷೌರ ಮಾಡಿಕೊಳ್ಳುವುದು ಒಳ್ಳೆಯದು ಎಂಬ ತೀರ್ಮಾನಕ್ಕೆ ಬಂದೆ.

ಕನ್ನಡಿಯನ್ನು ನೋಡಿ ನನಗೆ ನಾನೇ ನಕ್ಕೆ. ಅದೊಂದು ಮೋಹಕ ನಗೆ ಎನಿಸಿತು. ನಾನೊಬ್ಬ ಅವಿವಾಹಿತ ತರುಣ ವೈದ್ಯ ಎಂದೆನಲ್ಲವೆ? ನನ್ನ ಮುಖದಲ್ಲಿ ಸದಾ ಈ ಮೋಹಕ ನಗೆ ಇರಲೇಬೇಕು ಎನಿಸಿತು.

ಮತ್ತೆ ಅದೇ ಬುಸ್....ಬುಸ್....ಶಬ್ದ ಮೇಲಿಂದ ಕೇಳಿ ಬಂತು. ನಾನು ಕೊಠಡಿಯಲ್ಲಿ ಮೇಲಕ್ಕೆ ಕೆಳಕ್ಕೆ ಹೆಜ್ಜೆ ಹಾಕುತ್ತ ಬಂದು ಬೀಡಿಯನ್ನು ಒತ್ತಿಸಿದೆ. ಇದ್ದಕ್ಕಿದ್ದಂತೆ ಆಗೇನೋ ನಾನೂ ಮದುವೆಯಾಗಬೇಕೆನಿಸಿತು. ಅದರಲ್ಲೂ ನಾನು ಮದುವೆಯಾಗುವವಳೂ ಒಳ್ಳೆಯ ವೈದ್ಯೆಯಾಗಿದ್ದು, ಹಣವಂತಳಾಗಿರಬೇಕು. ಅವಳು ದಪ್ಪನಾಗಿಯೂ ಇರಬೇಕು ಎನಿಸಿತು. ಅದೂ ಒಂದು ಕಾರಣಕ್ಕಾಗಿ. ಏಕೆಂದರೆ ನಾನೇನಾದರೂ ತಪ್ಪುಮಾಡಿ ಓಡಿದ್ದಾದರೆ ಅವಳಿಗೆ ನನ್ನನ್ನು ಹಿಡಿಯುವುದಕ್ಕೆ ಆಗದಿರಲೆಂದು.

ಈ ಎಲ್ಲ ಯೋಚನೆಗಳೊಂದಿಗೆ ಮೇಜಿನ ಮುಂದಿದ್ದ ಕುರ್ಚಿಯಲ್ಲಿ ಕುಳಿತುಕೊಂಡೆ. ಮೇಲಿಂದ ಅದಾವುದೇ ರೀತಿಯ ಶಬ್ದಗಳು ಕೇಳಿಬರುತ್ತಿರಲಿಲ್ಲ. ಇದ್ದಕಿದ್ದಂತೆ ಸ್ವಲ್ಪ ಸಮಯ ಕಳೆದು ಸಣ್ಣ ಶಬ್ದವಾಯಿತು. ನೆಲದ ಮೇಲೇನಾದರು ಬಿದ್ದಿತೆ .. ಅದರ ಬಗ್ಗೆ ಯೋಚಿಸಬೇಕಾಗಿರಲಿಲ್ಲ. ಹಾಗಿದ್ದರೂ ಸಹ ಒಮ್ಮೆ ಹಾಗೆಯೇ ತಿರುಗಿ ನೋಡಿದೆ. ಹಾಗೆ ನೋಡಿ ತಿರುಗಿದ ಸ್ವಲ್ಪ ಹೊತ್ತಿನಲ್ಲಿಯೇ ಒಂದು ದಪ್ಪವಾದ ಹಾವೊಂದು ಕುರ್ಚಿಯ ಮೇಲೆ ಹರಿದಾಡಿ ನನ್ನ ಭುಜದ ಮೇಲೆ ನಿಂತತಾಯಿತು.

ನಾನು ನೆಗೆಯಲಿಲ್ಲ; ನಡುಗಲೂ ಇಲ್ಲ; ಕೂಗಿಕೊಳ್ಳಲೂ ಇಲ್ಲ. ಹಾಗೆ ಮಾಡುವುದಕ್ಕೂ ನನಗೆ ಸಮಯವಿರಲಿಲ್ಲ. ಹಾವು ಹರಿದಾಡುತ್ತ ನನ್ನ ಎಡತೋಳನ್ನು ಸುತ್ತಿಕೊಂಡಿತು. ತನ್ನ ಹೆಡೆಯನ್ನು ಬಿಚ್ಚಿತು. ನನ್ನ ಮುಖಕ್ಕು ಅದರ ಹೆಡೆಗು ಸುಮಾರು ಮೂರು–ನಾಲ್ಕು ಇಂಚುಗಳಷ್ಟಿರಬೇಕು ಅಷ್ಟೆ!

ನಾನು ಅದೆಷ್ಟು ಹೊತ್ತು ಹಾಗೆಯೆ ಉಸಿರು ಕಟ್ಟಿ ಕುಳಿತಿದ್ದೆನೊ ಕಾಣೆ. ನಾನು ಕಲ್ಲಾಗಿ ಬಿಟ್ಟಿದ್ದೆ. ಆದರೆ ನನ್ನ ಬುದ್ಧಿ

ಮಾತ್ರ ಕ್ರಿಯಾತ್ಮಕವಾಗಿಯೇ ಇತ್ತು. ಕತ್ತಲಲ್ಲಿಯೇ ಒಂದು ಬಾಗಿಲು ತೆರೆದು ಕೊಂಡಿತು, ಕತ್ತಲೆಯೇ ಕೊಠಡಿಯನ್ನೆಲ್ಲ ಆವರಿಸಿ ಬಿಟ್ಟಿತು. ಮಂದ ದೀಪದ ಬೆಳಕಿನಲ್ಲಿ ನನ್ನ ದೇಹದ ಮಾಂಸದ ಮುದ್ದೆಯಲ್ಲ ಕಲ್ಲ ಪ್ರತಿಮೆಯಾದಂತಾಗಿ ಕುರ್ಚಿಯ ಮೇಲೆ ಕುಳಿತುಕೊಂಡಿರುವುದು ಕನ್ನಡಿ ಯಲ್ಲು ಪ್ರತಿಬಿಂಬಿತವಾಯಿತು.

ನನಗೆ ಸೃಷ್ಟಿಕರ್ತನ ಎದುರಿನಲ್ಲಿದ್ದಂಥ ಅನುಭವವಾಯಿತು. ಅಲ್ಲಿ ದೇವರಿದ್ದ. ನಾನು ಏನನ್ನಾದರೂ ಹೇಳಿದ್ದರೆ ಅದನ್ನು ಅವನು ಒಪ್ಪಿರಲಾರ.... 'ಓ....ದೇವರೆ!' ನಾನು ಹೃದಯಪೂರ್ವಕವಾಗಿ ಕೆಲವಷ್ಟು ಪದ ಗಳನ್ನು ಹೇಳಲು ಪ್ರಯತ್ನಿಸಿದೆ........

ನನ್ನ ಎಡತೋಳಿನಲ್ಲಿ ನೋವಿತ್ತು. ಅದು ಮುರಗಟ್ಟಿದ ತುಂಡಿನಂತಾಗಿತ್ತು....ಒಂದು ಪ್ರಕಾಶಮಾನವಾದ ಬೆಳಕು........ನನ್ನ ತೋಳನ್ನು ನಿಧಾನವಾಗಿ ಬಲಬಿಟ್ಟು ಅದುಮಿದಂತಾಯಿತು. ಆ ತೋಳಿನ ಶಕ್ತಿ ಎಲ್ಲವನ್ನೂ ಹುಡುಗಿಸಿಬಿಟ್ಟಂತಾಯಿತು. ನಾನೇನು ಮಾಡಲಿ?

ನಾನು ಸ್ವಲ್ಪ ಅಲುಗಾಡಿದ್ದರಿಂದ ಹಾವು ಕುಟುಕಿದಂತಾಯಿತು....ನಾಲ್ಕು ಇಂಚು ದೂರದಲ್ಲಿ ಸಾವಿದ್ದಂತಾಯಿತು. ಆಕಸ್ಮಿಕ ವಾಗಿ ಅದು ಕಡಿಯಿತು ಎಂದೆ ಇಟ್ಟುಕೊಳ್ಳಿ ನಾನು ಯಾವ ಔಷಧವನ್ನು ತೆಗೆದು ಕೊಳ್ಳಲಿ? ನನ್ನ ಕೊಠಡಿಯಲ್ಲಿ ಯಾವುದೇ ಔಷಧಿಗಳಿಲ್ಲ. ಆದರೆ ನಾನೊಬ್ಬ ಬಡತನ, ದಡ್ಡತನ, ಮೂರ್ಖತನದ ವೈದ್ಯನಾ ಗಿದ್ದೆ....ಎಲ್ಲವನ್ನು ಮರೆತ ನನ್ನ ಆತ್ಮ ದುರ್ಬಲ ನಗುವೊಂದನ್ನು ಮಾತ್ರ ಹೊರ ಸೂಸಿತಷ್ಟೆ.

ದೇವರ ದಯೆಯಿಂದ ಆ ಹಾವು ತನ್ನ ತಲೆಯನ್ನು ತಿರುಗಿಸಿಕೊಂಡಿತು. ಕನ್ನಡಿ ಯನ್ನು ನೋಡಿತು. ತನ್ನ ಪ್ರತಿಬಿಂಬ ವನ್ನು ಗ್ರಹಿಸಿಕೊಂಡಿತು. ಅದೇ ಮೊದಲ ಬಾರಿಗೆ ಹಾವೊಂದು ಕನ್ನಡಿಯನ್ನು ನೋಡಿತು ಎಂದೆನಲ್ಲ. ಖಂಡಿತವಾಗಿಯೂ ಕನ್ನಡಿಯನ್ನು ದೃಷ್ಟಿಸುತ್ತಲೆ ಇತ್ತು. ಅದು ತನ್ನ ಸೌಂದರ್ಯವನ್ನು ತಾನೆ ಹೊಗಳಿಕೊಳ್ಳುತ್ತಿತ್ತೆ? ಅದೇನಾದರೂ ಬೆಳೆಯುವ ತನ್ನ ಮೀಸೆ ಅಥವಾ ತನ್ನ ನೆರಳು ಕಣ್ಣನ್ನು ಉಪಯೋಗಿಸಿಕೊಂಡು ಅಥವಾ ಅದರ ಮುಂದಲೆ ಬಳಿ ಸಿಂಧೂರ ವನ್ನು ಇಟ್ಟುಕೊಳ್ಳುತ್ತಿತ್ತೊ?

ಆ ಹಾವು ಹೆಣ್ಣೊ, ಗಂಡೋ ಯಾವುದೂ ನನಗೆ ತಿಳಿಯದು. ನನ್ನ ತೋಳಿನಿಂದ ತನಗೆ ಯಾವುದೇ ಗಾಯ ಮಾಡಿಕೊಳ್ಳಲಿಲ್ಲ. ಮತ್ತೆ ನನ್ನ ತೋಳಿನ ಮೇಲಿನ ಅಂಗಿಯ ಮಡಿಕೆಯ ಒಳಗೆ ನುಸುಳಿಕೊಂಡಿತು. ಅಲ್ಲಿಂದ ಮೇಜಿನ ಮೇಲೆ ಹರಿದಾಡ ತೊಡ ಗಿತು. ಮತ್ತೆ ಕನ್ನಡಿಯ ಮುಂದೆ ಹೋಯಿತು. ಬಹುಶಃ ಅದು ಹತ್ತಿರದಿಂದ ಕನ್ನಡಿಯಲ್ಲಿ ತನ್ನ ಪ್ರತಿಬಿಂಬವನ್ನು ನೋಡಿಕೊಳ್ಳಲು ಅಪೇಕ್ಷಿಸಿರಬೇಕು.

ಬೆಣಚುಕಲ್ಲನ್ನು ಕತ್ತರಿಸುವುದರ ಬಗ್ಗೆ ನನಗೇನೂ ಕಲ್ಪನೆ ಇಲ್ಲ. ನಾನು ರಕ್ತ ಮಾಂಸ ತುಂಬಿಕೊಂಡ ಮನುಷ್ಯನಲ್ಲವೆ? ನಾನು ಉಸಿರನ್ನು ಹಿಡಿದುಕೊಂಡು ಕುರ್ಚಿ ಯಿಂದ ಎದ್ದೆ. ಬಾಗಿಲ ಮೂಲಕ ವರಾಂಡಕ್ಕೆ ಬಂದೆ. ಅಲ್ಲಿಂದ ಬೀದಿಗೆ ನೆಗೆದೆ. ಅಷ್ಟೇ ಅಲ್ಲ ಓಡಿದೆ.

'ಥೂ!' ನಾವೆಲ್ಲ ನಿಟ್ಟುಸಿರುಬಿಟ್ಟೆವು. ನಾವೆಲ್ಲ ಬೀಡಿ ಹತ್ತಿಸಿದೆವು. ನಮ್ಮಲ್ಲೊಬ್ಬ

ಕೇಳಿದ "ಡಾಕ್ಟರೆ, ನಿಮ್ಮ ಹೆಂಡತಿ ಏನಾದರೂ ದಪ್ಪಗಿದ್ದಾರೆಯೆ?"

"ಇಲ್ಲ" ಡಾಕ್ಟರ್ ಹೇಳಿದರು. ದೇವರ ದಯೆ, ನನ್ನ ಬಾಳಸಂಗಾತಿ ತೆಳುವಾಗಿಯೂ ಶೀಘ್ರವಾಗಿ ನಡೆವವಳಿದ್ದಳು.

"ಡಾಕ್ಟರೆ ಯಾವಾಗ ನೀವು ಓಡಿದಿರಿ? ಹಾವೇನಾದರೂ ನಿಮ್ಮನ್ನು ಹಿಂಬಾಲಿಸಿತೆ?" ಮತ್ತೊಬ್ಬ ವ್ಯಕ್ತಿ ಕೇಳಿದ.

ನಾನು ಓಡಿದೆ....ಓಡಿದೆ ನನ್ನ ಸ್ನೇಹಿತನ ಮನೆ ಸಿಗುವವರೆಗೂ; ತಕ್ಷಣ ಹೋಗಿ ಎಣ್ಣೆನೀರು ಹಾಕಿಕೊಂಡೆ, ಬಟ್ಟೆಗಳನ್ನು ಬದಲಾಯಿಸಿಕೊಂಡೆ. ಮಾರನೆಯ ದಿನ ಬೆಳಗ್ಗೆ ಎಂಟೂವರೆ ಗಂಟೆಯ ಹೊತ್ತಿಗೆ ನನ್ನ ಸ್ನೇಹಿತರಿಬ್ಬರನ್ನು ಕರೆತಂದು ಅಲ್ಲಿಂದ ನನ್ನ ವಸ್ತುಗಳನ್ನೆಲ್ಲ ವರ್ಗಾಯಿಸಿದೆ. ಆದರೆ ನಾವು ಇನ್ನಷ್ಟು ಸಾಮಾನುಗಳನ್ನು ಸಾಗಿಸಬೇಕಿತ್ತು. ಆಗಷ್ಟೆ ತಿಳಿಯಿತು. ಯಾರೊ ಕಳ್ಳರು ಕೆಲವಷ್ಟು ಸಾಮಾನುಗಳನ್ನು ಅಪಹರಿಸಿರುವುದು. ಕೊಠಡಿ ಬರಿದಾಯಿತು! ಇಲ್ಲ ಸಮಾಜಘಾತಕ ಕಳ್ಳನಾವನೊ ಅವಮಾನದ ಕಿರೀಟ ಎಂಬಂತೆ ಒಂದನ್ನು ಮಾತ್ರ ಹಿಂದೆ ಬಿಟ್ಟು ಹೋಗಿದ್ದ.

'ಏನದು?' ನಾನು ಕೇಳಿದೆ.

ಆ ವೈದ್ಯರು ಹೇಳಿದರು "ನನ್ನ ಜುಬ್ಬ, ಕೊಳಕಾದುದು. ಶುಚಿತ್ವದ ಪ್ರಜ್ಞೆಯುಳ್ಳವರಾರೊ ಮುಠ್ಠಾಳರು ತೊಳೆದು ಉಪಯೋಗಿಸಲು ತೆಗೆದುಕೊಂಡು ಹೋಗಿದ್ದಿರಬೇಕು?"

"ಡಾಕ್ಟರೆ ಮಾರನೆಯ ದಿನ ಮತ್ತೇನಾದರು ಆ ಹಾವನ್ನು ನೋಡಿದಿರಾ?"

"ನಾನು ಅದನ್ನು ಈಗಲೂ ನೋಡಿದೆ ಅದೊಂದು ಸೌಂದರ್ಯದ ಹಾವು" ಎಂದು ನಕ್ಕು ನುಡಿದರು ಡಾಕ್ಟರ್.



ಬಾಲ್ಯದಲ್ಲಿ ವಿದ್ಯೆ ಕಲಿಯಬೇಕು. ಯೌವನದಲ್ಲಿ ಜ್ಞಾನೋಪಯೋಗದಿಂದ ಜೀವನ ಮಾರ್ಗವನ್ನು ಕಂಡುಕೊಳ್ಳಬೇಕು. ಪ್ರೌಢಾವಸ್ಥೆಯಲ್ಲಿ ಪುಣ್ಯ ಸಂಪಾದನೆ ಮಾಡಬೇಕು. ಮುಪ್ಪಿನಲ್ಲಿ ಹಿಂದಿನ ಮೂರು ಅವಸ್ಥೆಗಳ ಮೆಲುಕು ಹಾಕುತ್ತಾ ದೇವರನ್ನು ಸ್ಮರಿಸಿಕೊಂಡು ನೆಮ್ಮದಿಯಿಂದ ಇರಬೇಕು.

—ಚಾಣಕ್ಯ

ಕೈಗಾರಿಕೆಯ ವಿಕಾಸ: ಅರ್ಥಶಾಸ್ತ್ರೀಯ ದೃಷ್ಟಿ

ಸಿ. ನಾಗಣ್ಣ

ಬದುಕಿಗಾಗಿ ಮನುಷ್ಯ ಮಾಡಿದ ಪ್ರಯತ್ನಗಳ ಬೇರೆ ಬೇರೆ ಘಟ್ಟಗಳನ್ನು ಅಧ್ಯಯನ ಮಾಡುವುದು ನಿಜಕ್ಕೂ ಕುತೂಹಲದ ಸಂಗತಿ. ಈ ಪ್ರಯತ್ನಗಳು ಮನುಷ್ಯನ ಹುಟ್ಟಿನ ಜೊತೆಯಲ್ಲೇ ಜನ್ಮ ತಾಳಿದಂಥವು. ಆದಿಮಾನವನ ಬಯಕೆಗಳು ಅತ್ಯಂತ ಕಡಿಮೆಯಿದ್ದು ನಿಸರ್ಗ ನೀಡಿದ ಫಲಗಳಿಂದಲೇ ಅವನು ತೃಪ್ತನಾಗುತ್ತಿದ್ದ. ಬೇಟೆಯಾಡುವುದರಿಂದ ಮತ್ತು ಮೀನು ಹಿಡಿಯುವುದರಿಂದ ಅವನ ಹೊಟ್ಟೆಬಟ್ಟೆಗೆ ಸಾಕಾಗುತ್ತಿತ್ತು. ಕ್ರಮೇಣ ನಿಸರ್ಗದ ಕೊಡುಗೆಗಳಿಗೂ ಕೊನೆಯೆಂಬುದು ಇದೆ ಎಂದು ಅವನ ಅರಿವಿಗೆ ಬಂದು ಆಹಾರದ ಬೇರೆ ಮೂಲವನ್ನು ಹುಡುಕಿಕೊಳ್ಳುವ ಪ್ರಕ್ರಿಯೆಯಲ್ಲಿ ಪ್ರಾಣಿಗಳನ್ನು ಪಳಗಿಸಿ ಅವುಗಳ ಸಂತತಿಯನ್ನು ಹೆಚ್ಚಿಸಲು ಮುಂದಾದ. ಈ ರೀತಿಯಾಗಿ ಮನುಷ್ಯ ಪಶುಪಾಲನಾ ಘಟ್ಟಕ್ಕೆ ಕಾಲಿರಿಸಿದನೆನ್ನಬಹುದು. ಈ ಘಟ್ಟದಲ್ಲಿ ಮಾನವನಿಗೆ ಹೆಚ್ಚು ನೆಮ್ಮದಿ, ಭದ್ರತೆ ದೊರಕಿತಲ್ಲದೆ ಇಂದಿಗೆ ಹೇಗೊ ನಾಳೆಗೆ ಹೇಗೊ ಎನ್ನುವ ಆತಂಕ ಕಡಿಮೆಯಾಯಿತು. ಇದರ ನಂತರದಲ್ಲಿ ಪ್ರಾಣಿಗಳನ್ನು ಸಾಕುವುದರ ಜೊತೆಗೆ ಕೃಷಿಯನ್ನು ಕಲಿತ. ಇದನ್ನು ನಾವು "ಕೃಷಿಕ ಘಟ್ಟ"ವೆಂದು ಗುರುತಿಸಬಹುದು. ಕೃಷಿ ಪ್ರಾರಂಭಿಸಿದ ನಂತರ ಮನುಷ್ಯ ಒಂದು ಕಡೆ ನೆಲೆ ನಿಲ್ಲಬೇಕಾದದ್ದು ಅನಿವಾರ್ಯವಾಯಿತು. ಅಲ್ಲಿಗೆ ಅವನ ಅಲೆಮಾರಿ ಬದುಕು ಹೆಚ್ಚೂ ಕಡಿಮೆ ಕೊನೆಯಾಯಿತೆಂದು ಪರಿಗಣಿಸಬಹುದು. ನಿಸರ್ಗವನ್ನು ನಿಯಂತ್ರಿಸುವ ಕಾರ್ಯದಲ್ಲಿ ಅವನು ಇಲ್ಲಿಂದ ತೊಡಗುತ್ತಾನೆ. ತನಗೆ ಅಗತ್ಯವಾದ ಸಾಧನ–ಸಲಕರಣೆಗಳನ್ನು ಮಾಡಿಕೊಂಡು ಹೆಚ್ಚು ನಿಯತವಾದ ದುಡಿಮೆಗೆ ತೊಡಗಿದ ಮಾನವ ಒಂದು ಗೊತ್ತಾದ ಜಾಗಕ್ಕೆ ಅಂಟಿಕೊಳ್ಳುವ ಪರಿಪಾಠ ಬೆಳೆಸಿಕೊಂಡದರ ಫಲವಾಗಿ ಸಾಮಾಜಿಕ ಸಂಪರ್ಕವನ್ನು ಏರ್ಪಡಿಸಿಕೊಂಡ. ತನ್ನ ಅಗತ್ಯಗಳನ್ನು ಪೂರೈಸಲಷ್ಟೇ ಈಗ ಅವನು ಉತ್ಪಾದನೆಗೆ ಇಳಿಯಲಿಲ್ಲ. ಇತರರು ಉತ್ಪಾದಿಸಿದ

ಮೂಲ: ಎಸ್. ಎನ್. ವೀರರಾಘವಾಚಾರ್ ಮತ್ತು ಟಿ. ಎಸ್. ನಾರಾಯಣರಾವ್ ಅವರು ರಚಿಸಿರುವ "ಮಾಡರ್ನ್ "ಇಂಡಸ್ಟ್ರಿ" ಎಂಬ ಗ್ರಂಥದ 'ಇಂಡಸ್ಟ್ರಿಯಲ್ ಎನಲೈಸಿಸ್' ಅಧ್ಯಾಯ.

ಸಾಮಗ್ರಿಗಳನ್ನು ಕೊಳ್ಳಲು ತನ್ನ ಉತ್ಪಾದನೆಯನ್ನು ಅವರಿಗೆ ಕೊಡುವಂಥ ಏರ್ಪಾಟು ಮಾಡಿಕೊಂಡ.

ಹನ್ನೊಂದನೇ ಶತಮಾನದ ವೇಳೆಗೆ ಕೃಷಿಕ ಇಂಗ್ಲೆಂಡಿನಲ್ಲಿ "ಮೇನರ್"ಗಳೆಂದು ಕರೆಯಿಸಿಕೊಳ್ಳುವ ಶ್ರೀಮಂತರ ಆಸ್ತಿ ವಲಯಗಳು ತಲೆಯೆತ್ತಿದವು. ರಚನೆ ಮತ್ತು ವಿಸ್ತೀರ್ಣದಲ್ಲಿ ಈ ಕ್ಷೇತ್ರಗಳಲ್ಲಿ ವ್ಯತ್ಯಾಸ ವಿದ್ದಿತು. ಸ್ವಸಂಪನ್ನತೆ ಈ ಮೇನರ್‌ಗಳ ಆದರ್ಶವಾಗಿದ್ದರಿಂದ ಕಡ್ಡಾಯವಾದ ಶ್ರಮ ಸೇವೆಯ ಕಡೆ ಹೆಚ್ಚು ಗಮನ ಹರಿಸು ತ್ತಿದ್ದರು. ಹದಿನಾಲ್ಕನೇ ಶತಮಾನದ ವೇಳೆಗೆ ಈ "ಮೇನರ್" ಪದ್ಧತಿ ಶಿಥಿಲ ಗೊಂಡು ಕಡ್ಡಾಯ ಶ್ರಮಸೇವೆಯು ಹಣಕ್ಕೋಸ್ಕರ ದುಡಿಮೆಯೆಂಬುದಾಗಿ ಪರಿವರ್ತನೆಗೊಂಡಿತು. ಇಂಗ್ಲೆಂಡಿನಲ್ಲಿ ತಲೆ ದೋರಿದ "ಕಪ್ಪುಸಾವು" ಎಂದು ಕರೆಯಿಸಿ ಕೊಳ್ಳುವ ಪ್ಲೇಗಿನ ಮಾರಿ ಎರಗಿದಾಗ ಈ ಪದ್ಧತಿಗೆ ಕೊಡಲಿಪೆಟ್ಟು ಬಿದ್ದಿತು. ಈ ಪದ್ಧತಿಯು ಇಳಿಮುಖವಾಗುತ್ತಿದ್ದ ಹಾಗೆಯೇ ಕುರಿಸಾಕಣೆ ಮತ್ತು ಉಣ್ಣೆ ಕೈಗಾರಿಕೆ ಪ್ರಾರಂಭವಾಯಿತು. "ಮೇನೊರಿಯಲ್ ಪದ್ಧತಿ" ತಪ್ಪಿಹೋಗಿ ದುಡಿಮೆಗೆ ಹಣ ದೊರಕುವುದು ನಿಶ್ಚಯವಾದಾಗ ಜನರಿಗೆ ಹಣದ ವ್ಯವಹಾರ ಹೆಚ್ಚು ಬಳಕೆಗೆ ಬಂದು ಕೈಗಾರಿಕೆಗೆ ಅಧಿಕವಾದ ಚಾಲನೆ ದೊರೆಯಿತು. ಹಾಗಾಗಿ ಕೈಗಾರಿಕಾ ಬೆಳವಣಿಗೆ ಮತ್ತು ಪಟ್ಟಣಗಳ ಬೆಳವಣಿಗೆ ಎರಡೂ ಏಕಕಾಲದಲ್ಲಿ ಸಾಕಾಗುವಂತಾಯಿತು.

"ಮೆನೋರಿಯಲ್ ಪದ್ಧತಿ"ಯಲ್ಲಿ ಕೃಷಿ ಪ್ರಧಾನವಾಗಿತ್ತಾದರೂ ಅದಕ್ಕೂಮೊದಲು ಕೈಗಾರಿಕೆಯ "ಕುಟುಂಬ ಪದ್ಧತಿ" ಎಂಬ ವ್ಯವಸ್ಥೆಯ ಮೂಲಕ ಮುಂದಿನ ಘಟ್ಟದ ತಳಪಾಯ ನಿರ್ಮಾಣವಾಯಿತು. ಕುಟುಂಬ ವೊಂದು ಪ್ರಮುಖವಾಗಿ ಭೂಮಿ ಕೃಷಿಯಲ್ಲಿ ತೊಡಗಿರುತ್ತಿತ್ತಾದರೂ, ಅದರ ಜೊತೆಗೆ ಬಟ್ಟೆ ನೇಯುವ, ದೋಣಿ ನಿರ್ಮಾಣ, ಸಾಧನ ಸಲಕರಣೆಗಳು ಮತ್ತು ಪೀಠೋಪಕರಣಗಳನ್ನು ತಯಾರಿಸುವುದರಲ್ಲೂ ತೊಡಗಿರುತ್ತಿತ್ತು. ಪ್ರತಿಯೊಂದು ಕುಟುಂಬವೂ ತನ್ನ ಬಯಕೆಗಳನ್ನು ಈಡೇರಿಸಿಕೊಳ್ಳುತ್ತಿತ್ತು. ಕುಟುಂಬವು ಒಟ್ಟಾರೆ ಸ್ವಸಂಪನ್ನವಾಗಿದ್ದರೂ ಕುಟುಂಬದ ಸದಸ್ಯರು ಮಾತ್ರ ಬೇರೆ ಬೇರೆ ಕಸುಬುಗಳಲ್ಲಿ ಪರಿಣತರಾಗಿರುತ್ತಿದ್ದರು. ಒಬ್ಬ ನೂಲುವುದರಲ್ಲಿ ಪ್ರವೀಣನಾದರೆ, ಇನ್ನೊಬ್ಬ ನೇಯುವುದರಲ್ಲಿ ಕುಶಲಿ, ಮತ್ತೊಬ್ಬ ಮರಗೆಲಸದಲ್ಲಿ ಕೌಶಲ್ಯ ತೋರಿದರೆ ಮಗದೊಬ್ಬ ದೋಣಿ ನಿರ್ಮಾಣದಲ್ಲಿ ಪಳಗಿರುತ್ತಿದ್ದ. ಆದಾಗ್ಯೂ ಅವರು ಉಪಯೋಗಿಸುತ್ತಿದ್ದ ಸಾಧನ ಸಲಕರಣೆಗಳು ಕೊಂಚ ಸರಳವೂ ಒರಟೂ ಆಗಿದ್ದು ಎಲ್ಲಾ ಕೆಲಸವನ್ನು ಅವರು ಕೈಯಲ್ಲೇ ಮಾಡುತ್ತಿದ್ದರು. ಸಹಜವಾಗಿಯೇ ಅವರು ಉತ್ಪಾದಿಸುತ್ತಿದ್ದ ಪ್ರಮಾಣ ತೀರಾ ಕಡಿಮೆಯಿದ್ದಿತು.

ಗಿಲ್ಡ್ ಪದ್ಧತಿ : ಪ್ರಾರಂಭದಲ್ಲಿ ಒಬ್ಬ ಕಸುಬುದಾರನಿಗೂ ಇನ್ನೊಬ್ಬ ಕಸುಬುದಾರನಿಗೂ ಸಹಕಾರವಿರುತ್ತಿರಲಿಲ್ಲ; ಆದರೆ ಕಾಲಕ್ರಮೇಣ ಕುಶಲಕರ್ಮಿಗಳು ಮತ್ತು ವ್ಯಾಪಾರಿಗಳು "ವ್ಯಾಪಾರೀ ಸಮೂಹ" ಎಂಬಂಥ ಒಂದು ಸಂಘವನ್ನು ಸ್ಥಾಪಿಸಿಕೊಂಡು ಪರಸ್ಪರ ಹಿತ ಕಾಯ್ದುಕೊಳ್ಳಲು

ಮುಂದಾದರು. ಹೊರಗಿನವರ ಸ್ಪರ್ಧೆಯನ್ನು ತಡೆಗಟ್ಟುವ ಪ್ರಧಾನಗುರಿಯ ಜೊತೆಗೆ ಈ ಗಿಲ್ಡ್ ಅಥವಾ 'ಕುಶಲರ ಸಂಘಗಳು' ಕೊಳ್ಳುವ ಮತ್ತು ಮಾರುವ ವಹಿವಾಟನ್ನೂ ನಿಭಾಯಿಸುತ್ತಿದ್ದವು. 'ಮೆನೋರಿಯಲ್ ಪದ್ಧತಿ' ಕ್ಷೀಣವಾಗಿ ಪಟ್ಟಣ ಜೀವನ ಬಳಕೆಯಾದಾಗ ಕುಶಲ ಕರ್ಮಿಗಳ ಸಂಖ್ಯೆ ಹೆಚ್ಚಾಯಿತಲ್ಲದೆ ಹದಿನಾಲ್ಕನೇ ಶತಮಾನದ ಕೊನೆಯ ಹೊತ್ತಿಗೆ 'ಗಿಲ್ಡ್ ಪದ್ಧತಿ'ಯೇ ಕೈಗಾರಿಕೆಯ ಒಂದು ಮುಖ್ಯ ಲಕ್ಷಣವಾಗಿ ಒಡೆದು ಕಾಣತೊಡಗಿತು. ಈ ಕಾಲವನ್ನು ನಾವು "ಕರಕುಶಲ ಕೈಗಾರಿಕೆ"ಯ ಕಾಲವೆಂದು ಕರೆಯಬಹುದು. "ಕರಕುಶಲ" ಘಟ್ಟದಲ್ಲಿ ಕುಟುಂಬವು ಸಂಪೂರ್ಣ ಸ್ವಾವಲಂಬನೆಯನ್ನು ಸಾಧಿಸದೆ ಕೆಲವು ವಲಯಗಳಲ್ಲಿ ಪರಿಣತಿ ಗಳಿಸಿ, ಉಳಿದ ಅಗತ್ಯತೆಗಳಿಗೆ ಬೇರೆ ಕುಟುಂಬಗಳ ಮೇಲೆ ಅವಲಂಬಿಸುವ ಪರಿಪಾಠವಾಯಿತು. ಹಾಗಾಗಿ ಒಂದು ಕುಟುಂಬ ಕೃಷಿಕ ಕುಟುಂಬವಾಗಿದ್ದರೆ, ಇನ್ನೊಂದು ಬಟ್ಟೆ ತಯಾರಿಸುವುದರಲ್ಲಿ ಮತ್ತೊಂದು ಕುಟುಂಬ ಮರಗೆಲಸದಲ್ಲಿ ಮುಂದುವರಿದಿರುತ್ತಿತ್ತು.

ಒಂದೇ ಕುಟುಂಬದ ಒಳಗಡೆ ಒಬ್ಬೊಬ್ಬ ಸದಸ್ಯರು ಒಂದೊಂದು ಕೌಶಲ್ಯದಲ್ಲಿ ನಿಪುಣರಾಗಿರುತ್ತಿದ್ದರು. ಪ್ರಾಯಶಃ ನೂಲುವ ಕೆಲಸ ಮಹಿಳೆಯರಿಗೂ, ನೇಯುವ ಕಾರ್ಯ ಪುರುಷರಿಗೂ ವಿತರಣೆಯಾಗಿರಬಹುದು. ಮೊದಲೇ ಹೇಳಿದ ಹಾಗೆ ಬಹುತೇಕ ಕೆಲಸವನ್ನು ಕೈಯ್ಯಲ್ಲೇ ಮಾಡುತ್ತಿದ್ದರು; ಸಾಧನಸಲಕರಣೆಗಳು ಸರಳವಾಗಿದ್ದವು; ಆದರೆ ವಿಶೇಷಜ್ಞಾನ ಹೆಚ್ಚಿದಂತೆಲ್ಲಾ "ಕುಟುಂಬ ಘಟ್ಟ"ಕ್ಕಿಂತ ಅಧಿಕವಾದ ಉತ್ಪಾದನೆಯಾಗತೊಡಗಿತು, ಅಂತೆಯೇ ಉತ್ಪಾದನಾ ವೇಗವೂ ಹೆಚ್ಚಾಯಿತು. ಈ ಘಟ್ಟದಲ್ಲಿಯೇ ಕುಶಲಕರ್ಮಿಗಳು ತಮ್ಮ ಪರಸ್ಪರ ಹಿತ ಕಾಯ್ದುಕೊಳ್ಳುವ ಸಲುವಾಗಿ ಮತ್ತು ಪದಾರ್ಥಗಳ ಬೆಲೆ ಮತ್ತು ಗುಣಮಟ್ಟವನ್ನು ನಿಯತಗೊಳಿಸಲು "ಕುಶಲಕರ್ಮಿಗಳ ಸಮೂಹ"ವನ್ನು ಸ್ಥಾಪಿಸಿಕೊಂಡದ್ದು. ತಾವು ಕಲಿತ ವಿದ್ಯೆಯನ್ನು ಇತರರಿಗೆ ಹೇಳಿಕೊಡಲು ಶಿಷ್ಯರನ್ನು ತಯಾರುಮಾಡಬೇಕಾದ ಅಗತ್ಯವನ್ನು ಅವರು ಮನಗಂಡದ್ದು ಈ ಅವಧಿಯಲ್ಲಿಯೇ.

ಕೌಟುಂಬಿಕ ಘಟ್ಟ : ಹದಿನೆಂಟನೇ ಶತಮಾನದಲ್ಲಿ "ಗಿಲ್ಡ್ ಪದ್ಧತಿ" ಕೊನೆಯಾಯಿತಾದರೂ ಅದಕ್ಕೆ ಬಹಳ ಮೊದಲೇ "ಕೌಟುಂಬಿಕ ಪದ್ಧತಿ" ರೂಢಿಗೆ ಬಂದಿತ್ತು. ಈ ಘಟ್ಟದಲ್ಲಿಯೇ ನಾವು 'ಮಧ್ಯವರ್ತಿ'ಯ ಉದಯವನ್ನು ಗಮನಿಸುವುದು. ಸಣ್ಣಪುಟ್ಟ ಕೌಟುಂಬಿಕ ಕಾರ್ಯಾಗಾರಗಳಲ್ಲೇ ಉತ್ಪಾದನಾ ಕಾರ್ಯ ಮುಂದುವರಿದಿತ್ತಾದರೂ ಮಾರುಕಟ್ಟೆಗಳು ಬೆಳೆದಿದ್ದ ಪರಿಣಾಮವಾಗಿ ಉತ್ಪಾದಿಸುವವ ಮತ್ತು ಕೊಳ್ಳುವವನ ನಡುವೆ ಒಬ್ಬ ಮಧ್ಯವರ್ತಿಯ ಅವಶ್ಯಕತೆ ತಲೆದೋರಿತು. ವ್ಯಾಪಾರಿಗೆ ಕುಶಲ ಕರ್ಮಿಯಿಂದ ನಿಯತವಾಗಿ ಪದಾರ್ಥಗಳು ಸರಬರಾಜಾಗುತ್ತಿರಲಿಲ್ಲ, ಹಾಗೂ ತನ್ನ ಪದಾರ್ಥಗಳಿಗೆ ಕ್ರಮಬದ್ಧವಾಗಿ ಬೇಡಿಕೆಯೂ ಇರುತ್ತಿರಲಿಲ್ಲ; ಇದರಿಂದ ಎಷ್ಟೋ ವೇಳೆ ಅವನು ಕೆಲಸವಿಲ್ಲದೇ ಇರಬೇಕಾಗಿತ್ತು. ಅಂತೆಯೇ ಕೆಲವು ಮಂದಿ ವ್ಯಾಪಾರಿಗಳು, ವಿಶೇಷವಾಗಿ

ಜವಳಿ ಕೈಗಾರಿಕೆಯಲ್ಲಿ ಒಂದು ಯೋಜನೆಯನ್ನು ಹಾಕಿಕೊಂಡು. ಒಬ್ಬ ವ್ಯಾಪಾರಿ ಕಚ್ಚಾ ಉಣ್ಣೆಯನ್ನು ದಾರ ತಯಾರಿಸುವವರಿಗೆ ಮತ್ತು ಸ್ವಚ್ಛಗೊಳಿಸುವವರಿಗೆ ಕೊಡುತ್ತಾನೆ; ಸ್ವಚ್ಛವಾದ ಉಣ್ಣೆ ನೂಲುವವರಿಗೆ ಹೋಗುತ್ತದೆ, ಅಲ್ಲಿಂದ ನೇಯುವವರಿಗೆ, ನೇಯುವವರಿಂದ ಅಂತಿಮವಾಗಿ ವ್ಯಾಪಾರಿ ಬಟ್ಟೆಯನ್ನು ಕೊಂಡುಕೊಳ್ಳುತ್ತಾನೆ. ಪ್ರತಿ ಹಂತದಲ್ಲಿಯೂ ಕುಶಲಕರ್ಮಿ ತನ್ನ ಭಾಗಕ್ಕೆ ಒಪ್ಪಿಸಿದ ಕೆಲಸವನ್ನು ಗೊತ್ತಾದ ಗಡುವಿನೊಳಗೆ ಮುಗಿಸಿಕೊಟ್ಟು ತನಗೆ ಸಲ್ಲಬೇಕಾದ ಹಣವನ್ನು ಪಡೆಯುತ್ತಾನೆ. ಈ ಪದ್ಧತಿಯನ್ನೇ "ಕೌಟುಂಬಿಕ ಪದ್ಧತಿ" ಎಂದು ಕರೆಯುವುದು. ಕೆಲವು ದೃಷ್ಟಿಕೋನಗಳಿಂದ ಈ ವ್ಯವಸ್ಥೆ ವ್ಯಾಪಾರಿ ಮತ್ತು ಕುಶಲಕರ್ಮಿ ಇಬ್ಬರಿಗೂ ಅನುಕೂಲಕರವಾಗಿತ್ತು. ಪದಾರ್ಥಗಳು ವ್ಯಾಪಾರಿಗೆ ನಿಯತವಾಗಿ ಸರಬರಾಜಾಗುತ್ತಿದ್ದವು; ಕುಶಲಕರ್ಮಿಗೂ ನಿರಂತರವಾಗಿ ಕೆಲಸ ದೊರಕಿತ್ತಲ್ಲದೆ ಮಾರುವ ಜಂಜಾಟಕ್ಕೆ ಅವನು ಸಿಲುಕಬೇಕಾಗಿರಲಿಲ್ಲ. ಆದರೆ ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡು ವ್ಯಾಪಾರಿಯ ಮೇಲೆ ಕುಶಕರ್ಮಿಗಳು ಅವಲಂಬಿಸಬೇಕಾದ ಪರಿಸ್ಥಿತಿ ಉಂಟಾಯಿತಲ್ಲದೆ ಒಂದು ಗೊತ್ತಾದ ಗಡುವಿನೊಳಗೇ ತಮ್ಮ ಕೆಲಸವನ್ನು ಮಾಡಿ ಮುಗಿಸಬೇಕಾದ ಒತ್ತಡವನ್ನು ಎದುರಿಸುವಂತಾಯಿತು. ಕೊಟ್ಟ ಕೆಲಸವನ್ನು ಕುಶಲಕರ್ಮಿಗಳು ಗಡುವಿನೊಳಗೇ ಮಾಡಿ ಮುಗಿಸಿದ ಸಂದರ್ಭಗಳಲ್ಲಿ ವ್ಯಾಪಾರಿಯು ಮನೆಯಿಂದ ಮನೆಗೆ ಅಲೆದು ಕೆಲಸ ಎಲ್ಲಿಯವರೆಗೆ ಬಂದಿತೆಂದು ಪದೇ ಪದೇ ಆತಂಕಕ್ಕೊಳಗಾಗುವ ಪ್ರಮೇಯವೇರ್ಪಟ್ಟಿತು. ಹಾಗಾಗಿ ಕೆಲವು ವ್ಯಾಪಾರಿಗಳು ಕುಶಲಕರ್ಮಿಗಳನ್ನು ಒಂದೇ ಸೂರಡಿಯಲ್ಲಿಟ್ಟು ಕೆಲಸ ತೆಗೆಯುವ ಪ್ರಯತ್ನ ಮಾಡಿದರು. ಈ ಒಂದೇ ಜಾಗವನ್ನು ನಾವು 'ಕಾರ್ಖಾನೆ' ಎನ್ನುವುದು.

ಕೈಗಾರಿಕಾ ಕ್ರಾಂತಿ ಮತ್ತು ಕಾರ್ಖಾನಾ ಪದ್ಧತಿ: ಯಂತ್ರಗಳ ಬಳಕೆಯಿಂದ ಪ್ರಾರಂಭವಾದ ಕೈಗಾರಿಕಾ ಕ್ರಾಂತಿ ಜೇಮ್ಸ್ ವ್ಯಾಟ್ ಕಂಡುಹಿಡಿದ ಹಬೆಯಂತ್ರದ ಪರಿಣಾಮವಾಗಿ ಇದರ ಗತಿ ಬಹಳ ಚುರುಕುಗೊಂಡಿತು ಎನ್ನಬೇಕು. ಇದರ ಜೊತೆಗೆ ವಿಪುಲವಾಗಿ ನಡೆದ ಶೋಧನೆ ಮತ್ತು ನವಕಲ್ಪನೆಗಳಿಂದಾಗಿ ಕೈಗಾರಿಕೆಯ ರೀತಿಯೇ ಬದಲಾಯಿತಲ್ಲದೆ ಸಾಗಣೆ ಮತ್ತು ಕೃಷಿಕ್ಷೇತ್ರಗಳಲ್ಲಿ ಅದ್ಭುತವಾದ ಬೆಳವಣಿಗೆಯಾಯಿತು. ಉತ್ಪಾದನಾ ಸಾಮರ್ಥ್ಯದಲ್ಲಿ ಆದ ತ್ವರಿತವಾದ ಈ ಬೆಳವಣಿಗೆಯ ಪರಿಣಾಮವಾಗಿ ಆರ್ಥಿಕ ಸಂಘಟನೆಯ ರಚನೆಯಲ್ಲಿ ಪ್ರಮುಖವಾದ ಬದಲಾವಣೆಗಳು ಕಾಣಿಸಿಕೊಂಡವು. ಮನೆಯಿಂದ ಕಾರ್ಖಾನೆಗೆ, ಹಾಗೂ ಕಾರ್ಖಾನೆಯಿಂದ ಪಟ್ಟಣಕ್ಕೆ ಚಲನೆ ಕಂಡುಬಂದಿತಲ್ಲದೆ ಬೃಹತ್ ಪ್ರಮಾಣದ ಆಧುನಿಕ ಕೈಗಾರಿಕೆ ತಲೆಯೆತ್ತಿತು. ಕೈಗಾರಿಕಾ ಸಂಘಟನೆ ಮತ್ತು ವಿಧಾನಗಳಲ್ಲಿ ಆಮೂಲಾಗ್ರ ಬದಲಾವಣೆಯಾಯಿತು. ವಿದ್ಯುತ್ತು ಮತ್ತು ಯಂತ್ರಗಳ ಬಳಕೆ ವಿಪುಲವಾಗಿ ಆಗಿ ಉತ್ಪಾದನಾ ಪ್ರಮಾಣ ಅಧಿಕಗೊಂಡಿತು. ಉತ್ಪಾದನೆ ಎಂಬುದು ಕೇವಲ ಸ್ಥಳೀಯ ಮಾರುಕಟ್ಟೆಗೆ ಎಂಬ ಪರಿಕಲ್ಪನೆ ಹೋಗಿ ಅದು ಎಲ್ಲೆಯಿಲ್ಲದ ಮಾರುಕಟ್ಟೆಗೆ ಎಂದಾಯಿತು. ಆಧುನಿಕ ಕೈಗಾರಿಕೆ

ಅಸಂಖ್ಯಾತ ಮಂದಿಯನ್ನು ಒಳಗೊಂಡ ಬೃಹತ್‌ಪ್ರಮಾಣದ ಒಂದು ವಹಿವಾಟು. ಅನೇಕ ಪದಾರ್ಥಗಳ ಉತ್ಪಾದನೆಯಲ್ಲಿ ತೊಡಗಿರುತ್ತಾ, ಜಗತ್ತಿನ ಬೇರೆ ಬೇರೆ ಭಾಗಗಳಿಗೆ ವ್ಯಾಪಿಸಿ, ಮಿತಿಯರಿಯದ ಭೂಮಿ ಮತ್ತು ಧನಸಂಪನ್ಮೂಲವನ್ನು ಹೊಂದಿರುವುದೇ ಆಧುನಿಕ ಕೈಗಾರಿಕೆಯ ಮುಖ್ಯ ಲಕ್ಷಣ. ಹೆಚ್ಚಿನ ಪ್ರಮಾಣದ ಕಾರ್ಮಿಕರನ್ನು ಮತ್ತು ಯಂತ್ರಗಳನ್ನು ಆಧುನಿಕ ಕೈಗಾರಿಕೆ ಹೊಂದಿರುವ ಕಾರಣ "ಕಾರ್ಖಾನಾ ಪದ್ಧತಿ" ಅನಿವಾರ್ಯವಾಗಿದೆ. ಕೈಗಾರಿಕಾ ವಿಕಾಸದಲ್ಲಿ ಇದನ್ನೇ ನಾವು "ಕಾರ್ಖಾನಾ ಘಟ್ಟ" ಎಂದು ಕರೆಯುವುದು. ಆಧುನಿಕ ಕೈಗಾರಿಕಾ ಸಂಘಟನೆಯ ಪ್ರಮುಖ ಲಕ್ಷಣಗಳನ್ನು ತಿಳಿಯುವಾಗ ಅಧಿಕ ಪ್ರಮಾಣದ ಯಂತ್ರಗಳ ಬಳಕೆ, ವಿಶೇಷಜ್ಞತೆಯ ಬೆಳವಣಿಗೆ, ಅತ್ಯಧಿಕ ಪ್ರಮಾಣದ ಉತ್ಪಾದನೆ, ಕಾರ್ಖಾನಾ ವಿಧಾನವನ್ನು ನಾವು ಪರಿಗಣಿಸುವಂತೆಯೇ ಕಾರ್ಮಿಕನ ಸ್ವಾತಂತ್ರ್ಯಕ್ಕೆ ಒದಗಿದ ನಷ್ಟವನ್ನು ನಾವು ಗಮನಕ್ಕೆ ತೆಗೆದುಕೊಳ್ಳಬೇಕು.

ಒಂದು ಕಾಲದಲ್ಲಿ ಸರಳವಾಗಿದ್ದ ತಯಾರಿಕಾ ವಿಧಾನ ಈಗ ಬಹಳ ಸಂಕೀರ್ಣವಾಗಿದೆ. ಕೈಯಿಂದ ಯಂತ್ರಶಕ್ತಿಗೆ, ಅಲ್ಪ ಪ್ರಮಾಣದಿಂದ ಬೃಹತ್ ಪ್ರಮಾಣಕ್ಕೆ, ಮನೆಯಿಂದ ಕಾರ್ಖಾನೆಗೆ ಆಗಿರುವ ಬದಲಾವಣೆ ನಿಜಕ್ಕೂ ದೊಡ್ಡ ಬದಲಾವಣೆಯೇ ಸರಿ. ಈ ಬದಲಾವಣೆಗಳು ತಯಾರಿಕಾ ತಂತ್ರದಲ್ಲಿ ಕ್ರಮೇಣ ಆಗಿರುವಂಥವು. ಕೈಗಾರಿಕೆಯ ವಿಕಾಸ ಇನ್ನೂ ಅಪೂರ್ಣವಾಗಿಯೇ ಇದೆ. ವರ್ತಮಾನದ ಕೈಗಾರಿಕಾ ಸಂಘಟನೆಗಳ ಸಂಪನ್ಮೂಲ ಮತ್ತು ಸಂಕೀರ್ಣತೆಯನ್ನು ಗಮನಿಸಿ ನಮಗೆ ಆಶ್ಚರ್ಯವುಂಟಾಗಬಹುದು. ಆದರೆ ಈಗೀಗ ಸಂಯೋಜಕಗಳು ಹೆಚ್ಚು ಸಾಮಾನ್ಯವಾಗುತ್ತಿವೆ; ಉತ್ಪಾದನಾ ವಹಿವಾಟನ್ನು ರಾಷ್ಟ್ರೀಕರಣಗೊಳಿಸಿದರೆ ಸಂಪನ್ಮೂಲ ಕೇಂದ್ರೀಕರಣ ತತ್ತ್ವದ ವಿಸ್ತರಣೆಯಾಗಿ ಖಾಸಗಿ ವ್ಯಕ್ತಿಗಳಲ್ಲಿ ಶೇಖರಣೆಯಾಗುತ್ತಿದ್ದ ಸಂಪನ್ಮೂಲ ಹಂಚಿಕೆಯಾಗುವುದು.

ಮನುಷ್ಯನಲ್ಲಿ ಸದ್ಗುಣಗಳಿಗೆ ಕೊರತೆಯಾಗಿರಬಹುದು. ಆದರೆ ಸತ್ಸಂಗ ಮಾಡುವುದಕ್ಕೆ ಕೊರತೆಯೇನೂ ಇಲ್ಲ. ಸತ್ಸಂಗದಿಂದ ಸದ್ಗುಣಗಳ ಕೊರತೆ ನೀಗುವುದು. ದುಸ್ಸಂಗ ಮಾತ್ರ ಮಾಡಬಾರದು. ಅದರಿಂದ ನಮ್ಮಲ್ಲಿ ಸ್ವಾರ್ಥ ಬೆಳೆದು ಇತರರಿಗೆ ದ್ರೋಹವೆಸಗುವ ಗುಣ ಬೆಳೆಯುವುದು.

—ಭಾಗವತ

ವಿಯೆಟ್ನಾಮಿನಲ್ಲಿ ನಿರಂಕುಶ ಪ್ರಭುತ್ವವನ್ನು ದಮನಮಾಡಿದ ಬಂಡವಾಳಶಾಹಿ

ಸರಸ್ವತಿ ಬಡೆಕ್ಕಿಲ

ವಿಯೆಟ್ನಾಮಿನಲ್ಲಿ – ಎಪ್ಪತ್ತೊಂದು ಮಿಲಿಯನ್ ಜನಸಂಖ್ಯೆಯುಳ್ಳ ಈ ರಾಷ್ಟ್ರದಲ್ಲಿ, ಹಣ ಸಂಪಾದನೆಹಕ್ಕು ಸ್ವಾತಂತ್ರ್ಯದ ಬೀಜವನ್ನು ಬಿತ್ತುತ್ತಿದೆ.

ನಮ್ಮ ವಾಹನ ಕಿರಿದಾದ ಆ ರಸ್ತೆಯಲ್ಲಿ ಮುನ್ನುಗ್ಗುತ್ತಿದ್ದಂತೆಯೇ, ಮನಸ್ಸಿಗೆ ಬೇಸರ ತರುವಂತೆ ಇಕ್ಕಡೆಗಳಲ್ಲೂ ಮಸಕುಗಟ್ಟಿದ ಮನೆಗಳನ್ನೂ ಒಂದೇ ತೆರನಾದ ಕಾರ್ಖಾನೆಗಳನ್ನೂ ನನ್ನ ಕಣ್ಣುಗಳು ಪರಿಶೀಲಿಸುತ್ತಿದ್ದುವು. ಹಠಾತ್ತನೆ ಕಾರು ತುಕ್ಕು ಹಿಡಿದ ಕಬ್ಬಿಣದ ಗೇಟಿನ ಮುಂದೆ ಗಕ್ಕನೆ ನಿಂತಿತು. ಗೇಟಿನಿಂದಾಕಡೆ ಈಗಲೋ ಆಗಲೋ ಬೀಳುವಂತಿದ್ದ ಹಳೆಯ ಕಟ್ಟಡಗಳ ಗೊಂಚಲೊಂದು ಕಣ್ಣಿಗೆ ಬಿತ್ತು. ಎದುರಿಗಿದ್ದ ಗೋಡೆಯ ಮೇಲೊಂದು ಮಾಸಿಹೋದ ಫಲಕ. ಸಂಸ್ಥೆಯ ಹೆಸರು "ಹನೊಯ್ ವಿಶ್ವವಿದ್ಯಾಲಯ."

"ಹನೊಯ್" ಎಂದೊಡನೆ ಯಾರಿಗೇ ಆದರೂ, ನೂರಾರು ಸಾವಿರ ಜನರನ್ನು ಬಲಿ ತೆಗೆದುಕೊಂಡ ವಿನಾಶಕಾರೀ ಅಂತರ್ಯುದ್ಧದ ನೆನಪಾಗದೆ ಇರಲು ಸಾಧ್ಯವಿಲ್ಲ; ಅಥವಾ ದೇಶವನ್ನೆಲ್ಲ ಪಾದಾಕ್ರಾಂತ ಮಾಡಿದ ಕಮ್ಯೂನಿಸ್ಟ್ ನಿರಂಕುಶ ಪ್ರಭುತ್ವದ ಸ್ಮರಣೆ ಚಿಂತೆಗೀಡು ಮಾಡದಿರಲೂ ಸಾಧ್ಯವಿಲ್ಲ!

ಕೆಲವೇ ನಿಮಿಷಗಳು ಕಳೆದಿರಬಹುದು, ನಮ್ಮ ಮುಂದೆ ಮೂವತ್ತು ಮೂವತ್ತೈದು ಜನ ಶುಭ್ರವಸನಧಾರಿ ಸ್ತ್ರೀಪುರುಷರು ಬಂದು ನೆರೆದರು. ಅಮೇರಿಕದ ಸಂದರ್ಶಕನಾಗಿ, ತಪಾಸಣೆ ನಡೆಸಲು ಬಂದಿದ್ದ ನನ್ನ ನಿರೀಕ್ಷೆ ಈಗ ಬುಡಮೇಲಾಗಿತ್ತು. ನಮ್ಮವರ ಅಭಿಪ್ರಾಯದಂತೆ ಅಲ್ಲೊಂದು ಜಡಭರಿತರ ಜಂಗುಳಿ ಕಾಣಸಿಗಬಹುದೆಂದು ಭಾವಿಸಿದ್ದ ನಾನು ಒಳಗಿಂದೊಳಗೆ ಸಣ್ಣಗೆ ಅಳುಕುತ್ತಲೇ ವಿಚಾರಿಸಿದೆ:

"ಪದವಿ ಪಡಕೊಂಡ ಮೇಲೆ ನೀವೆಲ್ಲ ಏನು ಕೆಲಸ ಮಾಡಲು ಇಷ್ಟಪಡುತ್ತೀರಿ?"

೧೯೯೪ರ ಏಪ್ರಿಲ್ ತಿಂಗಳಿನ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾದ ಫರ್ಗಸ್ ಬೋರ್ಡ್‌ವಿಚ್‌ರವರ "ಕಾಂಕರ್ಡ್ ಬೈ ಕ್ಯಾಪಿಟಲಿಸಮ್" ಲೇಖನದ ಅನುವಾದ.

ತತ್‌ಕ್ಷಣ ಏಕಕಂಠದಿಂದ "ಬಿಸಿನೆಸ್–ಅಮೆರಿಕದ ಬಿಸಿನೆಸ್" ಎಂದು ಎಲ್ಲರೂ ಕೂಗಿಕೊಂಡರು.

ರಾಜಕೀಯವಾಗಿ ವಿಯಟ್ನಾಮ್ ಕಠೋರ ಅಧಿಕಾರಶಾಹಿ, ನಿರ್ದಯೀ ಸಮಾಜವಾದೀ ದೇಶ. ಅದರ ವೃದ್ಧನಾಯಕರು ಪ್ರತಿರೋಧವನ್ನೆಂದೂ ಸಹಿಸುವವರಲ್ಲ. ಅಲ್ಲಿಯ ಸೆರೆಮನೆಗಳು ಇಂದಿನ ದಿನಗಳಲ್ಲೂ ಪ್ರಜ್ಞಾವಂತ, ಬುದ್ಧಿಜೀವಿಗಳನ್ನು ಹಿಡಿದಿಟ್ಟುಕೊಂಡಿವೆ!

ಹಾಗಿದ್ದರೂ ಇಂದು ವಿಯಟ್ನಾಮ್, ಆಳವಾಗಿ ಶೀತಲಗೊಂಡು ಹೆಪ್ಪುಗಟ್ಟಿದ ಕಮ್ಯೂನಿಸಮ್ಮಿನಿಂದ (ಬದಲಾಗುತ್ತಿರುವ ಜಗತ್ತಿನ ಆಗುಹೋಗುಗಳ ಬಿಸಿ ತಟ್ಟಿ) ಖಾಸಗಿ ಮಹೋದ್ಯಮಗಳಡೆಗೆ–ಮಹತ್ ಸಾಧನೆಗಳೆಡೆಗೆ–ಹೊರ ಜಿಗಿಯತೊಡಗಿದೆ! ತನ್ನ ನೆರೆಯಲ್ಲೇ ಇರುವ ಚೀನಾ ದೇಶಕ್ಕಿಂತಲೂ ವೇಗವಾಗಿ ಹೊರಚಿಮ್ಮುವ ಈ ಪ್ರಕ್ರಿಯೆ ಒಂದು ದಿನ ಈ ದೇಶದ ಸರ್ವಾಧಿಕಾರೀ ಸರಕಾರದ ಅಡಿಗಲ್ಲನ್ನೇ ಕದಲಿಸಿ ಉರುಳಿಸೀತು!

ಮನೆಯಲ್ಲೇ ಕಾರ್ಖಾನೆ

"ಇದು ನಮ್ಮಂಥ ಹಳೆಯ ಸೈನಿಕರ ಮನೆ" ಗಿರಗಿರನೆ ಗುಂಯಿಗುಡುವ, ಹೊಲಿಗೆ ಯಂತ್ರಗಳಿಂದ ತುಂಬಿದ ಆ ಮೂರುಕು ಮನೆಯಲ್ಲಿ ಸುತ್ತಾಡುತ್ತಿದ್ದಾಗ ಟ್ರ್ಯೆನ್ ಡಕ್‌ನ್ಯಾಮ್ ಹೇಳಿದ "ನನ್ನ ಸಹಾಯಕ ದಕ್ಷಿಣ ವಿಯಟ್ನಾಮಿನ ಫಿರಂಗಿ ದಳದಲ್ಲಿ ಇದ್ದವ. ನನ್ನ ಹಣದ ವ್ಯವಹಾರ ನೋಡಿಕೊಳ್ಳುವವನೂ ಅಷ್ಟೆ. ದಕ್ಷಿಣ ವಿಯಟ್ನಾಮಿ ಯುದ್ಧ ಹೆಲಿಕಾಪ್ಟರ್‌ನ ಚಾಲಕ. ಇನ್ನು ನಾನೊಬ್ಬ ಅದೇ ಸೇನೆಯ ಪದಾಧಿಕಾರಿಯಾಗಿದ್ದವನು."

ಇಂದು ಅವನೊಬ್ಬ ಅತಿ ವೇಗವಾಗಿ ಬೆಳೆಯುತ್ತಿರುವ ಉಡುಪು ತಯಾರಿಕಾ ಘಟಕದ ಮೂಲಕ ತಿಂಗಳೊಂದರ ಎರಡು ಲಕ್ಷ ಡಾಲರ್ ಬೆಲೆ ಬಾಳುವ ಆಕರ್ಷಕ ನಮೂನೆಗಳ ಕ್ರೀಡಾವಸನಗಳ ರಫ್ತು ವ್ಯಾಪಾರ ನಡೆಸುತ್ತಿದ್ದಾನೆ. ಆದರೆ ನ್ಯಾಮ್ ಎಂದೂ ಇಷ್ಟು ಸ್ವತಂತ್ರ, ಸ್ವಾವಲಂಬಿ, ಆಗಿರಲಿಲ್ಲ. ಸಾವಿರದೊಂಭೈನೂರ ಎಪ್ಪತ್ತೈದರಲ್ಲಿ ದಕ್ಷಿಣ ವಿಯಟ್ನಾಮ್ ಸೋತು ಹೋದ ಮೇಲೆ ಸೇನೆಯನ್ನು ಕಮ್ಯೂನಿಸಮ್ ಪಾಠಶಾಲೆಯಲ್ಲಿ ಪುನರ್‌ಶಿಕ್ಷಣಕ್ಕಾಗಿ ತಂದಿಳಿಸಲಾಯಿತು. ಸೋತು ಸೆರೆಯಾಳಾದ ಈ ಸೈನಿಕರು ದಿನವೆಲ್ಲ ಗದ್ದೆಗಳಲ್ಲಿ ಕಳೆಕೀಳುವುದಲ್ಲಿ, ಉಳಿದ ಸಮಯ ಪುಟಗಟ್ಟಲೆ ಆತ್ಮನಿಂದನೆಯನ್ನು ಬರೆಯುವುದರಲ್ಲಿ, ಕಾಲಕಳೆಯಬೇಕಾಯಿತು. ಆದರೆ ನ್ಯಾಮ್‌ನ ಹೃದಯದಲ್ಲಿ ಒಂದು ಅಂತರ್ವಾಣಿ ಧ್ವನಿಸುತ್ತಲೇ ಇತ್ತು "ನನ್ನಲ್ಲಿ ನಾನು ವಿಶ್ವಾಸವಿಟ್ಟಿರಲೇಬೇಕು ...." ಸದಾ ಅವನನ್ನು ಎಚ್ಚರಿಸುತ್ತ, ಧೈರ್ಯ ತುಂಬುತ್ತ ನುಡಿಯುತ್ತಿತ್ತು. ಅಂತೂ ೧೯೭೭ರಲ್ಲಿ ಅಲ್ಲಿಂದ ಬಿಡುಗಡೆಯಾಯಿತು. ಹೊರ ಬಂದಮೇಲೆ ಮಸಕು ಮಸಕಾಗಿ ನೆನಪಿಗೆ ಬಂದ ಪಟ್ಟಣವೆಂದರೆ ಸೈಗಾನ್. ಅಲ್ಲಿ ಹೋಗಿ ನೋಡಿದರೆ ಅದರ ಹೆಸರು ಹೊಚಿಮಿನ್ ಎಂದು ಪುನರ್ ನಾಮಕರಣ ಮಾಡಲಾಗಿತ್ತು. ಅಂದು ಅದ್ಭುತ ಶಕ್ತಿಶಾಲಿಯಾಗಿ ಬೆಳೆಯುತ್ತಿದ್ದ ಸೈಗಾನ್‌ಗೆ ಬದಲಾಗಿ ನಿಸ್ತೇಜವಾಗಿ ಬಡಕಲಾಗಿ ಹೋಗಿತ್ತು. ಉತ್ಸಾಹ, ಶ್ರೀಮಂತಿ

ಕೆಯು, ಸುಳಿವಿರಲಿಲ್ಲ. ಎಲ್ಲೆಡೆ ಖಿನ್ನತೆ ಆವರಿಸಿತ್ತು. ನ್ಯಾಮ್ ಅಲ್ಲಿಗೆ ಬಂದ ಹೊಸತರಲ್ಲಿ ವಿಮಾನುಗಾರಿಕೆಯ ದೋಣಿಗಳ ವಿವಿಧ ಹೊಸ ಮಾದರಿಗಳನ್ನು ರೂಪಿಸಿ ತಯಾರಿಸ ತೊಡಗಿದ. ಸರಕಾರೀಸ್ವಾಮ್ಯದ ಕಂಪೆನಿಯೊಂದಕ್ಕೆ ಇವುಗಳ ಆವಶ್ಯಕತೆ ಇತ್ತು.

ಆದರೆ ದೋಣಿ ತಯಾರಿಕೆಗೆ ದಿಮ್ಮಿಗಳನ್ನೊದಗಿಸುತ್ತಿದ್ದ ಮರ ಸಿಗಿಯುವ ಕಾರ್ಖಾನೆಯ ಆಡಳಿತಾಧಿಕಾರಿ ತನ್ನ ಬೇಡಿಕೆಯೊಂದನ್ನು ಮುಂದಿಟ್ಟ–"ನೀನು ನಮಗೆ ಬೇಕಾದ ಸಮವಸ್ತ್ರಕ್ಕೆ ಬಟ್ಟೆಗಳನ್ನೊದಗಿಸಿದರೆ ಮಾತ್ರ ನಿನಗೆ ಬೇಕಾದಷ್ಟು ಮರದ ದಿಮ್ಮಿ ಒದಗಿಸುತ್ತೇನೆ" ಎಂದ.

ಬಟ್ಟೆಯೊದಗಿಸುವುದಕ್ಕಿಂತ ಸಮವಸ್ತ್ರಗಳನ್ನೇ ಒದಗಿಸಿದರೆ ಹೆಚ್ಚು ಲಾಭಗಳಿಸಬಹುದೆಂದು ಕಂಡುಕೊಳ್ಳಲು ನ್ಯಾಮ್‌ಗೆ ಹೆಚ್ಚು ಕಾಲ ಹಿಡಿಯಲಿಲ್ಲ. ಆದರೆ ಅದರಲ್ಲಿ ನಷ್ಟಹೊಂದುವ ಅಪಾಯವೂ ಬಹಳಷ್ಟಿತ್ತು. ಸಣ್ಣಪುಟ್ಟ ಸ್ವಂತ ವ್ಯವಹಾರ ಮಾಡುವವರಿಂದ ಲಾಭಾಂಶವನ್ನೆಲ್ಲ ತೆರಿಗೆಯ ರೂಪದಲ್ಲಿ ವಸೂಲು ಮಾಡಲಾಗುತ್ತಿತ್ತು. ಹಾಗಿದ್ದರೂ ಅವನ ಒಳದನಿ ಹೇಳುತ್ತಲೇ ಇತ್ತು "ನೀನು ಜೀವನದಲ್ಲಿ ಏನಾದರೂ ಸಾಧಿಸಬೇಕೆಂದಿದ್ದರೆ, ಇದೇ ನಿನಗೊಂದು ಅವಕಾಶ!"

ಈ ರೀತಿ ತನ್ನ ಅಂತಃಪ್ರೇರಣೆಯಂತೆ ಸಾವಿರದೊಂಭೈನೂರ ಎಂಬತ್ತಾರರಲ್ಲಿ ತಾನು ಬಹಳ ಕಷ್ಟಪಟ್ಟು ಉಳಿಸಿಕೊಂಡ ಹಣದಿಂದ ಕೆಲವು ಕೆಲಸಗಾರರನ್ನು ನೇಮಕ ಮಾಡಿಕೊಂಡ ಮತ್ತು ಸವೆದುಹೋದ ಹನ್ನೆರಡು ಹಳೆಯ ಹೊಲಿಗೆ ಯಂತ್ರಗಳನ್ನೂ ಖರೀದಿಸಿದ. ಇವನ್ನು ತನ್ನ ಮನೆಯ ಚಿಕ್ಕಕೋಣೆಯಲ್ಲೇ ಅಳವಡಿಸಿದ. ಈ ರೀತಿ ಕಮ್ಯೂನಿಸ್ಟ್ ವಿಯಟ್ನಾಮಿನಲ್ಲಿ ಅವನೊಬ್ಬ ಪ್ರಥಮ ಮತ್ತು ಏಕೈಕ ಉದ್ದಿಮೆಗಾರನಾದ. ಆದರೆ ಅವನ ಎದೆಗುಂಡಿಗೆ ನಡುಗುತ್ತಲೇ ಇತ್ತು!

ಜೀವನ ಅಷ್ಟೇನೂ ಸುಲಭವಾಗಿರಲಿಲ್ಲ. ಸರಕಾರೀ ಸ್ವಾಮ್ಯದ ಕಂಪೆನಿಗಳೇ ಬಟ್ಟೆ ಸರಬರಾಜು ಮಾಡುವ ಏಕಾಧಿಪತಿಗಳಾಗಿದ್ದವು. ಅದಲ್ಲದೆ ನ್ಯಾಮ್ ತನ್ನ ಸರಕುಗಳನ್ನು ಸರಕಾರೀ ಸಂಸ್ಥೆಗಳ ಮುಖಾಂತರವೇ ಮಾರಾಟ ಮಾಡಬೇಕಿತ್ತು. ಅವುಗಳೋ! ಇವನ ಲಾಭದ ಹೆಚ್ಚಿನಂಶವನ್ನೆಲ್ಲ ಮಥಿಸಿ ತೆಗೆಯುತ್ತಿದ್ದುವು. ಅವನು ಕೊಡಬೇಕಾದ ತೆರಿಗೆಗಳು ಅವನನ್ನು ಪುಡಿಪುಡಿ ಮಾಡುತ್ತಿದ್ದುವು.

ಹಾಗಿದ್ದರೂ ಬಲುಬೇಗನೆ ನ್ಯಾಮ್‌ಗೆ ಸಿದ್ಧ ಉಡುಪುಗಳ ಬೇಡಿಕೆಗಳು ಪ್ರವಾಹದೋಪಾದಿಯಲ್ಲಿ ಬರತೊಡಗಿದುವು.

ನ್ಯಾಮ್ ತನ್ನ ಅನುಭವವನ್ನು ಈ ರೀತಿ ಹೇಳುತ್ತಾನೆ ಗಿರಾಕಿಯೊಬ್ಬ ಉಡುಪುಗಳಿಗಾಗಿ ಸರಕಾರೀ ಹೊಲಿಗೆ ಸಂಸ್ಥೆಗೆ ಬೇಡಿಕೆ ಕಳುಹಿಸಿದರೂ, ನ್ಯಾಮ್ ನೊಡನೆ ಎರಡು ವಾರ ಕಳೆದು, ನಮ್ಮನ್ನು ನೋಡಲು ಬಾ" ಎನ್ನುತ್ತಾನೆ. ಆಮೇಲೆ ನ್ಯಾಮ್‌ಗೆ ಆ ಕೆಲಸ ಇನ್ನೂ ಆಗಿಲ್ಲ ಎಂಬುದು ತಿಳಿದು ಹೋಗುತ್ತದೆ. ಕೂಡಲೇ ನ್ಯಾಮ್ ಆ ಗಿರಾಕಿಗೆ ತನ್ನ ಕೊಡುಗೆ ಮುಂದಿಡುತ್ತ ಹೇಳುತ್ತಾನೆ "ನೀವು ನನಗೊಂದು ಆಜ್ಞೆ ದಯಪಾಲಿಸಿ. ನಿಮ್ಮನ್ನೊಂದು ಔತಣಕ್ಕೆ ಕರೆದೊಯ್ಯುತ್ತೇನೆ. ಅಲ್ಲಿ ನೀವು ಊಟ ಮುಗಿಸುವುದರೊಳಗೆ ನಮ್ಮ ಒಪ್ಪಂದ ತಯಾರಾಗಿರುತ್ತದೆ."

ಟ್ರಾನ್‌ಡಕ್ ನ್ಯಾವ್‌ನ ಕಂಪೆನಿ ಇಂದು ಬೆಳೆದು ಅದರ ಕಾರ್ಮಿಕರ ಸಂಖ್ಯೆ ಏಳು ನೂರಕ್ಕೇರಿದೆ. ಸರಕಾರೀ ಘಟಕಗಳಿಗಿಂತ ಭಿನ್ನವಾದ ರೀತಿಯಲ್ಲಿ ಅವನ ಉದ್ಯೋಗಿಗಳು ದಿನದ ಪೂರ್ಣ ಪ್ರಮಾಣದಲ್ಲಿ ದುಡಿಯಬೇಕು. ಅಂತೆಯೇ ತಿಂಗಳೊಂದರ ೬೦ ಡಾಲರ್ (ಸರಕಾರೀ ನೌಕರರ ತಿಂಗಳ ಪಗಾರದ ಎರಡು ಪಾಲು) ಪಡೆಯುತ್ತಾರೆ.

"ಈಗ ಉತ್ತರ ವಿಯಟ್ನಾಮಿನ ನಿವೃತ್ತ ಮೇಜರ್ ಕೂಡ ನಮ್ಮ ಸಿಬ್ಬಂದಿಯಲ್ಲಿದ್ದಾರೆ!" ತುಂಬ ಹುಡುಗನಂತೆ ನಕ್ಕು ಡಕ್ ನ್ಯಾವ್ ಹೇಳುತ್ತಾನೆ" ಅದೋ ಹೊರಗೆ ಕಾವಲು ಕಾಯುತ್ತಿದ್ದಾನಲ್ಲ. ಅವನೇ ನಮ್ಮ ದೊಣ್ಣೆ ನಾಯಕ!"

ಬ್ಯಾಂಕ್ ಅಧಿಕಾರಿ ಹೇಳಿದ್ದು

ಗ್ಯೂಯೆನ್ ಕ್ವಾನ್ ಓಹ್ನ್ ಒಬ್ಬ ಎಪ್ಪತ್ತೆರಡರ ವೃದ್ಧ. ಆದರೆ ಇನ್ನೂ ತರುಣನಂತೆ, ಶಕ್ತಿವಂತ, ಸ್ಫೂರ್ತಿವಂತ! ಹಣ ತೊಡಗಿಸುವ ವಿಚಾರದ ಸಲಹೆಗಾರ; ಹೊಚಿಮಿನ್ ಪಟ್ಟಣದಲ್ಲೇ ಅವನ ಋುಗ ಮಗಿಸುವ ಕಛೇರಿ. ನನ್ನನ್ನು ಸ್ವಾಗತಿಸುತ್ತ ಹೇಳಿದ "ನಾವು ಹೋಟೆಲ್ ಕಟ್ಟಿಕೊಡುತ್ತೇವೆ. ಚಿಲ್ಲರೆ ಅಂಗಡಿ ಇಡುತ್ತೇವೆ. ಏನೆಲ್ಲವನ್ನೂ ಮಾಡುತ್ತೇವೆ." ತನ್ನ ಕೆಲಸ ಕಾರ್ಯಗಳ ವಿವರಣೆಗಳಿರುವ ಕಾಗದ ಪತ್ರಗಳ ಸಂಪುಟವನ್ನು ಹೊರ ತೆಗೆದು ಜಪಾನೀಯರು ನಿರ್ಮಿಸಲಿರುವ ಒಂದು ಉಕ್ಕಿನ ಕಾರ್ಖಾನೆಯ ನಕ್ಷೆಯನ್ನು ತೋರಿಸಿದ. ಇನ್ನೊಂದು ನಕ್ಷೆ ಲಕ್ಷ ಮಿಲಿಯನ್ ಡಾಲರ್ ಹಣದಲ್ಲಿ ಕಟ್ಟಲಾಗುವ ವ್ಯಾಪಾರ ಕೇಂದ್ರ ಮತ್ತು ಪಟ್ಟಣದ ಎಲ್ಲ ವ್ಯವಹಾರಗಳನ್ನು ಒಂದೆಡೆ ಸೇರಿಸಿ ನೇಯಬಲ್ಲ ಗಗನ ಚುಂಬಿಕಟ್ಟಡಗಳ ರೂಪರೇಷೆಗಳು!

ಸ್ವಂತ ಬಂಡವಾಳ ಹೂಡಿಕೆಯ ಸಂಘರ್ಷದಲ್ಲಿ ಟ್ರ್ಯಾನ್ ಡಕ್‌ನ್ಯಾವ್ ಪದಾತಿಯಾಗಿದ್ದರೆ, ಗ್ಯೂಯೆನ್ ಕ್ವಾನ್ ಓಹ್ನ್ ಆ ಕ್ರಾಂತಿಯ ಶಿಲ್ಪಿಯಾಗಿದ್ದ. ಓಹ್ನ್ ಒಮ್ಮೆ ಬಹಳ ಸ್ವಲ್ಪವೇ ಕಾಲ–ಸೈಗಾನ್ ಸರಕಾರದ ಕಾರ್ಯನಿರ್ವಾಹಕ ಪ್ರಧಾನಿಯಾಗಿಯೂ ಶ್ರಮಿಸಿದ್ದ ಮತ್ತು ಅದಕ್ಕೂ ಮೊದಲು ಎಷ್ಟೋ ವರ್ಷ ಲೇವಾದೇವಿ ಸರಾಫನಾಗಿದ್ದ.

ಕಮ್ಯೂನಿಸ್ಟರು ಅಧಿಕಾರದ ಗದ್ದುಗೆ ಏರಿ ದೇಶದ ಅರ್ಥವ್ಯವಸ್ಥೆಯ ಹಡಗನ್ನು ತುಮುರು ತುಮುರಾಗಿ ಪುಡಿಮಾಡಿದಾಗ ಖಿನ್ನತೆಯಿಂದ ಅದನ್ನು ನೋಡುತ್ತ ಸುಮ್ಮನೆ ಇರಬೇಕಾಯಿತು. ಓಹ್ನ್‌ಗೆ ಅವರು ಮಾಡಿದ ಬುಡಮೇಲು ಕೃತ್ಯಗಳ ಮೂಕ ಪ್ರೇಕ್ಷಕನಾಗುವಂತಾಯಿತು. ವಿದೇಶಿ ಹೂಡಿಕೆಗಳನ್ನೆಲ್ಲ ರಾಷ್ಟ್ರೀಕರಿಸಲಾಯಿತು. ವಸ್ತುಗಳ ಕ್ರಯಕ್ಕೂ ವಾಸ್ತವವಾದ ಬೆಲೆಗೂ ಯಾವುದೇ ಸಂಬಂಧ ಇರದಾಯಿತು. ಸರಕಾರದ ಪ್ರೋತ್ಸಾಹಕ ಧನ ಸರಕಾರೀ ಸಂಘ, ಸಂಸ್ಥೆ, ಕಾರ್ಖಾನೆಗಳಿಗೇ, ಮೀಸಲಾಗಿರುತ್ತಿತ್ತು. ಅದೂ ದೊಡ್ಡ ಪ್ರಮಾಣದ ಧನ ಸಹಾಯ! ಇನ್ನು ಆ ಕಾರ್ಖಾನೆಗಳೋ! ಬೇಕಾದ್ದಕ್ಕಿಂತ ಹೆಚ್ಚು ಮಂದಿಯನ್ನು ಉದ್ಯೋಗಕ್ಕೆ ತೆಗೆದುಕೊಳ್ಳುತ್ತಿದ್ದುವು. ಅವರ ತಯಾರಿಕೆಗಳೋ! ಮೂರನೇ ವರ್ಗದ ಕಳಪೆ ಸಾಮಗ್ರಿಗಳು!

ಕಮ್ಯೂನಿಸ್ಟ್ ಉನ್ನತಾಧಿಕಾರಿಗಳು ರೈತರ ವೈಯಕ್ತಿಕ ಭೂಮಿಯನ್ನು

ಸಾಮೂಹಿಕ ಕೃಷಿಮಾಡಲು, ಆಜ್ಞೆ ಹೇರಿದರು. ಈ ಬಲಾತ್ಕಾರದ ಒಕ್ಕೂಟದಿಂದ ರೈತರು ಆಸಕ್ತಿ ಕಳೆದುಕೊಂಡರು; ಉತ್ಪಾದನೆ ಕುಂಠಿತವಾಯಿತು.

ಕ್ಸವಾನ್ ಓಹ್ನ್ ಹಾರ್ವರ್ಡ್ ಯೂನಿವರ್ಸಿಟಿಯ ಪದವೀಧರ ಕಮ್ಯೂನಿಸ್ಟರ ನೀತಿಯನ್ನು ಖಂಡಿಸುವುದು, ಟೀಕೆ ಮಾಡುವುದು ಅಪಾಯಕರವೆಂದು ಗೊತ್ತಿತ್ತವನಿಗೆ. ಆದರೆ ಕಣ್ಣೆದುರೇ ಈ ರೀತಿ ದೇಶ ವಿನಾಶದೆಡೆ ಜಾರಿ ಬೀಳುತ್ತಿರುವಾಗ "ನಾನು ಮಾತಾಡಲೇಬೇಕು, ನನ್ನ ಅಭಿಪ್ರಾಯ ವ್ಯಕ್ತಪಡಿಸಲೇಬೇಕು" ಎಂದುಕೊಂಡ.

ಸಾವಿರದ ಒಂಬೈನೂರ ಎಂಬತ್ತೊಂದರಲ್ಲಿ ಸಮಾಚಾರ ಪತ್ರಿಕೆಯೊಂದರಲ್ಲಿ ತನ್ನ ಲೇಖನವನ್ನು ಪ್ರಕಟಪಡಿಸುವ ಯೋಗ ಕೂಡಿ ಬಂತು. "ಇದು ನನ್ನ ಕೊನೆಯೇ ಇರಬಹುದೇನೋ" ಎಂದುಕೊಂಡ. ಹಾಗಿದ್ದರೂ ಬರೆದೇ ಬಿಟ್ಟ "ಲೋಕದಲ್ಲಿ ಬ್ಯಾಂಕ್ ಉದ್ಯಮ ದೇಶವೆಂಬ ರೈಲಿಗೆ ಎಂಜಿನ್ ಇದ್ದಂತೆ. ಆದರೆ ವಿಯಟ್ನಾಮಿನಲ್ಲಿ ಮಾತ್ರ ಹೊರಲಾಗದ 'ಹೆಣಭಾರ'ವಾಗಿದೆ." ಲೇಖನ ಪ್ರಕಟವಾದೊಡನೆ ಅವನ ಮೇಲೆ ಹಲವರ ವಾಗ್ಬಾಣಗಳು ಎರಗಿದುವು. ಪಾಶ್ಚಾತ್ಯರ ಕೈಗೂಸೆಂದು, ಸಂತೆಯ ವ್ಯಾಪಾರ ಮಾತ್ರ ತಿಳಿದವನೆಂದು ಹೀನೈಸಿದರು.

ಕ್ಸವಾನ್ ಔಹ್ನ್ ಬಿಟ್ಟುಕೊಡದೆ, ಉತ್ತರಿಸಿದ "ಹಣ ಹೂಡಿಕೆಯೊಂದೇ ನನಗೆ ಗೊತ್ತಿರುವುದೆಂದು ಒಪ್ಪಿಕೊಳ್ಳೋಣ. ಆದರೆ ಅದರಿಂದ ನಮ್ಮ ಕೆಲಸವಾಗುವುದೂ ಖಂಡಿತ" ಆದರೆ ಕ್ಸವಾನ್‌ಗೆ ತಿಳಿಯದಿದ್ದ ಇನ್ನೊಂದು ಅಂಶವೂ ಇತ್ತು. ಅದೆಂದರೆ ಕೆಲ ಉನ್ನತ ಸ್ಥಾನದ ಧುರೀಣರಿಗೆ ಕಮ್ಯೂನಿಸ್ಟ್ ತತ್ವದ ಬಗ್ಗೆ ಈಗಾಗಲೇ ಭ್ರಮನಿರಸನವಾಗಿತ್ತು. ಅವರೆಲ್ಲ ಕ್ಸವಾನ್ ಓಹ್ನ್‌ನ ಪ್ರಬಂಧದಲ್ಲಿ ಮಂಡಿಸಲ್ಪಟ್ಟ ವಿಚಾರಗಳೇ ತಾವು ಹುಡುಕುತ್ತಿದ್ದ ಔಷಧವೆಂದು ಪರಿಗಣಿಸತೊಡಗಿದ್ದರು.

ಮುಂದೆ ಒಂದು ವರ್ಷದ ಮೇಲೆ ೧೯೮೨ರಲ್ಲಿ ಸರಕಾರ ನಡೆಸುತ್ತಿದ್ದವರಲ್ಲಿ ಸುಧಾರಕರೆನ್ನಿಸಿಕೊಂಡವರು ಕ್ಸವಾನ್‌ನನ್ನು ಅರ್ಥಶಾಸ್ತ್ರದಲ್ಲಿ ಸಂಶೋಧನೆ ನಡೆಸುವ ಕಛೇರಿಯೊಂದನ್ನು ಸ್ಥಾಪಿಸಲು ಕೇಳಿಕೊಂಡರು. ಪರಿಣಾಮವಾಗಿ ಓಹ್ನ್ ತನ್ನ ವಿಚಾರಗಳನ್ನು ಸಕಾರಣವಾಗಿ ವಾದಿಸಿ ತನ್ನ ಆರ್ಥಿಕಧೋರಣೆಗಳನ್ನು ಮಂಡಿಸಿದ —ಬೆಲೆ ನಿಯಂತ್ರಣವನ್ನು ಕಿತ್ತೊಗೆಯಬೇಕೆಂದೂ ಬ್ಯಾಂಕ್ ಉದ್ಯಮವು ವ್ಯಾಪಾರ ವ್ಯವಹಾರಗಳನ್ನು ಕೈಗೆತ್ತಿಕೊಳ್ಳಬೇಕೆಂದೂ ವಿದೇಶೀ ಬಂಡವಾಳ ಹೂಡಲು ಮುಕ್ತ ದ್ವಾರವಿರಬೇಕೆಂದೂ ಮತ್ತು ಅನಾದಿಯಿಂದಲೂ ನಡೆದು ಬಂದಂಥ ಸ್ವಂತ ಆಸ್ತಿ, ಸ್ವಂತ ಬೇಸಾಯ ಕ್ರಮ, ವೈಯಕ್ತಿಕ ಉದ್ಯಮಗಳು ಇವುಗಳಿಗೆ ಹಿಂತಿರುಗಬೇಕೆಂದೂ ಆಗ್ರಹಪಡಿಸಿದ.

ಈ ವಿಚಾರಗಳಿಗೆ ಪೂರ್ಣ ಮನ್ನಣೆ ದೊರೆತದ್ದು ಸಾವಿರದೊಂಬೈನೂರ ಎಂಬತ್ತಾರರಲ್ಲಿ. ಓಹ್ನ್‌ಗೆ ಅಂದು ಆಶ್ಚರ್ಯಕಾದಿತ್ತು. ಕಮ್ಯೂನಿಸ್ಟ್ ಪಕ್ಷದ ಆರನೇ ಬೃಹತ್ ಸಮಾವೇಶದಲ್ಲಿ ಕ್ಸವಾನ್ ಓಹ್ನ್‌ನ ಪ್ರತಿಪಾದನೆಯನ್ನು ದೇಶದ ಪ್ರಮುಖ ಅಧಿಕಾರಿಗಳು ಸ್ವೀಕರಿಸಿದರು

ಮತ್ತು ಅದನ್ನು ಪೂರ್ಣತಃ ಅನುಷ್ಠಾನಕ್ಕೆ ತರುವ ನಿರ್ಣಯ ಕೈಕೊಂಡರು. ಅಂದಿನ ನಾಟಕೀಯ ಪರಿವರ್ತನೆಯ ಮುಂದಿನ ಹೆಜ್ಜೆಯಾಗಿ ಕಮ್ಯೂನಿಸ್ಟ್ 'ಪಕ್ಷಕ್ಕೆ ಪಕ್ಷವೇ' ಕಮ್ಯೂನಿಸಮ್ಮನ್ನು ತಾತ್ವಿಕವಾಗಿ ಮತ್ತು ವಾಸ್ತವವಾಗಿ ಪರಿತ್ಯಾಗ ಮಾಡಿತು!

ಮುಂದೆ ಆರು ತಿಂಗಳೊಳಗೆ ೧೯೮೭ರಲ್ಲೇ ಕೇವಲ ಒಂದೇ ವರ್ಷದಲ್ಲಿ ಹೊಚಿಮಿನ್ ನಗರ ಒಂದರಲ್ಲೇ ಮೂವತ್ತು ಸಾವಿರ ಉದ್ಯೋಗಿಗಳ ನೇಮಕಾತಿಯೊಡನೆ ಸುಮಾರು ಮೂರು ಸಾವಿರ ಸ್ವಾಯತ್ತ ಅಂಗಡಿಗಳ ಸ್ಥಾಪನೆಯಾಯಿತು. ಡಕ್ ನ್ಯಾಮನಂತಹ ಸ್ವಂತ ಉದ್ಯೋಗಿಗಳಿಗೆ ಸರಕಾರದಿಂದ ಹೆಚ್ಚಿನ ಪ್ರೋತ್ಸಾಹ, ಮಹತ್ವ ದೊರಕಿದುವು. ಸರಕಾರೀ ಸ್ವಾಮ್ಯದ ಸಂಸ್ಥೆಗಳಿಗೆ ನೀಡಲಾಗುತ್ತಿದ್ದ ಧನಸಹಾಯವನ್ನು ಮೊಟಕುಗೊಳಿಸಲಾಯಿತು. ಜತೆಗೆ ವಿದೇಶಿ ಮತ್ತು ಸ್ವದೇಶಿ, ವೈಯಕ್ತಿಕ ಹಣ ಹೂಡಿಕೆಯನ್ನು ಅಥವಾ ಜಂಟಿಯಾಗಿ ತೊಡಗಿಸಿದ ಸಂಸ್ಥೆಗಳನ್ನೆಲ್ಲ ಕಾನೂನುಬದ್ಧಗೊಳಿಸಲಾಯಿತು.

ಕೆಲವೇ ಸಮಯ ಕಳೆದು ಸಾಮೂಹಿಕ ಕೃಷಿಭೂಮಿಗಳನ್ನು ವಿಭಾಗಿಸಿ ರೈತರಿಗೆ ಹಂಚಲಾಯಿತು ಅಥವಾ ಸಮೂಹವೆಂದು ಪರಿಗಣಿಸಿದ್ದನ್ನು ಮೊದಲಿನಂತೆ ಅವರವರಿಗೆ, ಆಯಾ ವ್ಯಕ್ತಿಗಳಿಗೆ ಹಂಚಲಾಯತು. ನೋಡನೋಡುವಷ್ಟರಲ್ಲಿ ಉತ್ಪಾದನೆ ಮೇಲೆ ಮೇಲೇರುತ್ತ ಬಂತು ಮತ್ತು ದೇಶದಲ್ಲಿದ್ದ ಪಡಿತರ ಪದ್ಧತಿ ತನ್ನಿಂದ ತಾನೇ ಮಾಯವಾಯಿತು.

ಇತ್ತ ಕಡೆ ಸರಕಾರೀ ಸ್ವಾಮ್ಯದ ಒಂದೊಂದು ಲಕ್ಷಕ್ಕೂ ಮಿಕ್ಕಿ ಕಾರ್ಮಿಕರಿದ್ದಂಥ ಸಂಸ್ಥೆಗಳ ಕಾರ್ಯಕ್ಷಮತೆಯಲ್ಲಿ ಲೋಪದೋಷಗಳಿವೆಯೆಂದು ಮುಚ್ಚಿಹಾಕಲಾಯಿತು. ೧೯೯೦ನೇ ಇಸವಿ ಕೊನೆಗೊಳ್ಳುವಷ್ಟರಲ್ಲಿ ದೇಶದ ಗೃಹೋಪಯೋಗಿ ವಸ್ತುಗಳ ಮೂರನೇ ಎರಡು ಭಾಗದಷ್ಟು ಸ್ವಾಯತ್ತ ಸಂಸ್ಥೆಗಳಿಂದ ಉತ್ಪಾದನೆಯಾಗತೊಡಗಿತ್ತು; ಮತ್ತು ಆರ್ಥಿಕ ಪ್ರಗತಿ ಗಣನೀಯವಾಗಿ—ಶತಾಂಶ ೮.೩ ರಷ್ಟು ಏರಿತು; ನಿರ್ಯಾತ ಶತಾಂಶ ೧೯ರಷ್ಟು ಹೆಚ್ಚಳ ಸಾಧಿಸಿತು.

ಕ್ವಾನ್ ಹೇಳುತ್ತಾನೆ "ಈ ಆರ್ಥಿಕ ನೀತಿ ಅತ್ಯಂತ ಸತ್ವಯುತವಾಗಿದೆ. ವೈಯಕ್ತಿಕ ನೇತೃತ್ವವನ್ನು ಪ್ರೋತ್ಸಾಹಿಸಿದಲ್ಲಿ ಅಥವಾ ಜನರನ್ನು ಅವರಷ್ಟಕ್ಕೆ ಬಿಟ್ಟಲ್ಲಿ ಒಂದೆರಡು ದಶಕದಲ್ಲೇ ವಿಯಟ್ನಾಮ್ ದೇಶ ದಕ್ಷಿಣ ಕೊರಿಯಾ ಅಥವಾ ಥಾಯ್ವಾನ್‌ಗಳಿಗೆ ಸರಿಸಾಟಿಯಾಗಬಲ್ಲದು. ಎಲ್ಲ ಜನರಿಗೂ ಆಸೆಗಳಿವೆ. ಸುಖಸಾಮಗ್ರಿಗಳು ಬೇಕೆಂಬ ಬಯಕೆಗಳಿವೆ! ಒಂದು ಮನೆ ಬೇಕು, ಮನೆಯಲ್ಲಿ ಟಿ. ವಿ. ಬೇಕು, ಫ್ರಿಜ್ ಬೇಕು. ಮನುಷ್ಯನ ಸಹಜಗುಣವನ್ನು ನೀವು ಬದಲಾಯಿಸಲಾರಿರಿ!"

ವಿಯಟ್ನಾಮಿನ ಔದ್ಯೋಗಿಕ ಮತ್ತು ಅರ್ಥಶಾಸ್ತ್ರದ ಪ್ರಧಾನ ಮಂತ್ರಾಲಯದ ಅಧ್ಯಕ್ಷೆ ಫಾಮ್ ಚೆಲಾನ್ ನಿರ್ದಾಕ್ಷಿಣ್ಯವಾಗಿ ಹೇಳುವುದೇನೆಂದು ಕೇಳಿ "ಜನರು ತಮ್ಮ ಜೀವನವನ್ನು ಸುಧಾರಿಸಲು ಅತ್ಯಂತ ಆಸಕ್ತಿ ಹೊಂದಿರುತ್ತಾರೆ. ಧೋರಣೆ, ಆದರ್ಶ ಎಂದು ಜಗಳಾಡುತ್ತ ಕಾಲ ವ್ಯರ್ಥ ಮಾಡಲು ಸಾಧ್ಯವಿಲ್ಲ."

ವ್ಯವಹಾರಚತುರ ವಿದ್ಯಾರ್ಥಿಗಳು

ವಿಯಟ್ನಾಮಿನ ಭವಿಷ್ಯದ ಸ್ವರೂಪವನ್ನು ನಿಮಗೆ ಯಥಾವತ್ತಾಗಿ ನೋಡಬೇಕೆಂದಿದ್ದಲ್ಲಿ, ಹೊಚಿಮಿನ್ ನಗರದಲ್ಲಿರುವ ಸರಕಾರಿ ಮತ್ತು ಜನತಾ ಸಂಯುಕ್ತ ಆಡಳಿತವುಳ್ಳ ಮೊತ್ತಮೊದಲ ಮುಕ್ತ ವಿಶ್ವವಿದ್ಯಾಲಯದೊಳ ಹೋಗಿ ನೋಡಿರಿ. ಇದು ಪ್ರಾರಂಭಗೊಂಡ ಕತೆ ಹೀಗಿದೆ:

ಕಮ್ಯೂನಿಷ್ಟರು ಅಧಿಕಾರ ವಹಿಸಿಕೊಂಡಾಗ ಕಾವೋ ವ್ಯಾನ್ ಫ್ಯೊಂಗ್ ಎಂಬ ಗಣಿತ ಶಾಸ್ತ್ರಜ್ಞ ಕಾನ್ ಥೋ ವಿಶ್ವವಿದ್ಯಾಲಯದ ಡೀನ್ ಆಗಿ ನಿಯುಕ್ತನಾದ. ಅಲ್ಲಿ ಆವನು ಕಂಡದ್ದೇನೆಂದರೆ—ಸಾವಿರದ ಇನ್ನೂರು ಜನ ನೀತಿಗೆಟ್ಟ ಅಧಿಕಾರಿಗಳು ಮತ್ತು ನೌಕರರ ವರ್ಗ, ಕಲಿಯಲು ಮನಸ್ಸಿಲ್ಲದ ೪೦೦೦ ವಿದ್ಯಾರ್ಥಿ ಸಮುದಾಯ, ಮತ್ತೆ ಅವರಿಗೆ ಕಲಿಸಲು ಮನವಿಲ್ಲದ, ಕಡಿಮೆ ಸಂಬಳವೆಂದು ಅಸಂತುಷ್ಟರಾದ ಶಿಕ್ಷಕ ಗಣ!

ಫ್ಯೊಂಗ್ ತನ್ನ ಮನದಲ್ಲೇ ಒಂದು ಸುಯೋಗ್ಯ ಪಾಠಕ್ರಮದ ರೂಪರೇಷೆಗಳನ್ನು ಚಿತ್ರಿಸಿದ. ಅದರಲ್ಲಿ ರಾಜಕಾರಣಿಗಳ 'ಶುದ್ಧ ಸಿದ್ಧಾಂತ'ದ ಒತ್ತಡವಿಲ್ಲ. ಅಲ್ಲಿ ಅವನು ಬೇಕಾದಂತೆ ಶಿಕ್ಷಕರನ್ನು ಅವರ ಯೋಗ್ಯತಾನುಸಾರ ಆಯ್ಕೆ ಮಾಡಬಲ್ಲ, ನೇಮಿಸಬಲ್ಲ. ಅವರಿಗೆ ತಕ್ಕಂತೆ ವೇತನ ನೀಡಬಲ್ಲ. ತದನುಸಾರ ಶುಲ್ಕವನ್ನೂ ವಸೂಲು ಮಾಡಬಲ್ಲ. ಸರಕಾರದ ಸಹಾಯವೂ ಬೇಕಿಲ್ಲ, ಅದರ ಋಣಿಯಾಗಿರುವುದೂ ಅವನಿಗೆ ಬೇಕಿಲ್ಲ.

ಫ್ಯೊಂಗ್ ಕೂಡಲೆ ಕಾರ್ಯಪ್ರವೃತ್ತನಾದ. ಕ್ಯಾನ್ ಥೋವನ್ನು ತ್ಯಜಿಸಿದ. ಶಿಕ್ಷಣ ಮತ್ತು ತರಬೇತಿ ಇಲಾಖೆಯ ಮಂತ್ರಾಲಯದಲ್ಲಿದ್ದ ಸುಧಾರಕರ ಮನವೊಲಿಸಿದ; ತನ್ನ ವಿಶ್ವವಿದ್ಯಾಲಯಕ್ಕೆ ಒಂದು ಅವಕಾಶವನ್ನೂ ಗಿಟ್ಟಿಸಿಕೊಂಡ. ಅಷ್ಟಾದ ಮೇಲೆ ಅಸಾಧಾರಣ ಮೇಧಾವಿ ಶಿಕ್ಷಕರಿಗಾಗಿ ಶೋಧ ನಡೆಸತೊಡಗಿದ. ಹಾಗೆ ಸಂಶೋಧಿಸಿದವರಲ್ಲಿ—ಅಮೆರಿಕದ ಸಿರಾಕ್ಯೂಸ್ ವಿಶ್ವವಿದ್ಯಾಲಯದಲ್ಲಿ ಸಾರ್ವಜನಿಕ ಆಡಳಿತದ ವಿಷಯದಲ್ಲಿಡಾಕ್ಟೊರೇಟ್ ಪಡೆದ ಟ್ರ್ಯಾನ್ ಅನ್‌ಟುವಾನ್ ಒಬ್ಬ. ಅವನೊಡನೆ ಫ್ಯೊಂಗ್ ಹೇಳಿದ "ಖಾಸಗಿ ವಿಶ್ವವಿದ್ಯಾಲಯ ತೆರೆಯಲು ನನ್ನೊಡನೆ ಪರವಾನಿಗೆ ಇದೆ. ನಮಗೆ ನಿಮ್ಮ ಸಹಕಾರ ಬೇಕು."

"ಇಲ್ಲಿ ಅಮೇರಿಕದ ಪಠ್ಯಪುಸ್ತಕಗಳನ್ನು ಉಪಯೋಗಿಸಲು ಅನುಮತಿ ಇದೆಯೇ?" ಟುವಾನ್ ಕೇಳಿದ. "ಓಹೋ! ಅಗತ್ಯವಾಗಿ. ನನ್ನ ಪೂರ್ಣ ಒಪ್ಪಿಗೆ ಇದೆ" ಫ್ಯೊಂಗ್ ಭರವಸೆ ನೀಡಿದ.

ಈ ರೀತಿ ಹಳೆಯ, ಶಿಥಿಲಗೊಂಡ ಒಂದು ಸಾರ್ವಜನಿಕ ವಿದ್ಯಾಶಾಲೆಯಲ್ಲಿ ಬರಿಯ ೩೦೦ ಡಾಲರ್ ಬೆಲೆಯ ಪರಿಕರಗಳೊಂದಿಗೆ ಈ ಮುಕ್ತ ವಿಶ್ವವಿದ್ಯಾಲಯ ೧೯೯೦ರಲ್ಲಿ ಪ್ರಾರಂಭವಾಯಿತು. ಪ್ರಾರಂಭದಲ್ಲೇ ವಿಶ್ವವಿದ್ಯಾಲಯ ವಿಜಯವನ್ನು ಸಾಧಿಸಿತು. ಅಲ್ಪ ಕಾಲದಲ್ಲೇ ಎಂದರೆ ೧೯೯೩ರಲ್ಲಿ ಇದರ ವಿದ್ಯಾರ್ಥಿಗಳ ಸಂಖ್ಯೆ ಹನ್ನೆರಡು ಸಾವಿರವಾಯಿತು. ದೇಶದ ಇತರ ಪ್ರಾಂತಗಳ ಪ್ರಮುಖ ನಗರಗಳಲ್ಲಿ ಸ್ಥಾಪನೆಗೊಂಡ ಶಾಖೆಗಳಲ್ಲಿ ಸಾವಿರಾರು ವಿದ್ಯಾರ್ಥಿಗಳು! ರೇಡಿಯೋ ಮತ್ತು ದೂರದರ್ಶನದ ಮೂಲಕ ಪ್ರಸಾರವಾಗುವ ಶಾಲಾಪಾಠ

ಗಳನ್ನು ನಿಯಮಪೂರ್ವಕ ಕಲಿಯುವ ಹತ್ತು ಸಾವಿರಕ್ಕೂ ಮೇಲ್ಪಟ್ಟ ವಿದ್ಯಾರ್ಥಿ ಸಮುದಾಯ!

"ಸ್ಪರ್ಧಾತ್ಮಕ ಪ್ರಯೋಗಗಳೇ ನಮ್ಮ ಸಂಸ್ಥೆಯ ಜೀವನಾಡಿ." ಫ್ಯೊಂಗ್ ಹೆಮ್ಮೆಯಿಂದ ಹೇಳಿಕೊಳ್ಳುತ್ತಾನೆ. ನಮ್ಮೊಡನೆ ಸ್ಪರ್ಧಿಸಲಿಕ್ಕಾಗಿ ಇತರ ಸರಕಾರೀ ಶಾಲೆಗಳಲ್ಲೂ ಸುಧಾರಣೆಗಳು ಅನಿವಾರ್ಯವಾಗಿ ನಡೆವಂತಾಗಿದೆ.

ಸ್ವಾತಂತ್ರ್ಯದೆಡೆಗೆ ಸಾಗುವ ದಾರಿಯಲ್ಲಿ....

ವಿಯಟ್ನಾಮಿನ ಆರ್ಥಿಕ ಭವಿಷ್ಯವನ್ನು ರೂಪಿಸುವವರು ಟ್ರಾನ್ ಡಕ್ ನ್ಯಾಮ್, ಗ್ಯೊಯೆನ್ ಕ್ಸುವಾನ್ ಓಹ್ನ್ ನಂಥ ಚಿಂತನಶೀಲ, ಕ್ರಿಯಾಶೀಲ, ಧೃತಿಗೆಡದ ವ್ಯಕ್ತಿಗಳಾದರೆ, ಉಳಿದವರು ಪ್ರೊಫೆಸರ್ ಟುವಾನ್ ನಂಥವರ ನೆರಳಲ್ಲಿ ಕಲಿವ ತರುಣತರುಣಿಯರು.

೧೯೯೩ರಲ್ಲಿ ೫೫೦ಕ್ಕೂ ಹೆಚ್ಚು ವಿದೇಶೀ ಸಾಹಸೀ ಸಂಘಟನೆಗಳು ೪.೬ ಬಿಲಿಯನ್ ಡಾಲರ್‌ಗಳನ್ನು ಇಲ್ಲಿ ತೊಡಗಿಸಲು ಮುನ್ನುಗ್ಗಿ ಬಂದರು. ಸರಕಾರ ಅವರಿಗೆ ಮಂಜೂರಾತಿ ನೀಡಿದೆ. ವಿಯಟ್ನಾಮಿನ ತೈಲ ನಿಕ್ಷೇಪದಲ್ಲಿ ಕಾರ್ಯ ನಿರ್ವಹಿಸುವ ಶಾಸನಬದ್ಧ ಹಕ್ಕನ್ನು ಆಸ್ಟ್ರೇಲಿಯಾ, ಮಲೇಶಿಯಾ, ಫ್ರಾನ್ಸ್ ಮತ್ತು ಜಪಾನ್ ದೇಶಗಳ ಸಂಸ್ಥೆಗಳು ಪಡಕೊಂಡಿವೆ. ಇವೆಲ್ಲದರಿಂದ ವಿಯಟ್ನಾಮ್ ಇಂದು ಅಭಿವೃದ್ಧಿಯ ಪಥದಲ್ಲಿ ಸಾಗತೊಡಗಿದೆ. ಇಪ್ಪತ್ತು ವರ್ಷಗಳಿಂದ ಅಮೆರಿಕ ವಿಯಟ್ನಾಮಿನ ಜತೆ ವ್ಯಾಪಾರ ವಹಿವಾಟನ್ನು ನಿಷೇಧಿಸುತ್ತಲೇ ಬಂದಿದೆ. ವಿಯಟ್ನಾಮಿನಲ್ಲಿ ಅಂದು ನಡೆದಿದ್ದ ಯುದ್ಧದಲ್ಲಿ ಕಾಣೆಯಾದ ಅಮೆರಿಕದ ಸೈನಿಕರನ್ನು ವಾಪಸು ಅಮೆರಿಕಕ್ಕೆ ಕಳುಹಿಸಬೇಕೆಂಬುದು ಅಮೆರಿಕದ ಶರ್ತವಾಗಿತ್ತು. ಕಳೆದ ಫೆಬ್ರುವರಿಯಲ್ಲಿ ಅಮೆರಿಕದ ಅಧ್ಯಕ್ಷ ಬಿಲ್ ಕ್ಲಿಂಟನ್ ಈ ನಿಷೇಧವನ್ನು ತೆಗೆದುಹಾಕಿದರೂ ರಾಜಕೀಯವಾಗಿ ತನ್ನ ಈ ಹಿಡಿತದ ಹಕ್ಕನ್ನು ಕಾದಿರಿಸಿಕೊಂಡಿದ್ದಾರೆ.

ಅಮೆರಿಕದ ಮಾಜಿ ಅಧಿಕಾರಿ ಸೇಡ್ ಕ್ರೊಪ್ಸೀ ಈ ಬಗ್ಗೆ ಈ ರೀತಿ ಹೇಳುತ್ತಾರೆ "ವ್ಯಾಪಾರೀ ದಿಗ್ಬಂಧನವೀಗ ಕೊನೆಗೊಂಡಿರುವುದರಿಂದ ಆ ನತದೃಷ್ಟ ಅಮೆರಿಕನ್ ಸೈನಿಕರ ಬಗ್ಗೆ ಒಂದು ಇತ್ಯರ್ಥಕ್ಕೆ ಬರಲು ಇದೀಗ ದಾರಿತೆರೆದಂತಾಗಿದೆ." ಅವರು ಇನ್ನೂ ಮುಂದುವರಿದು "ಅಮೆರಿಕದ ಸಂಧಾನಗಳಿಂದ ವಿಯಟ್ನಾಮಿನ ಜನತೆಗೆ ರಾಜಕೀಯ ಸ್ವಾತಂತ್ರ್ಯವೂ ಬೇಗನೆ ಸಿಗುವ ಸಾಧ್ಯತೆ ಇದೆ" ಎಂದು ಅಭಿಪ್ರಾಯ ಪಡುತ್ತಾರೆ ಮತ್ತು ತಮ್ಮ ಕಾರ್ಯವಿಧಾನವನ್ನು ಈ ರೀತಿ ತಿಳಿಸುತ್ತಾರೆ:

"ಸಂಪೂರ್ಣ ಏಷ್ಯಾ ಖಂಡದಲ್ಲಿ ನಾವು ಪರಿಶೋಧಿಸಿ ತಿಳಿದ ವಿಚಾರವೆಂದರೆ ಆರ್ಥಿಕ ಸ್ವಾತಂತ್ರ್ಯವೇ ರಾಜಕೀಯ ಸ್ವಾತಂತ್ರ್ಯ ಎಂಬುದು. ಇದಕ್ಕಾಗಿ ನಾವು ಜನತೆಯ ಆರ್ಥಿಕ ಪ್ರತಿಭೆಯ ಕೊರಳನ್ನು ಬಂಧಿಸಿದ ಪಠಾರೆಯನ್ನು ಕಳಚಿ ಒಗೆವಂತೆ ಸರಕಾರವನ್ನು ಪ್ರೋತ್ಸಾಹಿಸುತ್ತೇವೆ ಮತ್ತು ವೈಯಕ್ತಿಕ ಸ್ವಾತಂತ್ರ್ಯವನ್ನು ವಿಸ್ತೃತಗೊಳಿಸುವ ಪ್ರಯತ್ನ ಮಾಡುತ್ತಿದ್ದೇವೆ."

ಗ್ಯೊವೆನ್ ಕ್ಸುವಾನ್ ಓಹ್ನ್‌ರ ಭಾವನೆ ಇದು: ವ್ಯಾಪಾರದ ಅಭಿವೃದ್ಧಿಯೊಂದೇ

ಪ್ರಜಾಪ್ರಭುತ್ವವನ್ನು ತಂದುಕೊಡುತ್ತದೆಂದು ನಿಶ್ಚಿತವಾಗಿ ಹೇಳುವಂತಿಲ್ಲ. ಆದರೆ ಹಣವಿದ್ದಲ್ಲಿಗೇ ಅಧಿಕಾರ ನಡೆದು ಬರುವುದು ಮಾತ್ರ ಸತ್ಯಸಂಗತಿ. ಧನ ಎಲ್ಲೇ ಇರಲಿ, ಅಲ್ಲಿಯೇ ಪ್ರಮುಖ ನಿರ್ಣಯಗಳನ್ನು ಕೈಗೊಳ್ಳಲಾಗುತ್ತದೆ. ಈಗಾಗಲೇ ಮಧ್ಯಮ ವರ್ಗದ ಜನಸಮೂಹದ ಸೃಷ್ಟಿಯಾಗಿದೆ! ಅವರು ಬಯಲಿಗೆ ಬಂದೇ ಬರುತ್ತಾರೆ. ಬೇಗನೆಯಾಗಲೀ ಅಥವಾ ತಡವಾಗಿಯೇ ಇರಲಿ, ಅವರು ರಾಜಕಾರಣದಲ್ಲಿ ಮಹತ್ವದ ನಿರ್ಣಾಯಕ ಪಾತ್ರವಹಿಸುವುದಂತೂ ಖಂಡಿತ. ಅದು ಅನಿವಾರ್ಯ! ಅವರನ್ನು ತಡೆದು ನಿಲ್ಲಿಸುವ ಶಕ್ತಿ ಯಾರಿಗೂ ಇರದು.



ಜನಸೇರಿದ ಸಂತೆಯಲ್ಲಿ ತಲೆನೋವು ಏಳುವಂತೆ ನಮ್ಮ ಜೀವನ ವಿಶ್ವವೆಂಬ ಸಂತೆಯಲ್ಲಿ ಹಲವು ಒದ್ದಾಟ, ಒದರಾಟಗಳನ್ನು ಎದುರಿಸಬೇಕಾಗುತ್ತದೆ.

—ಮಾರ್ಶ್‌ಫೀಲ್ಡ್

ಜೀವನದಲ್ಲಿ ಎರಡು ದುಃಖದಾಯಕವಾದ ವಿಷಯಗಳಿವೆ. ಒಂದು ನಮ್ಮ ಹೃದಯದಲ್ಲಿರುವ ಆಶೋತ್ತರಗಳನ್ನು ಕೊಡೆದು ಹಾಕುವುದು, ಇನ್ನೊಂದು ಆ ಆಶೋತ್ತರಗಳನ್ನು ಸಿದ್ಧಿಸಿಕೊಳ್ಳುವುದು.

—ಜಾರ್ಜ್ ಬರ್ನಾರ್ಡ್ ಶಾ

ಟಾನ್ಜೇನಿಯದಲ್ಲಿ ನಿರಕ್ಷರತಾ ನಿವಾರಣೆಯ ಇತಿಹಾಸ

ಟಿ. ಆರ್. ನಾಗಪ್ಪ

ವಸಾಹತು ಕಾಲದಲ್ಲಿ ವಯಸ್ಕರ ಶಿಕ್ಷಣ :

ವಸಾಹತು ಆಡಳಿತಕ್ಕೆ ಮುನ್ನ ಜನ ಜೀವನ ಕೇವಲ ತನ್ನ ಸಮಾಜದ ಚೌಕಟ್ಟಿಗೆ ಮಾತ್ರ ಸೀಮಿತವಾಗಿತ್ತು. ಆಗಾಗ್ಗೆ ಬುಡ ಕಟ್ಟುಗಳ ಮಧ್ಯೆ ವೈಮನಸ್ಯ ಉಂಟಾಗುತ್ತಿತ್ತು. ಆಗ ಅವರು ಪರಸ್ಪರ ವಿರುದ್ಧ ಹೋರಾಡುತ್ತಿದ್ದರು. ಅದರಿಂದ ಅವರು ಯುದ್ಧ ಕಲೆಯಲ್ಲಿ ಹೆಚ್ಚಿನ ಕೌಶಲ್ಯಗಳನ್ನು ಗಳಿಸಲು ತಮ್ಮ ಕಾಲವನ್ನು ವಿನಿಯೋಗಿಸುತ್ತಿದ್ದರು.

ಜೀವನ ನಡೆಸಲು ಕಸುಬನ್ನು ಕಲಿತು ಅದರ ಅಭಿವೃದ್ಧಿಗೆ ಶ್ರಮಿಸಬೇಕಿತ್ತು. ಜೊತೆಗೆ ತಮ್ಮ ಜೀವನದಲ್ಲಿ ನಡವಳಿಕೆಗಳನ್ನು ಮತ್ತು ಸಂಪ್ರದಾಯಗಳನ್ನು ಬೆಳಸಿಕೊಂಡು ಬಂದರು

ಹದಿನೆಂಟನೆಯ ಶತಮಾನದಲ್ಲಿ ಯೂರೋಪಿನ ಕ್ರೈಸ್ತಪಾದ್ರಿಗಳು ಆಫ್ರಿಕಾದಲ್ಲಿ ಕಾಲಿಟ್ಟರು. ಅವರು ಒಂದು ಕೈಲಿ ಬೈಬಲ್ ಇನ್ನೊಂದು ಕೈಲಿ ಔಷಧಿ ಶೀಷೆಯನ್ನು ಹಿಡಿದು ಬಂದರು ಎಂದು ಹೇಳಿದಲ್ಲಿ ತಪ್ಪಾಗಲಾರದು. ಅವರ ಉದ್ದೇಶ ಮೂರು ೧) ಕ್ರೈಸ್ತಮತ ಪ್ರಚಾರ ೨) ತಮ್ಮ ಪ್ರಭಾವವನ್ನು ಬೆಳೆಸುವುದು ೩) ಆಫ್ರಿಕಾದಲ್ಲಿ ನಾಗರೀಕತೆಯನ್ನು ಹರಡುವುದು !

ಪ್ರಾರಂಭದಲ್ಲಿ ಪಾದ್ರಿಗಳಿಗೆ ಆಫ್ರಿಕಾ ಭಾಷೆ ಗೊತ್ತಿರಲಿಲ್ಲ. ಅದರಿಂದ ಅವುಗಳನ್ನು ಕಷ್ಟಪಟ್ಟು ಕಲಿತರು. ಬೈಬಲನ್ನು ಸ್ಥಳೀಯ ಭಾಷೆಗಳಿಗೆ ಭಾಷಾಂತರ ಮಾಡಿ ಪ್ರಕಟಿಸಿದರು. ಎರಡನೆಯದಾಗಿ ಸ್ವಹಿಲಿ ಭಾಷೆಯನ್ನು ಕಲಿತು ಅದರಲ್ಲಿ ನಿಘಂಟನ್ನು ರಚಿಸಿದರು.

ಜನತೆಯಲ್ಲಿ ಶಿಕ್ಷಣವನ್ನು ಹರಡಲು ಕಾರ್ಯಕ್ರಮಗಳನ್ನು ರೂಪಿಸಿದರು. ಮೊದಲಾಗಿ ಮಕ್ಕಳ ಶಿಕ್ಷಣ ೨) ವಯಸ್ಕರ ಸಾಕ್ಷರತೆ ಮತ್ತು ಶಿಕ್ಷಣ ಪ್ರಸಾರ ಕಾರ್ಯಕ್ರಮಗಳನ್ನು ಕೈಕೊಂಡರು.

ಜರ್ಮನ್ನರು ಚರ್ಚುಗಳನ್ನು ಸ್ಥಾಪಿಸಿದರು. ಪ್ರಶ್ನೆಗಳನ್ನು ಹಾಕಿ ವಿವರಗಳನ್ನು ಪಡೆಯುವ ಸಾಕ್ರಟೀಸ್ ವಿಧಾನದ ಕೇಂದ್ರಗಳನ್ನು ಸ್ಥಾಪಿಸಿದ್ದು ಒಂದು ವಿಶೇಷ. ಶಾಲೆ, ಕಾಲೇಜು ಮತ್ತು ಕುಶಲ ಕಲಾ ತರಬೇತಿ ಕೇಂದ್ರಗಳು ವ್ಯವಸ್ಥೆ ಆದವು. ಮಿಷನರಿ ಶಾಲೆಗಳಲ್ಲಿ ಕೆಲಸ ಮಾಡಲು ಗುಮಾಸ್ತರ ತರಬೇತಿ ಕೇಂದ್ರ ಸ್ಥಾಪನೆ

ಆಯಿತು. ಆಸ್ಪತ್ರೆಗಳಲ್ಲಿ ಕೆಲಸ ಮಾಡಲು ದಾದಿಯರ ತರಬೇತಿ ಕೇಂದ್ರ ಅಸ್ತಿತ್ವಕ್ಕೆ ಬಂತು. ಮಕ್ಕಳಿಗೆ ಮತ್ತು ವಯಸ್ಕರಿಗೆ ಓದು ಬರಹ ಕಲಿಸಲು ಪ್ರಾಥಮಿಕ ಮತ್ತು ವಯಸ್ಕರ ಶಿಕ್ಷಣ ಶಾಲೆಗಳು ಆರಂಭವಾದುವು.

ಜರ್ಮನ್ನರು ತಮ್ಮ ಆಡಳಿತ ಭದ್ರತೆಯ ದೃಷ್ಟಿಯಿಂದ ಸೈನ್ಯ ಕಟ್ಟಿದರು. ಸೈನ್ಯಕ್ಕೆ ಸ್ಥಳೀಯರನ್ನು ಸೇರಿಸಿಕೊಂಡರು. ಅವರಿಗೆ ಜರ್ಮನ್ ಭಾಷೆಯನ್ನು ಕಲಿಸಿದರು. ವ್ಯವಸಾಯದ ಅಭಿವೃದ್ಧಿಯ ಬಗ್ಗೆ ಅವರ ಗಮನ ಹರಿಯಿತು. ೧೮೯೩ರಲ್ಲಿ ಟಾಂಗಾದಲ್ಲಿ ಅಮಾನಿ ವ್ಯವಸಾಯ ಸಂಸ್ಥೆಯನ್ನು ಹುಟ್ಟುಹಾಕಿದರು.

ಜರ್ಮನ್ನರು ವ್ಯವಸಾಯದ ಪ್ರಗತಿಗೆ ಸಂಶೋಧನೆ ಕೈಗೊಂಡರು. ಅವರು ಎರಡು ರೀತಿಯಲ್ಲಿ ವ್ಯವಸಾಯವನ್ನು ಮಾಡುತ್ತಿದ್ದರು. ತೀವ್ರ ಬೇಸಾಯ ಪದ್ಧತಿಯನ್ನು ಕೈಕೊಳ್ಳಲು ಹೊಲ ಮನೆಗಳನ್ನು ಸ್ಥಾಪಿಸಿದರು. ಕೆಲಸ ಮಾಡಲು ಗುಲಾಮರು ಸುಲಭವಾಗಿ ದೊರಕುತ್ತಿದ್ದರು. ಅವರನ್ನು ಬೇಸಾಯಕ್ಕೆ ಬಳಸಿಕೊಂಡರು. ಕೆಲಸದ ದೃಷ್ಟಿಯಿಂದ ಅವರಿಗೆ ಜರ್ಮನ್ ಭಾಷೆಯನ್ನು ಕಲಿಸಿದರು.

ಎರಡನೆಯದಾಗಿ ಸ್ಥಳೀಯರು ಕಾಫಿ, ಟೀ, ಹತ್ತಿ ಮುಂತಾದ ವಾಣಿಜ್ಯ ಬೆಳೆಗಳನ್ನು ಬೆಳೆಯುವಂತೆ ಒತ್ತಾಯ ಮಾಡಿದರು. ಆದರಿಂದ ಲಿಂಡಿಯಲ್ಲಿ ವ್ಯವಸಾಯಗಾರರಿಗೆ ಓದು ಬರಹ ಕಲಿಸಲು ವಾಣಿಜ್ಯ ಬೆಳೆಗಳಿಗೆ ಪೂರಕವಾದ ಪಠ್ಯಪುಸ್ತಕಗಳು ರಚನೆ ಆದವು. ಒಂದು ರೀತಿಯಲ್ಲಿ ಅಂದಿನ ತರಗತಿಗಳು ಇಂದಿನ ಕ್ರಿಯಾತ್ಮಕ ಸಾಕ್ಷರತಾ ತರಗತಿಯ ರೂಪದಲ್ಲಿದ್ದವು ಎಂದು ಹೇಳಿದಲ್ಲಿ ಪ್ರಾಯಶಃ ತಪ್ಪಾಗಲಾರದು. ಆ ಕಾಲದಲ್ಲಿ ನಡೆದ ತರಗತಿಗಳ ಬಗ್ಗೆ ವಿವರಗಳಿಲ್ಲ.

ಆಫ್ರಿಕನ್ನರು ಹಲವಾರು ಉದ್ಯೋಗಗಳಲ್ಲಿ ತೊಡಗಬೇಕಾಯಿತು. ಉಪಾಧ್ಯಾಯರು, ದಾದಿಯರು, ಗುಮಾಸ್ತರು, ಮರಗೆಲಸ, ಗಾರೆ ಕೆಲಸ ಮತ್ತು ತಾಂತ್ರಿಕ ಕೆಲಸ ಮಾಡಬಲ್ಲ ಕಾರ್ಯಕರ್ತರಿಗೆ ಟಾಂಗ ಮತ್ತು ದರಾಸಲಂನಲ್ಲಿ ಎರಡು ಕೇಂದ್ರ ಶಾಲೆಗಳನ್ನು ಜರ್ಮನ್ನರು ತೆರೆದರು. ಈ ಶಾಲೆಗಳಿಗೆ ಹೆಚ್ಚಾಗಿ ಸೇರಿದವರು ಯುವಕರು ಮತ್ತು ವಯಸ್ಕರು.

ಗ್ರಾಮಾಂತರ ಪ್ರದೇಶಗಳಲ್ಲಿ ಬುಷ್ ಶಾಲೆಗಳು ಆರಂಭವಾದುವು. ಶಾಲೆಗಳನ್ನು ನಡೆಸಲು ಕಟ್ಟಡಗಳು ಏರ್ಪಾಡಾದುವು. ಅಲ್ಲಿ ಸಾಕ್ರಟೀಸ್ ವಿಧಾನದಲ್ಲಿ ಶಾಲೆಯನ್ನು ಏರ್ಪಡಿಸುವುದು ಅವರ ಉದ್ದೇಶ ಆಗಿತ್ತು. ಸುವಾರ್ತೆಕಾರರು ಮತ್ತು ಉಪಾಧ್ಯಾಯರು ಈ ಶಾಲೆಗಳ ವಿದ್ಯಾರ್ಥಿಗಳು. ವಯಸ್ಕರಿಗೆ ಕ್ರೈಸ್ತ ಪಾದ್ರಿಗಳು ಅಧಿಕೃತವಾಗಿ ಸಾಕ್ಷರತಾ ಕಾರ್ಯಕ್ರಮಗಳನ್ನು ಶುರುಮಾಡಲಿಲ್ಲ. ಆದರೆ ವಸಾಹತುಗಳಲ್ಲಿ ಕಲಿಯಲು ಇಚ್ಛಿಸಿದವರಿಗೆ ಜರ್ಮನ್ ಭಾಷೆಯನ್ನು ಕಲಿಸಿದರು.

೧೯೧೧ರ ವೇಳೆಗೆ ೧೦೦೦ ಶಾಲೆಗಳು ಇದ್ದುವು. ಅವುಗಳಲ್ಲಿ ವಿದ್ಯಾರ್ಥಿಯರ ಸಂಖ್ಯೆ ೬೬,೬೪೭. ೧೨೫೦ ಆಫ್ರಿಕನ್ ಉಪಾಧ್ಯಾಯರು, ೨೮೭ ಮಂದಿ ಯುರೋಪಿಯನ್ ಉಪಾಧ್ಯಾಯರು ಕೆಲಸ ಮಾಡುತ್ತಿದ್ದರು. ಇವೆಲ್ಲಾ ಮಿಷನರಿ ಶಾಲೆಗಳು ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಅವುಗಳ ಪೈಕಿ ೮೩ ಶಾಲೆಗಳಿಗೆ ಜರ್ಮನ್ ಸರಕಾರದ ಅನುದಾನ ದೊರೆಯಿತು.

ಮೊದಲನೆಯ ಮಹಾ ಯುದ್ಧದಲ್ಲಿ ಜರ್ಮನಿಗೆ ಸೋಲಾಯಿತು (೧೯೧೮). ಆಗ ಅವರ ವಶದಲ್ಲಿದ್ದ ಪ್ರದೇಶಗಳು ಲೀಗ್ ಆಫ್ ನೇಷನ್ಸ್ ವಶಕ್ಕೆ ಬಂದುವು. ಅದು ಆಡಳಿತ ದೃಷ್ಟಿಯಿಂದ ಆ ಪ್ರದೇಶಗಳನ್ನು ಬ್ರಿಟನ್ನಿಗೆ ವಹಿಸಿತು.

ಬ್ರಿಟಿಷರು ಯಾವುದೇ ತೆರನಾದ ಶೈಕ್ಷಣಿಕ ಕಾರ್ಯಕ್ರಮಗಳನ್ನು ಕೈಗೊಳ್ಳಲಿಲ್ಲ. ೧೯೨೩ ರಲ್ಲಿ ಬ್ರಿಟಿಷ್ ಸರಕಾರ ವಸಾಹತು ಪ್ರದೇಶಗಳಿಗೆ ಶಿಕ್ಷಣದ ರೂಪರೇಷೆಯನ್ನು ರೂಪಿಸಲು ಒಂದು ಸಲಹಾ ಸಮಿತಿಯನ್ನು ರಚಿಸಿತು. ಅದು ೧೯೨೫ರಲ್ಲಿ ಒಂದು ವರದಿಯನ್ನು ಸಲ್ಲಿಸಿತು. ಕೈಕೊಳ್ಳಬಹುದಾದ ಶಿಕ್ಷಣ ಕಾರ್ಯಕ್ರಮಗಳು ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿರತಕ್ಕದ್ದು ಎಂಬುದು ಅದರ ತಿರುಳು. ಜೊತೆಗೆ ವಯಸ್ಕರ ಶಿಕ್ಷಣ ಅಗತ್ಯವನ್ನು ಮನಗಂಡಿತು. ವರದಿಯ ವಿಚಾರದಲ್ಲಿ ಬ್ರಿಟಿಷ್ ಸರಕಾರ ಯಾವ ಕಾರ್ಯಕ್ರಮವನ್ನು ಕೈಕೊಳ್ಳಲಿಲ್ಲ. ಬದಲಾಗಿ ಹತ್ತು ವರ್ಷದ ಒಂದು ಶಿಕ್ಷಣ ಕಾರ್ಯಕ್ರಮವನ್ನು ರೂಪಿಸಿತು. ಅದರ ಪ್ರಕಾರ ವಯಸ್ಕರ ಅಕ್ಷರ ಪ್ರಚಾರದ ರೂಪರೇಷೆ ಹೀಗಿದೆ.

೧) ಎರಡನೆಯ ಮಹಾಯುದ್ಧದಲ್ಲಿ (೧೯೩೯-೪೫) ಪಾಲುಗೊಂಡ ೬೮,೦೦೦ ಸೈನಿಕರಿಗೆ ಸಾಕ್ಷರತೆ ಮತ್ತು ವಯಸ್ಕರ ಶಿಕ್ಷಣ.

೨) ವ್ಯವಸಾಯದ ಉತ್ಪಾದನೆಗೆ ಪೂರಕವಾದ ಸಾಕ್ಷರತಾ ಕಾರ್ಯಕ್ರಮವನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಕೈಕೊಳ್ಳುವುದು.

೩) ೧೯೪೮-೧೯೫೩ರ ಅವಧಿಯಲ್ಲಿ ಬ್ರಿಟನ್ನಿನ ವಸಾಹತು ಕಚೇರಿಯ ಸೂಚನೆಯ ಪ್ರಕಾರ ವಿಚಾರ ಸಂಕಿರಣ ಮತ್ತು ಕಾರ್ಯಾಗಾರಗಳನ್ನು ನಡೆಸುವುದು.

ಲಂಡನ್ನಿನ ವಸಾಹತು ಕಚೇರಿಯಿಂದ ಆಗಾಗ್ಗೆ ಹಲವಾರು ಸೂಚನೆಗಳು ಹೊರಟಿದ್ದು ಒಂದು ವಿಶೇಷ. ಬ್ರಿಟಿಷ್ ಸರಕಾರಕ್ಕೆ ವಯಸ್ಕರ ಶಿಕ್ಷಣ ಕಾರ್ಯಕ್ರಮವನ್ನು ಕೈಕೊಳ್ಳಲು ಮನಸ್ಸಿರಲಿಲ್ಲ.

೧೯೪೮-೫೩ರ ಅವಧಿಯಲ್ಲಿ ನಡೆದ ಕೆಲವು ಮುಖ್ಯವಾದ ಸಾಕ್ಷರತಾ ಕಾರ್ಯಕ್ರಮಗಳ ವಿವರಗಳನ್ನು ತಿಳಿಯುವುದು ಒಳ್ಳೆಯದು. ಉಪಾರ, ಕಿನನ್‌ಡೋವಿ ಸಾಕ್ಷರತಾ ಪ್ರಯೋಗಗಳು ಮುಖ್ಯವಾದವು. ಅದರ ಆಶ್ರಯದಲ್ಲಿ ನಡೆದ ಕಾರ್ಯಕ್ರಮಗಳಲ್ಲಿ ಪಾಲುಗೊಂಡವರು ೧೫೦೦ ಮಂದಿ ಮಹಿಳೆಯರು. ಸಾಕ್ಷರತೆಯ ಜೊತೆಗೆ ವ್ಯವಸಾಯ, ಆರೋಗ್ಯ ಮತ್ತು ಕುಂಬಾರಿಕೆ ವಿಷಯಗಳನ್ನು ತರಬೇತಿಯಲ್ಲಿ ಅಳವಡಿಸಲಾಯಿತು. ೧೯೫೩ ರಲ್ಲಿ ೧೫೦೦ ಮಂದಿ ಮಹಿಳೆಯರು ಪರೀಕ್ಷೆಗೆ ಕುಳಿತರು. ಮೊದಲನೆಯ ಪರೀಕ್ಷೆಯಲ್ಲಿ ತೇರ್ಗಡೆ ಆದವರು ಕೆಲವರು. ಅವರ ಸಂಖ್ಯೆ ತಿಳಿಯದು. ಸಾಕ್ಷರತಾ ಕಾರ್ಯಕ್ರಮಕ್ಕೆ ಬೇಕಾದ ಪಠ್ಯಪುಸ್ತಕಗಳು ತಯಾರಾದುವು. ಹದಿನಾರು ಪುಟದ ನವಸಾಕ್ಷರರ ಪತ್ರಿಕೆ ಪ್ರಕಟವಾಯಿತು. ಉಪಾಧ್ಯಾಯರು ಸ್ವಯಂ ಸೇವಕರಾಗಿ ಸೇವೆ ಸಲ್ಲಿಸಿದರು. ಕಾಫಿ, ಟೀ ಮತ್ತು ಹತ್ತಿ ಬೆಳೆಗೆ ಪೂರಕವಾದ ಸಾಕ್ಷರತಾ ತರಗತಿ

ಗಳಲ್ಲಿ ಸೇರಿದ ವಿದ್ಯಾರ್ಥಿಗಳ ಸಂಖ್ಯೆ ೧೪,೫೦೦.

೧೯೫೨-೫೫ರ ಅವಧಿಯಲ್ಲಿ ಕೆನನ್ ದೋನಿ ನಗರ ಸಾಕ್ಷರತಾ ಕಾರ್ಯಕ್ರಮದ ಅಂಗವಾಗಿ ದರಾಸಲಂನಲ್ಲಿ ಒಂಬತ್ತು ವಯಸ್ಕರ ತರಗತಿಗಳು ಶುರು ಆದವು. ವಯಸ್ಕ ವಿದ್ಯಾರ್ಥಿಗಳು ನಿಗದಿಯಾದ ಶುಲ್ಕಕೊಡಬೇಕಾಗಿತ್ತು. ಅವರಿಗೆ ಬರೆಯಲು ಸೀಸದ ಕಡ್ಡಿ, ಎಕ್ಸರ್‌ಸೈಜು ಪುಸ್ತಕಗಳು ದೊರೆತವು. ಉಪಾಧ್ಯಾಯರು ತಮ್ಮ ಕೆಲಸಕ್ಕೆ ಸಂಭಾವನೆ ಪಡೆದರು. ತರಗತಿಗಳಿಗೆ ಹಾಜರಾದ ವಿದ್ಯಾರ್ಥಿಗಳ ಸಂಖ್ಯೆ ೭೦. ಅವರ ಪೈಕಿ ತೇರ್ಗಡೆ ಆದವರು ೩೭ ಮಂದಿ.

೧೯೬೧ರಲ್ಲಿ ಟಾನ್ಜೇನಿಯ ಸ್ವತಂತ್ರ ಪಡೆಯಿತು. ಆಗ ರಾಜ್ಯದಲ್ಲಿ ಬಡತನ ಅಜ್ಞಾನ ಮತ್ತು ರೋಗರುಜಿನಗಳು ತಾಂಡವಾಡುತ್ತಿದ್ದವು. ಸರಕಾರ ಅನೇಕ ಕಲ್ಯಾಣ ಕಾರ್ಯಕ್ರಮಗಳನ್ನು ಕೈಕೊಂಡಿತು.

ಶಾಲೆಗಳಲ್ಲಿ ಮತ್ತು ಆಸ್ಪತ್ರೆಗಳಲ್ಲಿ ಪಕ್ಷಪಾತ ಭಾವನೆ ತುಂಬಿ ತುಳುಕುತ್ತಿತ್ತು. ಅದನ್ನು ಕೊನೆಗಾಣಿಸುವ ವ್ಯವಸ್ಥೆ ಜಾರಿ ಆಯಿತು.

ಸರಕಾರದ ಆಡಳಿತದಲ್ಲಿ ಆಫ್ರಿಕನ್ನರಿಗೆ ಹೆಚ್ಚಿನ ಅವಕಾಶಗಳು ಲಭಿಸಿದುವು.

ವಸಾಹತು ಕಾಲದ ಆಡಳಿತ ನೂತನ ಪರಿಸ್ಥಿತಿಗೆ ಹೊಂದಿಕೊಳ್ಳಲು ಕಷ್ಟವಾಯಿತು.

ಆಗ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಹಾಜರಿ ಶೇಕಡ ೫೨.

ಸಾಮೂಹಿಕ ಅಭಿವೃದ್ಧಿ ಯೋಜನೆ ಸ್ವಾತಂತ್ರ್ಯಕ್ಕೂ ಮುನ್ನ ಜಾರಿಯಲ್ಲಿತ್ತು. ಸ್ವಾತಂತ್ರ ಬಂದ ನಂತರ ಈ ಯೋಜನೆಯಲ್ಲಿ ಸಾರ್ವಜನಿಕರು ಪಾಲುಗೊಳ್ಳುವಂತೆ ಹುರಿದುಂಬಿಸುವ ಕಾರ್ಯ ಶುರು ಆಯಿತು.

ನಿರಕ್ಷರತಾ ನಿವಾರಣೆ ಸಾಮೂಹಿಕ ಅಭಿವೃದ್ಧಿ ಯೋಜನೆಯ ಒಂದು ಕಾರ್ಯಕ್ರಮ. ವಯಸ್ಕರ ಶಿಕ್ಷಣ ಉಪಾಧ್ಯಾಯರ ತರಬೇತಿ ತೃಪ್ತಿಕರ ಆಗಿರಲಿಲ್ಲ. ಕಲಿಯುವವರ ಸಮಸ್ಯೆಗಳನ್ನು ಉಪಾಧ್ಯಾಯರ ತರಬೇತಿಯಲ್ಲಿ ಪರಿಹರಿಸುವಂತಹ ಅಂಶಗಳನ್ನು ಒಳಗೊಂಡಿರಲಿಲ್ಲ.

ಗ್ರಾಮೀಣರ ಸಮಸ್ಯೆಗಳು ಪ್ರಧಾನವಾಗಿ ಆರೋಗ್ಯ ಮತ್ತು ವ್ಯವಸಾಯ. ಇವುಗಳನ್ನು ನಿವಾರಿಸುವಂತಹ ಸಾಕ್ಷರತಾ ಕಾರ್ಯಕ್ರಮದ ಅವಶ್ಯಕತೆ ಇತ್ತು.

ಧಾರ್ಮಿಕ ಸಂಸ್ಥೆಗಳು ಅಕ್ಷರ ಪ್ರಚಾರ ತರಗತಿಗಳನ್ನು ಆರಂಭಿಸಿದವು. ಧಾರ್ಮಿಕ ಗ್ರಂಥಗಳನ್ನು ಅವಲೋಕಿಸುವಂತೆ ಪ್ರೋತ್ಸಾಹಿಸುವುದು ಸಾಕ್ಷರತಾ ಕಾರ್ಯಕ್ರಮದ ಉದ್ದೇಶ. ಸಾಕ್ಷರತಾ ಕಾರ್ಯಕ್ರಮದಲ್ಲಿ ತೇರ್ಗಡೆ ಆದವರನ್ನು ಮತ ಪ್ರಚಾರಕ್ಕೆ ಸೇರಿಸಿಕೊಳ್ಳುತ್ತಿದ್ದರು. ಧಾರ್ಮಿಕ ಸಂಸ್ಥೆಗಳು ಸಾಕ್ಷರತಾ ಕಾರ್ಯಕ್ರಮಕ್ಕೆ ಸಲ್ಲಿಸಿದ ಸೇವೆಯನ್ನು ಅಳೆಯಲು ಸಾಧನ ಆಗದು. ಆದರೂ ಅವರು ಈ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆ ಅಮೂಲ್ಯವಾದುದು.

೧೯೬೧-೬೯ರ ಅವಧಿಯಲ್ಲಿ ನಡೆದ ಸಾಕ್ಷರತಾ ಕಾರ್ಯಕ್ರಮದಲ್ಲಿ ಕೆಲವು ಕೊರತೆಗಳು ಕಂಡು ಬಂದವು.

ಅಕ್ಷರ ಪ್ರಚಾರ ಕಾರ್ಯಕ್ರಮದಲ್ಲಿ ವಿವಿಧ ಅಭಿವೃದ್ಧಿ ಇಲಾಖೆಗಳು ಮತ್ತು ವಯಸ್ಕರ ಶಿಕ್ಷಣ ಸಂಸ್ಥೆಗಳು ವ್ಯವಸ್ಥಿತವಾಗಿ ಪಾಲುಗೊಳ್ಳಲು ಅವಕಾಶ ಇರಲಿಲ್ಲ.

ದಕ್ಷರಾದ ಹಾಗೂ ಪೂರ್ಣ ಕಾಲದ ಉಪಾಧ್ಯಾಯರ ಕೊರತೆ.

ಸಮರ್ಪಣಾ ಭಾವದಿಂದ ಸೇವೆ ಸಲ್ಲಿಸ ಬಲ್ಲ ಕಾರ್ಯಕರ್ತರ ಅಭಾವ.

ಪಠ್ಯ ಪುಸ್ತಕ ಮತ್ತು ಪೂರಕ ಪುಸ್ತಕಗಳ ಕೊರತೆ.

ಹಣದ ಕೊರತೆ.

ಎಲ್ಲಕ್ಕಿಂತ ಮೇಲಾಗಿ ವಯಸ್ಕರ ಶಿಕ್ಷಣ ಕುರಿತು ಸರಿಯಾದ ನಿರೂಪಣೆ ಇರಲಿಲ್ಲ. ಅರುಷದಲ್ಲಿ ೧೯೬೭ ರಲ್ಲಿ "ತಾನು" ಪಾರ್ಟಿಯ ಸಮ್ಮೇಳನ ನಡೆಯಿತು. ಅದು ಇತರ ಕಾರ್ಯಕ್ರಮಗಳ ಜೊತೆಗೆ ನಿರಕ್ಷರತಾ ನಿವಾರಣಾ ವಿಚಾರದಲ್ಲಿ ಒಂದು ಸಮಗ್ರ ಸಾಕ್ಷರತಾ ಕಾರ್ಯಕ್ರಮವನ್ನು ರೂಪಿಸಿತು. ಅದರ ಪ್ರಕಾರ ವಯಸ್ಕರ ಶಿಕ್ಷಣದ ಉದ್ದೇಶ ಮೂರು ೧) ಜನತೆಯಲ್ಲಿ ಕಲಿಯುವ ಕುತೂಹಲ ಮೂಡಿಸುವುದು ೨) ಇತರರ ಅನುಭವವನ್ನು ವೈಜ್ಞಾನಿಕವಾಗಿ ಪರಿಶೀಲಿಸಿ ಅದನ್ನು ತಮ್ಮ ಪ್ರಗತಿಗೆ ಅಳವಡಿಸುವುದು ೩) ಸಮಾಜದಲ್ಲಿ ಎಲ್ಲರೂ ಸಮಾನರು ಎಂಬ ಭಾವನೆಯನ್ನು ಹುಟ್ಟುಹಾಕಿ ಬೆಳೆಸುವುದು. ಹೀಗಾಗಬೇಕಾದರೆ ಪ್ರತಿಯೊಬ್ಬನಲ್ಲಿ ತನ್ನ ಶಕ್ತಿಯ ಬಗ್ಗೆ ಅರಿವು ಮೂಡುವುದರ ಜೊತೆಗೆ ಆತ್ಮವಿಶ್ವಾಸ ಬೆಳೆಯತಕ್ಕದ್ದು.

ವಿಶ್ವ ಸಾಕ್ಷರತಾ ಪ್ರಾಯೋಗಿಕ ಕಾರ್ಯಕ್ರಮ :

೧೯೬೮ ರಲ್ಲಿ ಯುನೆಸ್ಕೊ ಪ್ರಾಯೋಗಿಕವಾಗಿ ವಿಶ್ವ ಸಾಕ್ಷರತಾ ಕಾರ್ಯಕ್ರಮವನ್ನು ೧೨ ರಾಷ್ಟ್ರಗಳಲ್ಲಿ ಪ್ರಾರಂಭಿಸಿತು. ಅವುಗಳ ಪೈಕಿ ಟಾನ್ಜೇನಿಯ ಒಂದು ಮವಾಂಜ ಯು.ಎನ್.ಡಿ.ಪಿ/ಯುನೆಸ್ಕೊ ಪ್ರಾಜೆಕ್ಟ್ (೧೯೬೮-೭೨) ಪ್ರಾರಂಭವಾಯಿತು. ವಿಕ್ಟೋರಿಯ ಸರೋವರದ ಸುತ್ತ ವ್ಯವಸಾಯ ಪ್ರಧಾನ ಕ್ಷೇತ್ರ. ಈ ಕ್ಷೇತ್ರದಲ್ಲಿ ಹನ್ನೆರಡು ಪ್ರಧಾನ ವಿಷಯಗಳಿಗೆ ಸಂಬಂಧಪಟ್ಟಂತೆ ಕ್ರಿಯಾತ್ಮಕ ಸಾಕ್ಷರತಾ ಪಠ್ಯ ಪುಸ್ತಕಗಳು ತಯಾರಾದವು.

೧) ಉತ್ತಮ ಹತ್ತಿ ಬೆಳೆ
೨) ಉತ್ತಮ ಬಾಳೆ ಬೆಳೆ
೩) ಉತ್ತಮ ಬತ್ತದ ಬೆಳೆ
೪) ಉತ್ತಮ ತೆಂಗಿನ ಬೆಳೆ
೫) ಉತ್ತಮ ಹೊಗೇಸೊಪ್ಪಿನ ಬೆಳೆ
೬) ಉತ್ತಮ ಮುಸುಕಿನ ಜೋಳದ ಬೆಳೆ
೭) ಉತ್ತಮ ಟೀ ಬೆಳೆ
೮) ಉತ್ತಮ ಗೇರು ಬೀಜದ ಬೆಳೆ
೯) ಸುಧಾರಿಸಿದ ಪಶು ಸಂಪತ್ತು
೧೦) ಕುಟುಂಬ ಯೋಜನೆ
೧೧) ರಾಜಕೀಯ ಶಿಕ್ಷಣ
೧೨) ಉತ್ತಮ ಮೀನುಗಾರಿಕೆ

ಮೇಲೆ ಹೇಳಿದ ೧೨ ವಿಷಯಗಳಿಗೆ ಸಂಬಂಧ ಪಟ್ಟಂತೆ ಸ್ವಹಿಲಿ ಭಾಷೆಯಲ್ಲಿ ಪಠ್ಯಪುಸ್ತಕಗಳು ರಚನೆ ಆದವು. ಪ್ರತಿಯೊಂದು ವಿಷಯದಮೇಲೆ ತಲಾ ಎರಡೆರಡು ಪಠ್ಯ ಪುಸ್ತಕಗಳು ತಯಾರಾದವು. ಪ್ರಾಜೆಕ್ಟಿನ ಅವಧಿ ೪ ವರ್ಷಗಳು. ತರಗತಿಯ ಅವಧಿ ಎರಡು ವರ್ಷ. ಮೂರು ಲಕ್ಷ ಮಂದಿ ವಯಸ್ಕ ಅನಕ್ಷರಸ್ಥರು ಈ ಕಾರ್ಯಕ್ರಮದಲ್ಲಿ ಪಾಲುಗೊಂಡರು.

ಮೌಲ್ಯ ಮಾಪನೆ:

ಕ್ರಿಯಾತ್ಮಕ ಸಾಕ್ಷರತಾ ಕಾರ್ಯಕ್ರಮದ ಮೌಲ್ಯಮಾಪನೆ ಈ ಮುಂದಿನಂತೆ ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿತು.

ಕಲಿಯುವವರ ಆರ್ಥಿಕ ಪರಿಸ್ಥಿತಿ ಸುಧಾರಿಸಿದೆ.

ರೈತರು ಕೃಷಿಯಲ್ಲಿ ಹಟ್ಟಿ ಗೊಬ್ಬರ, ರಸಗೊಬ್ಬರ ಮತ್ತು ಕ್ರಿಮಿನಾಶಗಳನ್ನು ಬಳಸುವರು. ಕೃಷಿ ಉತ್ಪನ್ನ ಹೆಚ್ಚಿದೆ. ಅವರೂ ಕಳೆ ಕೀಳಲು ಇನ್ನೂ ಕೈಗುದ್ದಲಿಯನ್ನು ಬಳಸುತ್ತಿರುವರು.

ಸಾಕ್ಷರರಲ್ಲಿ ಸ್ವಲ್ಪಮಟ್ಟಿನ ರಾಜಕೀಯ ಪ್ರಜ್ಞೆ ಮೂಡಿದೆ. ಅವರು ಚುನಾವಣೆಯಲ್ಲಿ ಮತ ಚಲಾಯಿಸಿರುವರು.

ರಾಜಕೀಯ ಪಾರ್ಟಿ ಮತ್ತು ಸರಕಾರ ಏರ್ಪಡಿಸಿದ ಸಭೆಗಳಲ್ಲಿ ಭಾಗವಹಿಸುವರು. ಪಾರ್ಟಿ ಮತ್ತು ಸರಕಾರದ ವಿವಿಧ ಹಂತಗಳಲ್ಲಿ ಅನೇಕ ಸ್ಥಾನಮಾನಗಳನ್ನು ಪಡೆದಿರುವರು.

ವೃತ್ತಪತ್ರಿಕೆಗಳನ್ನು ಮತ್ತು ಸಾಕ್ಷರೋತ್ತರ ಸಾಹಿತ್ಯವನ್ನು ಓದುವರು. ಓದು ಬರಹ ಕಲಿತವರ ಪೈಕಿ ಸೇಕಡ ೬೭ ಮಂದಿ ವೃತ್ತಪತ್ರಿಕೆಗಳನ್ನು ಅವಲೋಕಿಸುವರು.

ಆಹಾರ ಬಳಕೆಯ ಬಗ್ಗೆ ಪ್ರಶ್ನಿಸಿದಾಗ ಸೇಕಡ ೯೫ ಮಂದಿ ಸಮತೋಲನ ಆಹಾರ ಉಪಯೋಗಿಸುವರು. ಸೇಕಡ ೪೩ ಮಂದಿ ಶುದ್ಧವಾದ ನೀರನ್ನು ಕುಡಿಯುವರು. ಸೇಕಡ ೫೦ ಮಂದಿ ತಾವು ಕುಡಿಯುವ ನೀರಿನ ಗುಣಮಟ್ಟದ ಬಗ್ಗೆ ತಲೆಗೆ ಹಚ್ಚಿಕೊಂಡಿಲ್ಲ.

ಕ್ರಿಯಾತ್ಮಕ ಸಾಕ್ಷರತಾ ಕಾರ್ಯಕ್ರಮದಿಂದ ಕಲಿಯುವವರ ಜೀವನದಲ್ಲಿ ಬದಲಾವಣೆಯನ್ನು ಕಾಣಬಹುದು.

ಕ್ರಿಯಾತ್ಮಕ ಸಾಕ್ಷರತಾ ಕಾರ್ಯಕ್ರಮದಲ್ಲಿ ಆರೋಗ್ಯ, ವ್ಯವಸಾಯ, ಪಶುಪಾಲನೆ ಇಲಾಖೆಯ ವಿಸ್ತರಣಾಧಿಕಾರಿಗಳು ಪಾಲುಗೊಂಡಿರುವರು. ಆದ್ದರಿಂದ ಇವರೂ ಸಹ ಕಾರ್ಯಕ್ರಮದ ಯಶಸ್ಸಿಗೆ ಕಾರಣರು.

ರಾಷ್ಟ್ರೀಯ ಸಾಕ್ಷರತಾ ಕಾರ್ಯಕ್ರಮ:

ವಿಶ್ವ ಸಾಕ್ಷರತಾ ಕಾರ್ಯಕ್ರಮದೊಂದಿಗೆ ೧೯೭೧ ರಲ್ಲಿ ರಾಷ್ಟ್ರೀಯ ಸಾಕ್ಷರತಾ ಕಾರ್ಯಕ್ರಮ ಪ್ರಾರಂಭವಾಯಿತು. ೧೯೭೫ರ ವೇಳೆಗೆ ಪೂರ್ಣ ಸಾಕ್ಷರತೆಯನ್ನು ಸಾಧಿಸಬೇಕೆಂಬ ಗುರಿ ಇತ್ತು. ಎಲ್ಲ ಕಡೆ ರಾಜಕೀಯ ಪಾರ್ಟಿಗಳು ವಯಸ್ಕರ ಶಿಕ್ಷಣ ಕಾರ್ಯಕ್ರಮದಿಂದ ಅಧಿಕೃತವಾಗಿ ದೂರ ಇರುತ್ತವೆ. ಪಾರ್ಟಿಯ ಕೆಲಸಗಾರರು ವೈಯುಕ್ತಿಕವಾಗಿ ಸಾಕ್ಷರತಾ ಕಾರ್ಯಕ್ರಮದಲ್ಲಿ ಪಾಲುಗೊಳ್ಳುವರು. ಟಾನ್ಜೇನಿಯದಲ್ಲಿ ಏಕಪಕ್ಷ ಸರಕಾರ ಇದೆ. ಆದರಿಂದ ಸರಕಾರದ ಆಡಳಿತ ಚುಕ್ಕಾಣಿಯನ್ನು ಹಿಡಿದಿರುವ 'ತಾನು' ಪಾರ್ಟಿ ನೇರವಾಗಿ ಮತ್ತು ತೀವ್ರವಾಗಿ ತನ್ನನ್ನು ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡಿರುವುದು ಒಂದು ವಿಶೇಷ. ೧೯೯೫ರ ಹೊತ್ತಿಗೆ ರಾಷ್ಟ್ರೀಯ ಚುನಾವಣೆಯಲ್ಲಿ ಬಹು ಪಾರ್ಟಿಗಳು ಪಾಲುಗೊಳ್ಳಲು ಅವಕಾಶ ಇದೆ.

ಸರಕಾರ ಮತ್ತು ಆಡಳಿತ ಪಕ್ಷದಿಂದ ಉಪಾಧ್ಯಾಯರು ಸಾಕ್ಷರತಾ ಕಾರ್ಯಕ್ರಮ ಕೈಕೊಳ್ಳಲು ಮುಂದಾದರು.

ಖಾಸಗಿ ಸ್ವಯಂ ಸೇವಾಸಂಸ್ಥೆಗಳು ಮತ್ತು ಕಂಪನಿಗಳು ಸಾಕ್ಷರತಾ ಚಳುವಳಿಗೆ

ಹಣವನ್ನು ಮೀಸಲಾಗಿಡಬೇಕೆಂಬ ಮನವಿಯನ್ನು ಸರಕಾರ ಹೊರಡಿಸಿತು.

೧೯೬೭ರ ಜನಗಣತಿಯ ಪ್ರಕಾರ ದೇಶದಲ್ಲಿ ೧೩ ವಯಸ್ಸು ಮತ್ತು ಅದಕ್ಕೆ ಮೀರಿದವರ ವಯಸ್ಕ ಅನಕ್ಷರಸ್ಥರು ೫೨ ಲಕ್ಷ. ೧೯೮೬ರ ವೇಳೆಗೆ ಅವರ ಸಂಖ್ಯೆ ೬೩,೧೨,೨೮೮ಕ್ಕೆ ಏರಿತು. ಈ ರೀತಿ ಅನಕ್ಷರಸ್ಥರ ಸಂಖ್ಯೆ ಏರಲು ಕಾರಣಗಳು ಹೀಗಿವೆ.

ಗ್ರಾಮಗಳಲ್ಲಿ ಅನಕ್ಷರಸ್ಥರ ಸಂಖ್ಯೆಯನ್ನು ಖರಾರುವಾಕ್ಕಾಗಿ ದಾಖಲು ಮಾಡದಿರುವುದು.

ಶಾಲೆಗೆ ಹೋಗುವ ಮಕ್ಕಳ ಲೆಕ್ಕವನ್ನು ಸರಿಯಾಗಿ ಇಡದೆ ಇರುವುದು.

ಬಡತನ ಮುಂತಾದ ಕಾರಣಗಳಿಂದ ಶಾಲೆಗಳನ್ನು ಮಧ್ಯದಲ್ಲೇ ಬಿಡುವುದು.

ಓದು ಬರಹ ಕಲಿತ ವಯಸ್ಕರು ಅನಕ್ಷರತೆಗೆ ಜಾರುವುದು.

ನೆರೆಹೊರೆಯ ದೇಶಗಳಿಂದ ಬಂದ ನಿರಾಶ್ರಿತರು.

ಜನತೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ವಲಸೆ ಹೋಗುವುದು.

ಓಬೀರಾಯನ ಕಾಲದ ಸಂಪ್ರದಾಯಗಳಿಂದ ರಾತ್ರಿ ಶಾಲೆಗೆ ಸೇರದೆ ಇರುವುದು.

ರಾಷ್ಟ್ರೀಯ ಸಾಕ್ಷರತಾ ಕಾರ್ಯಕ್ರಮ ಎರಡು ಹಂತಗಳಲ್ಲಿ ನಡೆಯಿತು. ಮೊದಲ ಹಂತದಲ್ಲಿ ಅಂದರೆ ೧೯೭೨ ರಿಂದ ೧೯೭೪ರ ಅವಧಿಯಲ್ಲಿ ನಾಲ್ಕು ಮಿಲಿಯನ್ ಸದಸ್ಯರು ರಾತ್ರಿ ಶಾಲೆಗಳಿಗೆ ಸೇರಿದರು. ೧೯೭೪-೧೯೭೫ರ ಅವಧಿಯಲ್ಲಿ ಉಳಿದ ೧.೨೦ ಮಿಲಿಯನ್ ಅನಕ್ಷರಸ್ಥರು ವಯಸ್ಕರ ಶಾಲೆಗಳಿಗೆ ಸೇರಿದರು.

ಎಲ್ಲ ಕಡೆಯಲ್ಲೂ ನಡೆಯುವಂತೆ ತರಗತಿಗಳು ಪ್ರಾಥಮಿಕ ಪಾಠಶಾಲೆ, ಚರ್ಚ್ ಮಸೀದಿ, ಜನತಾ ಶಿಕ್ಷಣ ಕೇಂದ್ರ ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿ ನಡೆದವು. ರಾಜಕೀಯ ಪಾರ್ಟಿ ಕಚೇರಿಗಳಲ್ಲಿ ತರಗತಿಗಳು ಸೇರುತ್ತಿದ್ದುದು ಒಂದು ವಿಶೇಷ. ಕೆಲವು ಹಳ್ಳಿಗಳಲ್ಲಿ ತರಗತಿಗಳನ್ನು ನಡೆಸಲು ಕಟ್ಟಡಗಳನ್ನು ಕಟ್ಟಿರುವುದೂ ಉಂಟು. ಮತ್ತೆ ಕೆಲವು ಪ್ರದೇಶಗಳಲ್ಲಿ ಮರದ ಕೆಳಗೆ ವಿದ್ಯಾರ್ಥಿಗಳು ಸೇರಿ ಓದು ಬರಹ ಕಲಿಯುತ್ತಿದ್ದರು.

ಪ್ರಾಥಮಿಕ ಶಾಲಾ ಉಪಾಧ್ಯಾಯರು, ಪ್ರೌಢ ಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳು ಶಾಲೆಗಳನ್ನು ನಡೆಸಲು ಮುಂದಾದರು. ಇವರ ಜೊತೆಗೆ ಸ್ವಯಂಸೇವಕರು ಕೈ ಗೂಡಿಸಿದರು.

ವಾರದಲ್ಲಿ ಮೂರು ದಿನಗಳು ಮಾತ್ರ ತರಗತಿಗಳು. ಅದರ ಅವಧಿ ಎರಡು ಗಂಟೆ. ತರಗತಿ ನಡೆಯುವ ವೇಳೆಯನ್ನು ಸಾಮಾನ್ಯವಾಗಿ ಗ್ರಾಮಸ್ಥರು ನಿರ್ಧರಿಸುತ್ತಿದ್ದರು. ಶಾಲೆಗಳು ಸಾಮಾನ್ಯವಾಗಿ ಮಧ್ಯಾಹ್ನದ ವೇಳೆ ನಡೆಯುತ್ತಿದ್ದವು. ಕಾರ್ಮಿಕರು ಮತ್ತು ಇತರ ಉದ್ಯೋಗಿಗಳು ಕಛೇರಿಯ ವೇಳೆಯಲ್ಲಿ ಕಲಿಯಲು ತೊಡಗಿದರು.

೧೯೬೯-೧೯೮೬ರ ಅವಧಿಯಲ್ಲಿ ನಿರಕ್ಷರತಾ ನಿವಾರಣೆಯಲ್ಲಿ ಪಾಲುಗೊಂಡಿರುವವರ ವಿವರಗಳು

ಸಾಲು	ಗಂಡಸರು (ಶೇಕಡ)	ಹೆಂಗಸರು (ಶೇಕಡ)	ಅನಕ್ಷರತೆ (ಶೇಕಡ)
೧೯೬೭	೫೪	೮೦	೬೯
೧೯೭೫	೩೪	೪೪	೩೯
೧೯೭೭	೨೩	೩೫	೨೭
೧೯೮೧	೧೫	೨೭	೨೧
೧೯೮೩	೧೦	೨೦	೧೫
೧೯೮೬	೭.೫	೧೨	೯.೬

ಮೌಲ್ಯ ಮಾಪನೆ:

೧೯೭೫ ರಲ್ಲಿ ರಾಷ್ಟ್ರವಟ್ಟದಲ್ಲಿ ಒಂದು ಪರೀಕ್ಷೆ ನಡೆಯಿತು. ೫..೨ ಮಿಲಿಯನ್ ಅನಕ್ಷರಸ್ಥರ ಪೈಕಿ ೫.೧೮ ಮಿಲಿಯನ್ ಅನಕ್ಷರಸ್ಥರು ತರಗತಿಗಳಿಗೆ ಸೇರಿದ್ದರು. ಅಂದರೆ ತರಗತಿಗಳಿಗೆ ಸೇರಿದವರು ಶೇ|| ೯೯ ಮಂದಿ. ಇವರ ಪೈಕಿ ಪರೀಕ್ಷೆಗೆ ಕುಳಿತವರ ಸಂಖ್ಯೆ ೩.೮ ಮಿಲಿಯನ್ ಅಂದರೆ ತರಗತಿಗೆ ಸೇರಿದವರ ಪೈಕಿ ಶೇಕಡ ೭೫ ಮಂದಿ ಪರೀಕ್ಷೆಗೆ ಕುಳಿತರು. ಅವರ ಪೈಕಿ ತೇರ್ಗಡೆ ಆದವರು ೧.೪ ಮಿಲಿಯನ್ ಅಂದರೆ ಶೇ||೩೭.

ಮೌಲ್ಯಮಾಪನೆಗೆ ಒಳಗಾದ ವಯಸ್ಕ ವಿದ್ಯಾರ್ಥಿಗಳು–ಗಂಡಸರು, ಹೆಂಗಸರು ಆಯಾ ಸಾಲಿಗೆ ನಿರಕ್ಷರತೆಯ ಪ್ರಮಾಣ ೧೯೭೫, ೧೯೭೭, ೧೯೮೧, ೧೯೮೩ ಮತ್ತು ೧೯೮೬ನೆಯ ಸಾಲುಗಳಲ್ಲಿ ಅಕ್ಷರಸ್ಥರಾದವರು

			ಅಕ್ಷರಸ್ಥರಾದವರು	
ಸಾಲು	ಗಂಡಸರು	ಹೆಂಗಸರು	ಒಟ್ಟು	ಅನಕ್ಷರತೆ (ಶೇಕಡ)
೧೯೭೫	೭೨೨,೯೪೭	೬೮೧,೦೩೮	೧,೪೦೩,೯೦೫	೩೯
೧೯೭೭	೪೫೩,೯೫೧	೩೫೨,೪೭೦	೮೦೬,೪೨೧	೨೭
೧೯೮೧	೪೨೯,೯೨೯	೩೯೮,೯೯೬	೮೨೮,೯೨೫	೨೧
೧೯೮೩	೩೦೯,೦೯೪	೩೭೦,೪೧೪	೬೭೯,೫೦೮	೧೫
೧೯೮೬	೪೬೫,೭೩೭	೬೭೭,೩೩೯	೧,೧೪೩೦೭೬	೯.೬

ಸಾಕ್ಷರೋತ್ತರ ಕಾರ್ಯಕ್ರಮ

ಸಾಕ್ಷರತೆಯನ್ನು ದೃಢಪಡಿಸಲು ಮತ್ತು ಮುಂದುವರಿಸಲು ಸಾಕ್ಷರೋತ್ತರ ಕಾರ್ಯಕ್ರಮ ಅನಿವಾರ್ಯ. ಈ ಕಾರ್ಯಕ್ರಮ ಪ್ರಾರಂಭವಾದದ್ದು ೧೯೭೭ರಲ್ಲಿ. ಪೌಷ್ಠಿಕ ಆಹಾರ, ಮೀನುಗಾರಿಕೆ, ರಾಜ್ಯಶಾಸ್ತ್ರ, ಆರ್ಥಿಕ ಪರಿಸ್ಥಿತಿ ಮುಂತಾದ ವಿಷಯಗಳ ಮೇಲೆ ಪುಸ್ತಕಗಳು ತಯಾರಾದವು. ಉಪನ್ಯಾಸಗಳು, ಚರ್ಚೆ ಮುಂತಾದವು ಸಾಕ್ಷರೋತ್ತರ ಕಾರ್ಯಕ್ರಮದ ಅಂಗವಾಗಿ ನಡೆದವು.

೧೯೮೩ರಲ್ಲಿ ಸಾಕ್ಷರೋತ್ತರ ಕಾರ್ಯಕ್ರಮದ ಮೌಲ್ಯಮಾಪನೆ ನಡೆಯಿತು. ಈ ಕಾರ್ಯಕ್ರಮಕ್ಕೆ ದಾಖಲಾದವರು ೧೪,೨೫,೬೯೦ ಮಂದಿ. ಅವರ ಪೈಕಿ ಪರೀಕ್ಷೆಗೆ ಕುಳಿತವರು ೫,೧೯,೭೭೦ ಮಂದಿ. ಅವರ ಪೈಕಿ ತೇರ್ಗಡೆ ಆದವರು ೨,೧೮,೫೪೨ ತೇರ್ಗಡೆ ಆಗದ ೨೩೮,೮೨೮ ಮಂದಿ ಸಾಕ್ಷರೋತ್ತರ ಕಾರ್ಯಕ್ರಮ ಮುಂದುವರಿಸಿದರು. ೧೯೮೬ರಲ್ಲಿ ನಡೆದ ಸಾಕ್ಷರೋತ್ತರ ಪರೀಕ್ಷೆಗೆ ಕುಳಿತವರು ೧೭೪,೩೫೩ ಮಂದಿ. ಅವರ ಪೈಕಿ ತೇರ್ಗಡೆ ಆದವರು ೧೨೮,೯೭೮.

ಮೌಲ್ಯಮಾಪನೆಯಲ್ಲಿ ಕಂಡುಬಂದ ಕೊರತೆಗಳನ್ನು ಸುಧಾರಿಸಲು ೧) ವ್ಯವಸಾಯ ಮತ್ತು ಪಶುಪಾಲನೆ ೨) ಗೃಹ ವಿಜ್ಞಾನ ಮತ್ತು ಆರೋಗ್ಯ ೩) ಕುಟೀರ ಕೈಗಾರಿಕೆ (ಮರಗೆಲಸ ಇತ್ಯಾದಿ) ವಿಷಯಗಳ ಮೇಲೆ ಸಾಹಿತ್ಯ ರಚಿಸುವ ಏರ್ಪಾಡಾಯಿತು.

ನವ ಸಾಕ್ಷರರ ಪತ್ರಿಕೆ :

೧೯೬೮ರಲ್ಲಿ ಕ್ರಿಯಾತ್ಮಕ ಸಾಕ್ಷರತಾ ತರಗತಿಗಳು ಪ್ರಾರಂಭವಾದವಷ್ಟೆ. ಆಗ ನವ ಸಾಕ್ಷರರ ಸಲುವಾಗಿ ಮವಾಂಜ ರಾಷ್ಟ್ರೀಯ ಸಾಕ್ಷರತಾ ಕೇಂದ್ರದಿಂದ ನಾಲ್ಕು ನವ ಸಾಕ್ಷರರ ಪತ್ರಿಕೆಗಳು ಪ್ರಕಟವಾಗುತ್ತಿದ್ದವು. ಪತ್ರಿಕೆಯ ಉಪಯುಕ್ತತೆ ಮನವರಿಕೆ ಆಯಿತು.

ಯುನೆಸ್ಕೊ ಮತ್ತು ರಾಯಲ್ ನಾರ್ವಿಜಿಯನ್ ಏಜನ್ಸಿ ಫಾರ್ ಇಂಟರ್‌ನ್ಯಾಷನಲ್ ಡೆವಲಪ್‌ಮೆಂಟ್ (NORAD) ಏಜನ್ಸಿಯ ನೆರವಿನಿಂದ ೫ ಪತ್ರಿಕೆಗಳು ಪ್ರಕಟವಾದವು. ೧೯೭೦ರ ವೇಳೆಗೆ ಐದು ವಿಭಾಗಗಳಲ್ಲಿ ಮುದ್ರಣಾಲಯಗಳು ಸ್ಥಾಪನೆ ಆದವು. ಟಾನ್ಜೇನಿಯ ರಾಜ್ಯದಲ್ಲಿ ಏಳು ಗ್ರಾಮೀಣ ಪತ್ರಿಕೆಗಳು, ಜಾಂಜಿಬಾರಿನಿಂದ ಒಂದು ಒಟ್ಟು ಎಂಟು ಪತ್ರಿಕೆಗಳು ಪ್ರಕಟವಾಗುತ್ತಿದ್ದವು. ಪ್ರತಿಯೊಂದು ಕೇಂದ್ರ ೫೦ ಸಾವಿರ ಪತ್ರಿಕೆಗಳು, ಮವಾಂಜದಲ್ಲಿ ಒಂದು ಲಕ್ಷ ಪ್ರತಿಗಳು ಪ್ರಕಟವಾಗುತ್ತಿವೆ. ಒಟ್ಟು ಪ್ರಕಟವಾಗುತ್ತಿರುವ ಪ್ರತಿಗಳ ಸಂಖ್ಯೆ ೪.೫ ಲಕ್ಷ. ಗ್ರಾಮೀಣ ಪ್ರದೇಶಗಳಲ್ಲಿರುವ ನವ ಸಾಕ್ಷರರಿಗೆ ಪತ್ರಿಕೆಗಳು ಅಂಚೆಗೆ ಬದಲಾಗಿ ಅಧಿಕಾರಿಗಳ ಮೂಲಕ ವಿತರಣೆ ಆಗುತ್ತಿವೆ.

ಟಾನ್ಜೇನಿಯ ಪೌಷ್ಠಿಕ ಆಹಾರ ಕೇಂದ್ರ, ಯೂನಿಸೆಫ್ ಮತ್ತು ನ್ಯಾಷನಲ್ ಎನ್‌ವೈರ್ನಮೆಂಟಲ್ ಸಂಸ್ಥೆಗಳು ಮತ್ತು ಟಾನ್ಜೇನಿಯ ಸರ್ಕಾರ ಮುಖ್ಯವಾದ ಸುದ್ದಿ ಮತ್ತು ವಿಷಯಗಳನ್ನು ಈ ಪತ್ರಿಕೆಗಳ ಮೂಲಕ ಓದುಗರಿಗೆ ಮುಟ್ಟಿಸುತ್ತಿವೆ.

ರೇಡಿಯೊ ಮೂಲಕ ಶಿಕ್ಷಣ :

ಪ್ರಾಯೋಗಿಕ ವಿಶ್ವ ಸಾಕ್ಷರತಾ ಕಾರ್ಯಕ್ರಮದ ಅಂಗವಾಗಿ ೧೯೭೪ರಲ್ಲಿ ರೇಡಿಯೊ ಮೂಲಕ ಶಿಕ್ಷಣ ಪ್ರಾರಂಭವಾಯಿತು. ಮವಾಂಜ ರಾಷ್ಟ್ರೀಯ ಸಾಕ್ಷರತಾ ಕೇಂದ್ರದಲ್ಲಿ ಮತ್ತು ದರಾಸೆಲಂ ವಯಸ್ಕರ ಶಿಕ್ಷಣ ಕೇಂದ್ರದಲ್ಲಿ ರೇಡಿಯೊ ಶಿಕ್ಷಣ ವಿಭಾಗ ಸ್ಥಾಪನೆ ಆಯಿತು. ವಯಸ್ಕರ ಶಿಕ್ಷಣ ಇಲಾಖೆ ೭,೦೦೦ ವಯಸ್ಕರ ಶಿಕ್ಷಣ ಕೇಂದ್ರಗಳಿಗೆ ರೇಡಿಯೊಗಳನ್ನು ವಿತರಿಸಿತು. ಅವುಗಳ ಪೈಕಿ ಯೂನೆಸ್ಕೊ ಕಾಣಿಕೆ ೩,೦೦೦ ರೇಡಿಯೊಗಳು. ಶಿಕ್ಷಣ ಸಂಸ್ಥೆಗಳಲ್ಲಿರುವ ರೇಡಿಯೊ ಕೇಂದ್ರಗಳು ವಯಸ್ಕರಿಗೆ ಮತ್ತು ಶಾಲಾ ಮಕ್ಕಳಿಗೆ ಸೇವೆ ಸಲ್ಲಿಸುತ್ತಿವೆ.

ರೇಡಿಯೊ ಗೋಷ್ಠಿಗಳು ತರಬೇತಾದ ಮುಂದಾಳುಗಳ ನೇತೃತ್ವದಲ್ಲಿ ನಡೆಯುವುವು. ವಯಸ್ಕರ ಶಿಕ್ಷಣ ಇಲಾಖೆ ಸಾಕ್ಷರೋತ್ತರ ಕಾರ್ಯಕ್ರಮಕ್ಕೆ ಪೂರಕವಾದ ಕಾರ್ಯಕ್ರಮಗಳನ್ನು ವಿವಿಧ ಅಭಿವೃದ್ಧಿ ಇಲಾಖೆಗಳ ಸಹಕಾರದಿಂದ ಪ್ರಸಾರ ಮಾಡುವುದು. ಕಿಕೋಣಿ ಕಾಲೇಜು ರಾಜಕೀಯ ಶಿಕ್ಷಣವನ್ನು, ದರಾಸೆಲಂನಲ್ಲಿರುವ ಟಾನ್ಜೇನಿಯ ವಿಶ್ವವಿದ್ಯಾಲಯ ಕಾನೂನಿನ ವಿಚಾರದಲ್ಲಿ ತಿಳಿವಳಿಕೆಯನ್ನು ರೇಡಿಯೊ ಮೂಲಕ ಬಿತ್ತರಿಸುವುವು. ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳ ವಿಚಾರದಲ್ಲಿ ಪ್ರಸಾರ ಮಾಡಲು ಪ್ರತ್ಯೇಕ ಸಂಸ್ಥೆಗಳು ಸಹಕರಿಸುವುವು.

ರೇಡಿಯೊ ಗೋಷ್ಠಿಗಳು ಕಾರ್ಯಕ್ರಮಗಳ ಬಗ್ಗೆ ತಮ್ಮ ಸಲಹೆ ಮತ್ತು ಅಭಿಪ್ರಾಯ ನೀಡಬಹುದು. ಹೊಸ ಹೊಸ ಕಾರ್ಯಕ್ರಮಗಳನ್ನು ಮಾಡುವಂತೆ ಸೂಚಿಸಬಹುದು.

ಗ್ರಾಮ ಪುಸ್ತಕ ಭಂಡಾರಗಳು :

೧೯೬೯ ರಲ್ಲಿ ವಿಶ್ವಸಾಕ್ಷರತಾ ಕಾರ್ಯಕ್ರಮದ ಅಂಗವಾಗಿ ಯೂನೆಸ್ಕೊ ನೆರವಿನಿಂದ ಗ್ರಾಮೀಣ ಪುಸ್ತಕ ಭಂಡಾರಗಳು ಪ್ರಾರಂಭವಾದವು. ಹಾಲಿ ೩,೧೭೦ ಗ್ರಾಮ ಪುಸ್ತಕ ಭಂಡಾರಗಳಿವೆ. ಟಾನ್ಜೇನಿಯದಲ್ಲಿ ೮,೨೦೦ ಗ್ರಾಮಗಳಿವೆ. ಪ್ರತಿಯೊಂದು ಹಳ್ಳಿಯಲ್ಲಿ ಗ್ರಾಮ ಪುಸ್ತಕ ಭಂಡಾರಗಳನ್ನು ಏರ್ಪಡಿಸುವುದು ಸರಕಾರದ ಉದ್ದೇಶ.

ಸೀಡ ಮತ್ತು ಕೋಡ್ ಸಂಸ್ಥೆಗಳು ಗ್ರಾಮ ಪುಸ್ತಕ ಭಂಡಾರಗಳ ಅಭಿವೃದ್ಧಿಗೆ ನೆರವು ನೀಡಿವೆ. ಕೋಡ್ ಸಂಸ್ಥೆ ಕೆನಡ ದೇಶಕ್ಕೆ ಮತ್ತು ಇತರ ವಿಷಯಗಳಿಗೆ ಸಂಬಂಧಪಟ್ಟ ಹಲವಾರು ವಿಷಯಗಳ ಮೇಲೆ ವರ್ಣರಂಜಿತ ಚಿತ್ರಗಳಿಂದ ಕೂಡಿದ ಪುಸ್ತಕಗಳನ್ನು ಪ್ರಕಟಿಸಿದೆ. ರಟ್ಟುಗಟ್ಟಿ, ಕಾಗದ ಆರ್ಟ್ ಪೇಪರು ಇರುವ ಪುಸ್ತಕಗಳನ್ನು ಗ್ರಾಮ ಪುಸ್ತಕ ಭಂಡಾರಗಳಿಗೆ ನೀಡಿದೆ. ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವ ಉಪಾಧ್ಯಾಯರಿಗೆ ರಿಯಾಯಿತಿ ದರದಲ್ಲಿ ಈ ಪುಸ್ತಕಗಳನ್ನು ನೀಡುತ್ತಿತ್ತು. ಈಗ ಆ ಸೌಲಭ್ಯ ರದ್ದಾಗಿದೆ. ಈಗ ಶಿಕ್ಷಣ ಸಂಸ್ಥೆಗಳು ಮಾತ್ರ ರಿಯಾಯಿತಿ ದರದಲ್ಲಿ ಕೋಡ್ ಸಂಸ್ಥೆಯಿಂದ ಪುಸ್ತಕಗಳನ್ನು ಪಡೆಯಬಹುದು.

ಪ್ರತಿಯೊಂದು ಪುಸ್ತಕ ಭಂಡಾರದಲ್ಲಿ ಸರಾಸರಿ ೪೦೦ ಪುಸ್ತಕಗಳಿವೆ. ಕೆಲವು ಪುಸ್ತಕಗಳು ಗ್ರಾಮೀಣ ಓದುಗರ ಮಟ್ಟಕ್ಕೆ

ಮೀರಿದವು. ಕೆಲವು ಕಡೆಗಳಲ್ಲಿ ಪುಸ್ತಕ ಭಂಡಾರಗಳಿಗೆ ಸ್ಥಳ ಸಾಲದು.

ಅಂಚೆ ಮೂಲಕ ಶಿಕ್ಷಣ :
(Correspondence Course)

೧೯೭೨ ರಲ್ಲಿ ಇನ್ಸಿಟ್ಯೂಟ್ ಆಫ್ ಅಡಲ್ಟ್ ಎಜುಕೇಷನ್ ಅಂಚೆ ಮೂಲಕ ಶಿಕ್ಷಣವನ್ನು ಪ್ರಾರಂಭಿಸಿತು. ಈ ಶಿಕ್ಷಣದ ಸೌಲಭ್ಯಗಳನ್ನು ಪಡೆಯುತ್ತಿರುವವರು ಹೆಚ್ಚಾಗಿ ನಗರವಾಸಿಗಳು.

ಪ್ರಾಥಮಿಕ ಶಾಲೆಗಳನ್ನು ಮಧ್ಯದಲ್ಲೇ ಬಿಟ್ಟವರು, ಪ್ರಾಥಮಿಕ ಶಾಲಾ ಉಪಾಧ್ಯಾಯರು, ರೈತರು, ಉದ್ಯೋಗಿಗಳು, ರಾಜಕಾರಣಿಗಳು ಇದರ ಪ್ರಯೋಜನ ಪಡೆಯುತ್ತಿರುವವರು. ಅಂಚೆ ಶಿಕ್ಷಣದಲ್ಲಿ ೨೩ ಕೋರ್ಸುಗಳಿವೆ. ಕುರುಡರಿಗೆ ಒಂದು ಕೋರ್ಸ್ ಶಿಕ್ಷಣವನ್ನೂ ನೀಡುವ ಆಲೋಚನೆ ಇದೆ. ೧೯೭೨ ರಿಂದ ೧೯೯೦ರ ವರೆವಿಗೆ ವಿವಿಧ ಕೋರ್ಸಿನ ಉಪಯೋಗ ಪಡೆಯುತ್ತಿರುವವರ ವಿವರಗಳನ್ನು ಕೊಟ್ಟಿದೆ.

ವರ್ಗ	ಸಂಖ್ಯೆ	ಸೇಕಡ	ಅರ್ಹತಾಪತ್ರ ಪಡೆದವರು	ಶೇಕಡ
ಗಂಡಸರು	೬೦.೭೨೬	೮೩,೫	೩೬೨೩೭	೯೩.೪
ಹೆಂಗಸರು	೧೧.೯೫೯	೧೬.೫	೨೫೪೩	೬.೬

ಫೋಕ್ ಡೆವಲಪ್‌ಮೆಂಟ್ ಕಾಲೇಜುಗಳು :

ಸಿಡ ನೆರವಿನಿಂದ ೧೯೭೫ರಲ್ಲಿ ಕರ್ನಾಟಕದ ವಿದ್ಯಾಪೀಠಗಳ ಮಾದರಿಯಲ್ಲಿ ೩೪ ಫೋಕ್ ಡೆವಲಪ್‌ಮೆಂಟ್ ಕಾಲೇಜುಗಳು ಪ್ರಾರಂಭವಾದವು. ಅವು ವ್ಯವಸಾಯ ಮತ್ತು ಗ್ರಾಮಾಭಿವೃದ್ಧಿ ಕೇಂದ್ರಗಳಲ್ಲಿ ಸ್ಥಾಪನೆ ಆಗಿವೆ. ೧೯೮೫ರ ವೇಳೆಗೆ ರಾಜ್ಯದಲ್ಲಿ ೫೨ ಕಾಲೇಜುಗಳಿದ್ದವು. ರಾಜ್ಯಶಾಸ್ತ್ರ, ಗೃಹ ವಿಜ್ಞಾನ ಗ್ರಾಮಾಭಿವೃದ್ಧಿ, ವ್ಯವಸಾಯ, ವಿಜ್ಞಾನ ಲೆಕ್ಕ ಬರೆಯುವ ವಿದ್ಯೆ (Accountancy) ಸಂಸ್ಕೃತಿ ಕಾಲೇಜಿನಲ್ಲಿ ಕಲಿಯುವ ವಿಷಯಗಳು. ಈ ಕೇಂದ್ರಗಳಲ್ಲಿ ಸೇಕಡ ೬೦ ಭಾಗ ಕೆಲಸ ಮಾಡಿ ಅನುಭವ ಪಡೆಯತಕ್ಕದ್ದು. ಉಳಿದ ೪೦ ಭಾಗ ಶಾಸ್ತ್ರ ಪರಿಚಯ. ಅನೇಕ ಅಲ್ಪಾವಧಿಯ ಕೋರ್ಸುಗಳಿವೆ. ಒಟ್ಟು ಕೋರ್ಸಿನ ಅವಧಿ ೬ ತಿಂಗಳು. ವಿದ್ಯಾಪೀಠಗಳಂತೆ ಇಲ್ಲಿ ಪರೀಕ್ಷೆಗಳಿಲ್ಲ.

ಪ್ರಾರಂಭದಲ್ಲಿ ಈ ಸಂಸ್ಥೆಗಳು ಶಿಕ್ಷಣ ಇಲಾಖೆಯ ಆಶ್ರಯದಲ್ಲಿ ನಡೆಯುತ್ತಿದ್ದವು. ೧೯೯೦ ರಿಂದ ಅವುಗಳ ಆಡಳಿತವನ್ನು ಸಾಮೂಹಿಕ ಅಭಿವೃದ್ಧಿ ಇಲಾಖೆ ವಹಿಸಿಕೊಂಡಿತು.

೧೯೮೮ ನೆಯ ಸಾಲಿನ ವರೆವಿಗೆ ೨,೨೨,೯೨೭ ಮಂದಿ ತರಬೇತು ಪಡೆದರು. ಅವರ ಪೈಕಿ ಅನೇಕರು ಸ್ವಾವಲಂಬಿಗಳಾಗಿ ಸ್ವಂತ ಉದ್ಯಮಗಳಲ್ಲಿ ತೊಡಗಿರುವವರು

ವಿದ್ಯಾರ್ಥಿಗಳು ತಾವು ಕಲಿತಿದ್ದನ್ನು ಕಾರ್ಯರೂಪಕ್ಕೆ ತರಲು ಬೇಕಾಗುವ ಉಪಕರಣಗಳನ್ನು ಕೊಳ್ಳಲು ಹಣವಿಲ್ಲ. ಕೆಲವರು ಮರಗೆಲಸದ ಉಪಕರಣಗಳನ್ನು

ಶಿಕ್ಷಣ ಕೇಂದ್ರದಲ್ಲಿ ತಯಾರಿಸಿಕೊಂಡು ಹೋಗುವರು.

ಕಾಲೇಜುಗಳ ಉದ್ದೇಶ ಜನತೆಗೆ ಅರಿವಾಗಿದೆ. ವಿದ್ಯಾರ್ಥಿಗಳು ಸ್ವಯಂ ಪ್ರೇರಿತರಾಗಿ ತರಬೇತಿಗೆ ಸೇರುವರು. ತರಬೇತು ಪಡೆದ ವಿದ್ಯಾರ್ಥಿಗಳು ಗ್ರಾಮೀಣ ಅಭಿವೃದ್ಧಿ ಕಾರ್ಯದಲ್ಲಿ ತೊಡಗಿರುವರು.

ಅಂತರರಾಷ್ಟ್ರೀಯ ನೆರವು :

ಟಾನ್ಜೇನಿಯದಲ್ಲಿ ೧೯೭೦ರಿಂದ ೧೯೯೦ರ ವರಿವಿಗೆ ಇಪ್ಪತ್ತು ವರ್ಷಗಳಲ್ಲಿ ಅನಕ್ಷರತೆ ಶೇ॥ ೯.೬ ಕ್ಕೆ ಇಳಿದಿದೆ. ನಿರಕ್ಷರತೆ ಹೆಚ್ಚಾಗಿ ಅಭಿವೃದ್ಧಿಶೀಲ ರಾಷ್ಟ್ರಗಳ ಸಮಸ್ಯೆ. ಆಫ್ರಿಕಾ ಒಂವರಲ್ಲಿ ೧೬.೨ ಮಿಲಿಯನ್ ನಿರಕ್ಷರರು. ಅಂದರೆ ಸೇಕಡ ೫೪ ಮಂದಿ ಇದ್ದು ಮೊದಲನೆಯ ಸ್ಥಾನ ಪಡೆದಿದೆ. (೧೯೮೫) ಇದೇ ಸಾಲಿನಲ್ಲಿ ವರ್ಷದಲ್ಲಿ ೬೬ ಮಿಲಿಯನ್ ಇದ್ದು ಎರಡನೆಯ ಸ್ಥಾನವನ್ನು ಪಡೆದಿದೆ. ಅಲ್ಲಿಯ ಅನಕ್ಷರತೆ ಸೇಕಡ ೩೬. ಅಂದರೆ ಆಫ್ರಿಕಾದಲ್ಲಿ ವರ್ಷದ ಒಂದೂವರೆಯಷ್ಟು ಅನಕ್ಷರಸ್ಥರು ಇದ್ದಂತೆ ಆಯಿತು. ಸೌತ್ ಅಮೆರಿಕ ಮತ್ತು ಕೆರೆಬಿಯನ್ ರಾಷ್ಟ್ರಗಳಲ್ಲಿ ಸೇಕಡ ೧೭.೩ ಅನಕ್ಷರಸ್ಥರು ಅಂದರೆ ೪೪ ಮಿಲಿಯನ್ ನಿರಕ್ಷರರು. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಸೇಕಡ ೨೦ ಮಂದಿ ಕೇವಲ ಅಕ್ಷರಸ್ಥರು ಅಂದರೆ ಅವರ ಸಾಕ್ಷರತೆ ಇಂದಿನ ಯುಗದಲ್ಲಿ ಉಪಯೋಗಕ್ಕೆ ಬಾರದು. ಕ್ರಿಯಾತ್ಮಕವಾಗಿ ಅವರು ಅಕ್ಷರಸ್ಥರಲ್ಲ. ೧೯೮೫ರಲ್ಲಿ ಇಡೀ ವಿಶ್ವದಲ್ಲಿ ೮೮೯ ಮಿಲಿಯನ್ ಅನಕ್ಷರರು ಅಂದರೆ ಶೇಕಡ ೨೭ ಮಂದಿ ನಿರಕ್ಷರ ಕುಕ್ಷಿಗಳು. ಇವರ ಜೊತೆಗೆ ಶಾಲೆಗೆ ಹೋಗದ ಮಕ್ಕಳ ಸಂಖ್ಯೆ ೧೦೦ ಮಿಲಿಯನ್. ೨೧ ನೆಯ ಶತಮಾನದ ಹೊತ್ತಿಗೆ ೯೦೦ ಮಿಲಿಯನ್ ವಯಸ್ಕರು, ೧೨೦ ಮಿಲಿಯನ್ ಮಕ್ಕಳು ಅನಕ್ಷರಸ್ಥರಾಗಿ ಉಳಿಯುವರು ಎಂದು ಯೂನೆಸ್ಕೊ ಅಂದಾಜು ಮಾಡಿದೆ.

ನಿರಕ್ಷರತಾ ನಿವಾರಣೆಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ನೆರವು ದೊರೆಯುತ್ತಿದೆ. ಯೂನೆಸ್ಕೊ ತನ್ನ ಶಕ್ತಿಮೀರಿ ನೆರವನ್ನು ತಾಂತ್ರಿಕವಾಗಿ ಮತ್ತು ಹಣದ ರೂಪದಲ್ಲಿ ನೀಡುತ್ತಿದೆ. ೧೯೮೧-೮೩ರ ಅವಧಿಯಲ್ಲಿ ಯೂನೆಸ್ಕೊ ೭೮ ಸದಸ್ಯ ರಾಷ್ಟ್ರಗಳಿಗೆ ನಿರಕ್ಷರತಾ ನಿವಾರಣೆಗೆ ನೆರವು ನೀಡಿದೆ. ಅವುಗಳ ಪೈಕಿ ನೆರವು ಪಡೆದ ರಾಷ್ಟ್ರಗಳ ಸಂಖ್ಯೆ ೩೦. ಅದೇ ಸಾಲಿನಲ್ಲಿ ೪೬ ರಾಷ್ಟ್ರಗಳ ಕಾರ್ಯಕ್ರಮದಲ್ಲಿ ಯೂನೆಸ್ಕೊ ಸಕ್ರಿಯವಾಗಿ ಪಾಲುಗೊಂಡಿದೆ. ಇಷ್ಟೇ ಅಲ್ಲ. ವಿಶೇಷ ರೀತಿ ಸಾಕ್ಷರತಾ ಕಾರ್ಯಕ್ರಮ ನಡೆಸಿದ್ದಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಪಾರಿತೋಷಕ ದೊರೆತಿದೆ. ೧೯೬೯ ರಿಂದ ಅಕ್ಷರ ಪ್ರಚಾರಕ್ಕೆ ವಿಶೇಷ ಸೇವೆ ಸಲ್ಲಿಸಿದ ವ್ಯಕ್ತಿಗಳಿಗೆ, ಸಂಘ ಸಂಸ್ಥೆಗಳಿಗೆ ಕೆಳಗೆ ಕಂಡಂತೆ ಪುರಸ್ಕಾರಗಳು ಇವೆ.

೧) ಎನ್. ಕೆ. ಕೃಪಾಸ್ಕಯ ಪಾರಿತೋಷಕ (೧೯೬೯).
೨) ಇಂಟರ್ ನ್ಯಾಷನಲ್ ರೀಡಿಂಗ್ ಅಸೋಸಿಯೇಷನ್ (೧೯೭೯).
೩) ನೋಮ ಪುರಸ್ಕಾರ ೧೯೮೦.
೪) ಇರಾನ್ ಪುರಸ್ಕಾರ ೧೯೮೧.
೫) ಹಬೀಬ್ ನಸೀಫ್ ೧೯೯೦.

ಟಾನ್ಜೇನಿಯ ಮೇಲೆ ಹೇಳಿದ ಅಂತರ ರಾಷ್ಟ್ರೀಯ ಪುರಸ್ಕಾರಗಳನ್ನು ಏಳುಸಾರಿ ಪಡೆದಿದೆ.

ಟಾನ್ಜೇನಿಯದಲ್ಲಿ ನಡೆದ ವಯಸ್ಕರ ಶಿಕ್ಷಣ ಕಾರ್ಯದಲ್ಲಿ ನೆರವು ನೀಡಿದ ಅಂತರ ರಾಷ್ಟ್ರೀಯ ಸಂಸ್ಥೆಗಳ ಹೆಸರು ಮತ್ತು ಯಾವ ಕಾರ್ಯಕ್ರಮಕ್ಕೆ ದೊರೆತಿದೆ ಎಂಬುದನ್ನು ಕೆಳಗೆ ಕೊಟ್ಟಿದೆ.

ನೆರವಿನರೂಪ ಮತ್ತು ನೆರವು ನೀಡಿದ ಸಂಸ್ಥೆಗಳು

ನೆರವಿನರೂಪ: ಮುದ್ರಣಯಂತ್ರ, ಪ್ರೊಜೆಕ್ಟರು, ಜನರೇಟರ್, ಸಿನಿಮವಾಹನ, ಕ್ಯಾಮರ, ವ್ಯವಸಾಯ ಮತ್ತು ಕುಟೀರ ಕೈಗಾರಿಕೆ ಯಂತ್ರಗಳು, ಕಟ್ಟಡ ಮತ್ತು ಅವುಗಳಿಗೆ ದುರಸ್ತಿ, ಹೊಲಿಗೆಯಂತ್ರ.

ಪಠ್ಯಪುಸ್ತಕ ಮತ್ತು ಪೂರಕ ಸಾಹಿತ್ಯ ಸಾಕ್ಷರೋತ್ತರ ಸಾಹಿತ್ಯ, ನವಸಾಕ್ಷರರ ವೃತ್ತಪತ್ರಿಕೆಗೆ ಬೇಕಾದ ಕಾಗದ ಇತ್ಯಾದಿ. ಪುಸ್ತಕ ಭಂಡಾರದ ಪುಸ್ತಕಗಳು, ಚಲನ ಚಿತ್ರಗಳು ಮತ್ತು ಇತರ ತಾಂತ್ರಿಕ ಬಾಬಿಗಾಗಿ ನೆರವು.

ವಿವಿಧ ಹಂತದ ಕಾರ್ಯಕರ್ತರ ತರಬೇತಿ, ವಿವಿಧ ಹಂತದ ಸಾಹಿತ್ಯ ರಚನೆಯಲ್ಲಿ ತರಬೇತಿ, ವೃತ್ತಪತ್ರಿಕೆ ಸಂಪಾದನೆಯಲ್ಲಿ ಯಲ್ಲಿ ತರಬೇತಿ, ವಿದ್ಯಾರ್ಥಿ ವೇತನ, ಅಲ್ಪಾವಧಿ ಶಿಬಿರಗಳು, ವಿಚಾರ ಸಂಕಿರಣ ಕಾರ್ಯಾಗಾರ ಮುಂತಾದವು.

ನೆರವು ನೀಡಿದ ಅಂತರರಾಷ್ಟ್ರೀಯ ಸಂಸ್ಥೆಗಳು:

೧. ಯುನೆಸ್ಕೊ, ಯು.ಎನ್.ಡಿ.ಪಿ, ಯೂನಿಸೆಫ್.

೨. ಸ್ವೀಡಿಷ್ ಇಂಟರ್ ನ್ಯಾಷನಲ್ ಡೆವಲಪ್‌ಮೆಂಟ್ ಎಜನ್ಸಿ (S.I.D.A)

೩. ದಿ ರಾಯಲ್ ನಾರ್ವೀಜಿಯನ್ ಎಜೆನ್ಸಿ ಫಾರ್ ಇಂಟರ್ ನ್ಯಾಷನಲ್ ಡೆವಲಪ್‌ಮೆಂಟ್ (N.O.R.A.D)

೪. ಕೆನೆಡಿಯನ್ ಆರ್ಗನೈಜೇಷನ್ ಫಾರ್ ಡೆವಲಪ್‌ಮೆಂಟ್ ಥ್ರೂ ಎಜುಕೇಷನ್ (C.O.D.E)

೫. ದಿ ಜರ್ಮನ್ ಅಡಲ್ಟ್ ಎಜುಕೇಷನ್ ಅಸೋಶಿಯೇಷನ್ (D.V.V)

೬. ದಿ ಜರ್ಮನ್ ಫೌಂಡೇಶನ್ ಫಾರ್ ಇಂಟರ್ ನ್ಯಾಷನಲ್ ಡೆವಲಪ್‌ಮೆಂಟ್.

೭. ದಿ ಅರಬ್ ಗಲ್ಫ್ ಫಂಡ್ (A.G.F.U.N.D)

೮. ಡಾನಿಡ

ಉಪಸಂಹಾರ: ಟಾನ್ಜೇನಿಯ ೧೯೭೦ ರಿಂದ ೧೯೯೦ರ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಸಾಕಷ್ಟು ಯಶಸ್ಸು ಪಡೆದಿದೆ. ಜೊತೆಗೆ ಕೆಲವು ಸಮಸ್ಯೆಗಳನ್ನು ಎದುರಿಸಿದೆ.

ಇಪ್ಪತ್ತನೆಯ ಶತಮಾನದ ಅಂತ್ಯಕ್ಕೆ ಉಳಿಯುವ ೧.೪ ಮಿಲಿಯನ್ ಅನಕ್ಷರಸ್ಥ ವಯಸ್ಕರನ್ನು ೨೦೦೦-೨೦೦೫ರ ಅವಧಿಯಲ್ಲಿ ಅಕ್ಷರಸ್ಥರನ್ನಾಗಿ ಮಾಡುವ ಯೋಜನೆ ಇದೆ.

ಕಾಲಿ ೩,೭೦೦ ಗ್ರಾಮೀಣ ಪುಸ್ತಕ ಭಂಡಾರಗಳಿವೆ. ಅವುಗಳನ್ನು ೭,೪೦೦ಕ್ಕೆ ಏರಿಸುವ ಏರ್ಪಾಡಿದೆ.

ದೃಷ್ಟಿದೋಷದಿಂದ ಓದಲಾರದೆ ಉಳಿದವರಿಗೆ ೨೧ನೆಯ ಶತಮಾನದಲ್ಲಿ ಕನ್ನಡಕಗಳನ್ನು ಉದಾರದಾನಿಗಳ ನೆರವಿನಿಂದ ಒದಗಿಸುವ ಯೋಜನೆ ಇದೆ. ಆದರಿಂದ ಅವರ

ಓದು ಬರಹ ಕಲಿಯಲು ಸಹಾಯಮಾಡು ದಂತೆ ಆಗುವುದು.

ಸ್ವಹಿಲಿಭಾಷೆ ಜನರಲ್ಲಿ ರಾಷ್ಟ್ರೀಯ ಭಾವನೆಯನ್ನು ಮೂಡಿಸಿದೆ. ಈಗಾಗಲೇ ತಿಳಿಸಿದಂತೆ ಓದು ಬರಹ ಕಲಿತವರು ವೃತ್ತ ಪತ್ರಿಕೆ ಮತ್ತು ಪುಸ್ತಕ ಓದು ವರು.

ವಯಸ್ಕರ ಶಿಕ್ಷಣ ಉಪಾಧ್ಯಾಯರು ಖಾಯಂ ಆಗಿ ಉಳಿಯುವುದಿಲ್ಲ. ಖಾಯಂ ಆದ ಉಪಾಧ್ಯಾಯರನ್ನು ಮತ್ತು ಸಾಕ್ಷ ರೋತ್ತರ ಕಾರ್ಯಕ್ರಮಗಳಲ್ಲಿ ನೆರವನ್ನು ಪಡೆಯಲು ವ್ಯವಸಾಯ, ಗೃಹ ವಿಜ್ಞಾನ ಮತ್ತು ಗುಡಿ ಕೈಗಾರಿಕೆ ಕ್ಷೇತ್ರಗಳಲ್ಲಿ ಖಾಯಂ ಆಗಿ ತಂತ್ರಜ್ಞರನ್ನು ನೇಮಿಸಿ ಕೊಳ್ಳಲು ಹಣದ ಕೊರತೆಯಿಂದ ಸಾಧ್ಯ ವಿಲ್ಲ.

ನಿರಕ್ಷರತಾ ನಿವಾರಣಾ ಕಾರ್ಯಕ್ರಮ ದಲ್ಲಿ ಹಲವಾರು ಹಂತದ ಕಾರ್ಯಕರ್ತರಿಗೆ ತರಬೇತಿ ನೀಡಲು ಸಾಕಷ್ಟು ಪಾಠೋಪ ಕರಣಗಳಿಲ್ಲ. ಕಲಿಯುವವರಿಗೆ ವಿತರಿಸಲು ಸಾಕಷ್ಟು ಸೀಸದಕಡ್ಡಿ ಮತ್ತು ಎಕ್ಸರ್ ಸೈಜ್ ಪುಸ್ತಕಗಳು ಬೇಕು.

ಆಡಳಿತದಲ್ಲಿ ಸಂಚಾರ ಸೌಕರ್ಯದ ದೃಷ್ಟಿ ಯಿಂದ ಈಗ ಬಳಸುತ್ತಿರುವ ದ್ವಿಚಕ್ರ ವಾಹನಗಳನ್ನು ಹೊಸವಾಹನಗಳಿಂದ ಬದ ಲಾಯಿಸಬೇಕಾಗಿದೆ.

ಈಗಾಗಲೇ ತಿಳಿಸಿದಂತೆ ಶೇಕಡ ೯.೬ ಅನಕ್ಷರಸ್ಥರ ಪೈಕಿ ಎರಡು ಲಕ್ಷಮಂದಿ ಅಂಗವಿಕಲರು ಇರುವರು. ಅವರಿಗೆ ಓದು ಬರಹ ಕಲಿಸುವುದರ ಜೊತೆಗೆ ಅವರು ದುಡಿದು ಜೀವನ ನಡೆಸುವಂತಹ ಕೌಶಲ್ಯ ಗಳನ್ನು ಅವರಿಗೆ ಕಲಿಸತಕ್ಕದು.

ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಸಾಧನೆ ಆಗಿದೆ. ಮಾಡಬೇಕಾದದ್ದು ಇನ್ನೂ ಹೆಚ್ಚಿದೆ. ಶಿಕ್ಷಣ ಹುಟ್ಟಿನಿಂದ ಸಾಯುವವ ರಿಗೆ ಸಾಗುವ ನಿರಂತರ ಕಾರ್ಯಕ್ರಮತಾನೆ? ಟಾನ್ಜಾನಿಯ ಸರಕಾರ ಪ್ರತಿವರ್ಷ ತನ್ನ ಆಯವ್ಯಯ ಪಟ್ಟಿಯಲ್ಲಿ ಶೇಕಡ ೧೦ರಷ್ಟು ಹಣವನ್ನು ವಯಸ್ಕರ ಶಿಕ್ಷಣಕ್ಕೆ ಮೀಸ ಲಾಗಿಟ್ಟಿದೆ.



ಹಿರಿಯರ ಘನತೆಗಾಗಿ ತಲೆಬಾಗಿ ವಂದಿಸು. ದೀನದಲಿತರ ದುಃಖ ಕಂಡು ತಲೆಬಾಗು, ವಿಷಾದಿಸು.

—ಬೇಕನ್

ವಿಶ್ವ ಸಾಕ್ಷರತಾ ದಿನಾಚರಣೆ—ಒಂದು ನೆನಪು

ಚಂದ್ರಶೇಖರಾರಾಧ್ಯ

–ಜನತೆಯ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳ ಸುಧಾರಣೆಗೆ ಪ್ರೇರಣೆ ನೀಡಿ ಅವರ ಜೀವನ ಮಟ್ಟವನ್ನು ಉತ್ತಮಗೊಳಿಸುವ ರೀತಿಯಲ್ಲಿ ಸಾಕ್ಷರತಾ ಕಾರ್ಯವಿಧಾನ ಮತ್ತು ತಂತ್ರಗಳಲ್ಲಿ ಬದಲಾವಣೆಯನ್ನು ತರಲು ಯುನೆಸ್ಕೊ ಸಂಸ್ಥೆಯು ಚಿಂತಿಸಿತು. ಈ ಚಿಂತನೆಯನ್ನು ಕಾರ್ಯಾನುಷ್ಠಾನಗೊಳಿಸಲು ಇರಾನ್ ದೇಶದ ರಾಜಧಾನಿಯಾದ ಟೆಹರಾನ್ ನಗರದಲ್ಲಿ ಸೆಪ್ಟೆಂಬರ್ ೧೯೬೫ರಲ್ಲಿ ವಿಶ್ವ ಸಮ್ಮೇಳನ ಒಂದನ್ನು ಯುನೆಸ್ಕೊ ಸಂಸ್ಥೆಯು ವ್ಯವಸ್ಥೆಮಾಡಿ, ಅಭಿವೃದ್ಧಿಶೀಲ ರಾಷ್ಟ್ರಗಳ ಪ್ರತಿನಿಧಿಗಳನ್ನು ಈ ಸಮ್ಮೇಳನಕ್ಕೆ ಆಹ್ವಾನಿಸಿತು.

—೧೯೬೫ರ ಸೆಪ್ಟೆಂಬರ್ ೮ ರಿಂದ ೧೮ರ ವರೆಗೆ ಟೆಹರಾನ್‌ನಲ್ಲಿ ನಡೆದ ಈ ಸಮ್ಮೇಳನದಲ್ಲಿ ವಿಶ್ವದ ಸುಮಾರು ೮೫ ರಾಷ್ಟ್ರಗಳ ಶಿಕ್ಷಣ ಸಚಿವರು ಭಾಗವಹಿಸಿ ತಮ್ಮ ತಮ್ಮ ದೇಶಗಳಲ್ಲಿ ಜಾರಿಯಾಗುತ್ತಿದ್ದ ಸಾಕ್ಷರತಾ ಕಾರ್ಯಕ್ರಮದ ಸಾಧನೆ ಮತ್ತು ವಿಫಲತೆಯನ್ನು ಕುರಿತು ಸುದೀರ್ಘವಾಗಿ ಚರ್ಚಿಸಿ, ಚಿಂತನ ಮಂಥನ ನಡೆಸಿದರು. ಸಾಕ್ಷರತಾ ಕಾರ್ಯಕ್ರಮ ಯಶಸ್ವಿಯಾಗದಿರುವುದಕ್ಕೆ ಈ ಕೆಳಕಂಡ ಅಂಶಗಳು ಪ್ರಮುಖ ಕಾರಣವಾಗಿರುವುದು ವ್ಯಕ್ತವಾಯಿತು.

—ಸಾಕ್ಷರತಾ ಕಾರ್ಯಕ್ರಮ ಕೇವಲ ಅಕ್ಷರ ಕಲಿಕೆಗೆ ಮಾತ್ರ ಸೀಮಿತವಾಗಿರುವುದು.

—ಕಲಿಕೆಯು ದೈನಂದಿನ ಜೀವನ ನಿರ್ವಹಣೆಗೆ ಉಪಯುಕ್ತವಾಗಿಲ್ಲದಿರುವುದು.

—ಕಲಿಕೆಗೂ ಕೈಗೊಂಡ ವೃತ್ತಿಗೂ ಯಾವ ಸಂಬಂಧವೂ ಇಲ್ಲದಿರುವುದು.

ಮೇಲಿನ ಎಲ್ಲಾ ಅಂಶಗಳನ್ನು ಸಮನ್ವಯಗೊಳಿಸಿ 'ಕ್ರಿಯಾತ್ಮಕ ಸಾಕ್ಷರತೆ, ಎಂಬ ಹೊಸ ರೂಪದಲ್ಲಿ ಕಾರ್ಯಾನುಷ್ಠಾನಗೊಳಿಸಲು ಈ ಸಮ್ಮೇಳನವು ಕರೆ ನೀಡಿತು.' ಇದರಿಂದ ಸಾಕ್ಷರತಾ ಕಾರ್ಯಕ್ರಮಕ್ಕೆ ಮಹತ್ವದ ತಿರುವು ದೊರೆಯಿತು. ಇದರ ನೆನಪಿಗಾಗಿ ಪ್ರತಿ ವರ್ಷ ಸೆಪ್ಟೆಂಬರ್ ೮ರ ದಿನವನ್ನು 'ವಿಶ್ವ ಸಾಕ್ಷರತಾ ದಿನ'ವನ್ನಾಗಿ ಎಲ್ಲಾ ಅಭಿವೃದ್ಧಿಶೀಲ ರಾಷ್ಟ್ರಗಳೂ ಆಚರಿಸುತ್ತಿವೆ. ಈ ದಿವಸದಂದು ಒಂದು ವಾರ ಕಾಲ ಕಲಿಯದವರು ಕಲಿಯುವಂತೆ ಪ್ರೇರಣೆ ಹೊಂದುವ ಮತ್ತು ಕಲಿಯದವರ ಹೊಣೆ ಕಲಿತವರ ಮೇಲಿದೆ ಎಂಬ ಕರ್ತವ್ಯ ಪ್ರಜ್ಞೆಯನ್ನು ಜಾಗೃತಗೊಳಿಸಲು ಸಭೆ ಸಮಾರಂಭ, ವಿಚಾರ ಸಂಕಿರಣ ಮುಂತಾದ

ವೈವಿಧ್ಯಮಯ ಕಾರ್ಯಕ್ರಮಗಳನ್ನು ದೇಶಾದ್ಯಂತ ಹಮ್ಮಿಕೊಂಡು ವಿಶ್ವ ಸಾಕ್ಷರತಾ ಸಪ್ತಾಹ ಆಚರಿಸಲಾಗುವುದು.

ಕ್ರಿಯಾತ್ಮಕ ಸಾಕ್ಷರತಾ ಕಾರ್ಯಕ್ರಮವನ್ನು ನಿಷ್ಠೆಯಿಂದ ಜಾರಿಗೆ ತಂದು ಲಾಭ ಪಡೆದ ದೇಶಗಳಲ್ಲಿ ಇರಾಕ್, ಇರಾನ್, ಈಜಿಪ್ಟ್, ಕ್ಯೂಬಾ, ತಾಂಜೀನಿಯಾ, ಕೀನ್ಯಾ, ವಿಯಟ್ನಾಮ್, ಸೋಮಾಲಿಯಾ ಮುಂತಾದ ದೇಶಗಳು ಅಗ್ರ ಪಂಕ್ತಿಯಲ್ಲಿವೆ. ವಿಶ್ವ ಸಾಕ್ಷರತಾ ಸಪ್ತಾಹದ ನೆನಪಿಗಾಗಿ ಕಳೆದ ಅರ್ಧ ಶತಮಾನಕ್ಕೂ ಹಿಂದಿನಿಂದ ಈ ಕ್ಷೇತ್ರದಲ್ಲಿ ಗಮನಾರ್ಹ ಸೇವೆ ಸಲ್ಲಿಸುತ್ತಾ ಬಂದಿರುವ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯು ನಡೆದು ಬಂದ ದಾರಿಯನ್ನು ಗುರುತಿಸಲಾಗಿದೆ.

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ನಡೆದು ಬಂದ ದಾರಿ

ನಹಿ ಜ್ಞಾನೇನ ಸದೃಶಂ

"ಜ್ಞಾನಕ್ಕೆ ಸಮನಾದುದು ಮತ್ತೊಂದಿಲ್ಲ" ಎಂಬುದನ್ನು ಭಾರತ ದೇಶವು ಸಾಧಿಸಿ ತೋರಿಸಿ, ವಯಸ್ಕರ ಶಿಕ್ಷಣ ಕಾರ್ಯಕ್ರಮವು ಭಾರತಕ್ಕೆ ಹೊಸತಲ್ಲ ಎಂಬುದನ್ನು ಕೃತಿಯಲ್ಲಿಯೂ ಜಾರಿಗೊಳಿಸಿದೆ. ಅಂದಿನ ಕಾಲದಲ್ಲಿ ದೇವಸ್ಥಾನ, ಗುರುಕುಲ, ಮಠ, ಚಾವಡಿ ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿ ಪುರಾಣ, ಕೀರ್ತನೆ, ಭಜನೆ, ಹರಿಕತೆ ಮತ್ತು ರಾಮಾಯಣ, ಮಹಾಭಾರತಗಳಂತಹ ಮಹಾ ಕಾವ್ಯಗಳ ಪ್ರವಚನ ಕಾರ್ಯಕ್ರಮ ನಡೆಯುತ್ತಿತ್ತು. ಬೆಳಗಿನಿಂದ ಸಂಜೆಯವರೆಗೆ ದುಡಿದ ಗ್ರಾಮೀಣ ಜನರಿಗೆ ಇವು ಬಿಡುವಿನ ವೇಳೆಯ ಮನರಂಜನಾ ಕಾರ್ಯಕ್ರಮಗಳಾಗುವುದರ ಜೊತೆಗೆ ತಮ್ಮ ಅರಿವಿನ ಶಕ್ತಿಯನ್ನು ಬೆಳೆಸಿಕೊಳ್ಳುವ ಅನೌಪಚಾರಿಕ ಶಿಕ್ಷಣ ಪ್ರಸಾರದ ಜ್ಞಾನ ಕೇಂದ್ರಗಳೂ ಆಗಿದ್ದವು. ಈ ಸ್ಥಳಗಳಲ್ಲಿ ಎಲ್ಲ ಜನರು ಬಿಡುವಿನ ವೇಳೆಯಲ್ಲಿ ಒಟ್ಟಾಗಿ ಕಲೆತು ಮುಕ್ತವಾದ ವಾತಾವರಣದಲ್ಲಿ ವಿಚಾರ ವಿನಿಮಯ ನಡೆಸುತ್ತಿದ್ದರು. ಗ್ರಾಮಾಂತರ ಪ್ರದೇಶಗಳಲ್ಲಿ ಜಾನಪದ ಕಲೆಗಳಾದ ಯಕ್ಷಗಾನ, ಸೂತ್ರದಬೊಂಬೆ, ತೊಗಲುಬೊಂಬೆ, ಸುಗ್ಗಿ ಕುಣಿತ, ನೃತ್ಯ, ನಾಟಕ ಮುಂತಾದ ಸಮೂಹ ಮಾಧ್ಯಮಗಳು ಅದರಲ್ಲಿಯೂ ರಾಮಾಯಣ ಮಹಾಭಾರತ ಕೃತಿಗಳ ಹಲವಾರು ಘಟನೆ ಸನ್ನಿವೇಶಗಳನ್ನು ಬಿಡಿಬಿಡಿಯಾಗಿ ಆಯ್ಕೆಮಾಡಿಕೊಂಡು ಕಥೆ, ಹಾಡು, ಲಾವಣಿ ಹೆಣೆದು ಹಾಡಿ ಜನರಿಗೆ ಮನರಂಜನೆ ನೀಡುವುದರ ಮೂಲಕ ಜ್ಞಾನ ಪ್ರಸಾರ ಮಾಡುವಂತಹ ವ್ಯವಸ್ಥೆ ಪ್ರಚಲಿತವಾಗಿತ್ತು.

ಸ್ವಾತಂತ್ರ್ಯ ಪೂರ್ವ ಹಾಗೂ ವಯಸ್ಕರ ಶಿಕ್ಷಣ

ಸೂರ್ಯಮುಳುಗದ ಸಾಮ್ರಾಜ್ಯ ಕಟ್ಟುವ ಹೆಬ್ಬಯಕೆಯಿಂದ ಬಂದ ಬ್ರಿಟಿಷರು ತಮ್ಮ ಆಡಳಿತ ಯಂತ್ರದ ಚಾಲನೆಗೆ ಸಹಕಾರಿಯಾಗುವಷ್ಟು ಮಾತ್ರ ಇಂಗ್ಲೀಷ್ ಶಿಕ್ಷಣವನ್ನು ಈ ದೇಶದ ಜನರಿಗೆ ನೀಡುವ ಮಟ್ಟಿಗೆ ಉದಾರಿಗಳಾದರು. ದೇಶ ದಾಸ್ಯದಲ್ಲಿದ್ದರೂ ಬ್ರಿಟಿಷರ ಸಂಪರ್ಕದಿಂದ ನಾಗರೀಕತೆಯ ಗಾಳಿ ಮಂದವಾಗಿ ಬೀಸತೊಡಗಿತು. ಈ ಅವಧಿಯಲ್ಲಿ ಜನ ಸಾಮಾನ್ಯರ ಸ್ಥಿತಿಗತಿಗಳನ್ನು ಕಡೆಗಣಿಸಿ ಅನೂಚಾನವಾಗಿ ನಡೆದು ಬಂದಿದ್ದ ಹಲವಾರು ಜ್ಞಾನ

ಪ್ರಸಾರ ಕಾರ್ಯಕ್ರಮಗಳು ಮೂಲೆ ಗುಂಪಾದುವು. ಈ ಪರಿಸ್ಥಿತಿಯನ್ನು ಹಲವು ಪ್ರಜ್ಞಾವಂತರು ಮನಗಂಡರು, ಜನ ಸಾಮಾನ್ಯರ ಸ್ಥಿತಿಗಳು ಅವರಿಗೆ ಮನವರಿಕೆಯಾಗಿ ಪರಿಸ್ಥಿತಿ ವಿರುದ್ಧ ಸಿಡಿದೇಳಲು ಶಿಕ್ಷಣವೇ ಶಕ್ತಿಯಾಗಬೇಕೆಂಬ ಸಂಕಲ್ಪದಿಂದ ಮೌನವಾಗಿ ಈ ದಿಸೆಯಲ್ಲಿ ಕಾರ್ಯನಿರತರಾದರು.

ಸ್ವಾತಂತ್ರ್ಯ ಚಳುವಳಿ ಮತ್ತು ವಯಸ್ಕರ ಶಿಕ್ಷಣ

ಮಹಾತ್ಮಗಾಂಧಿಯವರ ಮುಂದಾಳುತನದಲ್ಲಿ ದೇಶದಲ್ಲಿ ಸ್ವಾತಂತ್ರ್ಯ ಚಳುವಳಿಯು ತೀವ್ರವಾಗಿ ಆರಂಭವಾಯಿತು. ಈ ಅವಧಿಯಲ್ಲಿ ದೇಶದ ಸರ್ವಾಂಗೀಣ ಅಭಿವೃದ್ಧಿಗೆ ಗಾಂಧೀಜಿ ಅವರು ರೂಪಿಸಿದ ೧೪ ರಚನಾತ್ಮಕ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಜನತೆಯು ಉತ್ಸಾಹಶಾಲಿಗಳಾದರು. ವಯಸ್ಕರ ಶಿಕ್ಷಣ ಕಾರ್ಯಕ್ರಮವು ಈ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಒಂದಾಗಿದ್ದು, ಈ ದಿಸೆಯಲ್ಲಿ ಪ್ರಜ್ಞಾವಂತರು ವಯಸ್ಕರ ಶಿಕ್ಷಣ ಕಾರ್ಯಕ್ರಮದತ್ತ ಚಿಂತಿಸುವ ವಾತಾವರಣ ನಿರ್ಮಾಣವಾಯಿತು.

ವಯಸ್ಕರ ಶಿಕ್ಷಣಕ್ಕೆ ಕರ್ನಾಟಕದಲ್ಲಿ ಅಸ್ತಿಭಾರ

ರಾಷ್ಟ್ರಶಿಲ್ಪಿ ಸರ್.ಎಂ. ವಿಶ್ವೇಶ್ವರಯ್ಯನವರು ಮೈಸೂರು ಸಂಸ್ಥಾನದ ದಿವಾನರಾಗಿದ್ದಾಗ ಅವರ ದೂರದೃಷ್ಟಿಯ ಫಲವಾಗಿ ೧೯೧೩ರಲ್ಲಿ ಸುಮಾರು ೭೦೦೦ ರಾತ್ರಿ ಶಾಲೆಗಳನ್ನು ಮತ್ತು ಹಲವು ಪುಸ್ತಕ ಭಂಡಾರಗಳನ್ನು ಪ್ರಾರಂಭಿಸಿದರು.

ಶ್ರೀ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್ ಅವರು ೧೯೬೧ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಾರಂಭೋತ್ಸವ ನೆರವೇರಿಸುತ್ತಾ "ಈ ವಿಶ್ವವಿದ್ಯಾನಿಲಯ ಸ್ಥಾಪನೆಯಾಗಿರುವುದು ಹೆಚ್ಚಿನ ಸಂಖ್ಯೆಯಲ್ಲಿರುವ ಅದೃಷ್ಟಹೀನರಿಗಾಗಿಯೇ ಹೊರತು ಕಡಿಮೆ ಪ್ರಮಾಣದ ಅದೃಷ್ಟಶಾಲಿಗಳಿಗಲ್ಲ. ಪ್ರಾಧ್ಯಾಪಕರು ಸಾಧಾರಣ ಜನತೆಯ ಮಟ್ಟಕ್ಕೆ ಇಳಿದು ಅವರ ಜೊತೆಯಲ್ಲಿ ತಮ್ಮ ತಿಳುವಳಿಕೆಯನ್ನು ಹಂಚಿಕೊಳ್ಳಬೇಕು" ಎಂದು ಕರೆ ನೀಡಿದರು. ಕನ್ನಡ ಸಾಹಿತ್ಯ ಹಾಗೂ ಸಂಸ್ಕೃತಿಯನ್ನು ಕುರಿತು ಕೃತಿಗಳನ್ನು ಪ್ರಕಟಿಸಿ, ಉಚಿತವಾಗಿ ಹಂಚುವುದರ ಮೂಲಕ "ಪ್ರಸಾರಾಂಗ"ವನ್ನು ಪ್ರಾರಂಭಿಸಿ, ರಾಜ್ಯದಲ್ಲಿ ವಯಸ್ಕರ ಶಿಕ್ಷಣ ಚಳುವಳಿಗೆ ಅಸ್ತಿಭಾರ ಹಾಕಿದರು.

ಈ ಸಂದರ್ಭದಲ್ಲಿ ಮೈಸೂರಿನಲ್ಲಿ ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ಪಾತ್ರ ವಹಿಸಿದ ಸಂಸ್ಥೆಗಳೆಂದರೆ ಶ್ರೀ ರಾಮಕೃಷ್ಣಾ ಆಶ್ರಮ, ಮೈಸೂರು ಕರ್ನಾಟಕ ಸಂಘ ಮತ್ತು ಮೈಸೂರು ಯೂನಿವರ್ಸಿಟಿ ಯೂನಿಯನ್, ಮೈಸೂರು ರಾಮಕೃಷ್ಣ ಆಶ್ರಮದ ಅಂದಿನ ಪ್ರಧಾನ ಸ್ವಾಮಿಜಿಯವರಾಗಿದ್ದ ಶ್ರೀ ಸಿದ್ದೇಶ್ವರಾನಂದರು ಮತ್ತು ಅವರ ನೆಚ್ಚಿನ ಗೆಳೆಯರೂ ಆಗಿದ್ದ ಶ್ರೀ ನಾ. ಕಸ್ತೂರಿಯವರು ವಿದ್ಯಾರ್ಥಿಗಳು ಮತ್ತು ಸಮಾಜ ಸೇವಾಸಕ್ತರಾದ ಯುವಜನರಿಗೆ ಉತ್ಸಾಹ ತುಂಬಿ ಇವರ ಮೂಲಕ ಮೈಸೂರಿನ ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ಆಗಾಗ ಸಾಂಸ್ಕೃತಿಕ ಕಾರ್ಯಕ್ರಮಗಳಾದ ಭಾರತ ವಾಚನ, ಹರಿಕತೆ, ನಾಟಕ, ಭಾಷಣ ಹಾಗೂ ವಯಸ್ಕರ ಶಿಕ್ಷಣ ಕಾರ್ಯಕ್ರಮ

ಗಳನ್ನು ನಡೆಸುತ್ತಿದ್ದರು. ಇದೇ ದಿಕ್ಕಿನಲ್ಲಿ ಮೈಸೂರಿನ ಕರ್ನಾಟಕ ಸಂಘದ ಆಧಾರ ಸ್ಥಂಭವಾಗಿದ್ದ ದಿವಂಗತ ಶ್ರೀಮಾನ್ ಜಿ. ಆರ್. ರಂಗಸ್ವಾಮಿಯವರೂ ಅವರ ಆತ್ಮೀಯ ಮಿತ್ರರಾಗಿದ್ದ ಶ್ರೀ ಎಸ್. ವಿ. ಶ್ರೀನಿವಾಸರಾಯರೂ ಬಿಡುವಿನ ವೇಳೆಯಲ್ಲಿ ಸಾಂಸ್ಕೃತಿಕ ಮತ್ತು ಸಾಕ್ಷರತಾ ಕಾರ್ಯಕ್ರಮಗಳನ್ನು ಬೋಗಾದಿ, ಕುಕ್ಕರಹಳ್ಳಿ ಮುಂತಾದ ಮೈಸೂರಿನ ಅಕ್ಕ ಪಕ್ಕದ ಗ್ರಾಮಗಳಲ್ಲಿ ಏರ್ಪಡಿಸುತ್ತಿದ್ದರಲ್ಲದೆ, ಮೈಸೂರಿನ ಜೈಲಿನಲ್ಲಿಯೂ ಏರ್ಪಡಿಸಿ ಅಲ್ಲಿನ ಅನೇಕ ಖೈದಿಗಳ ಜ್ಞಾನಾರ್ಜನೆಗೆ ಕಾರಣರಾದರು ಈ ಕೆಲಸಗಳಲ್ಲಿ ಅವರಿಗೆ ನೆರವಾದ ಮಹನೀಯರೆಂದರೆ ಶ್ರೀಯುತರಾದ ಶ್ರೀ ಬಿ. ವಿ. ವೆಂಕಟನಾರಾಯಣಪ್ಪ, ಬಿ. ಪಿ. ವಿಶ್ವೇಶ್ವರಯ್ಯ, ಹೆಚ್. ಎಂ. ಶಂಕರನಾರಾಯಣರಾವ್ ಹಾಗೂ ಟಿ. ಶ್ರೀನಿವಾಸಮೂರ್ತಿಯವರು.

೧೯೩೩–೩೪ನೆಯ ಸಾಲಿನ ಮೈಸೂರು ಯೂನಿವರ್ಸಿಟಿ ಯೂನಿಯನ್ನಿನ ಮುಖ್ಯ ಕಾರ್ಯಕ್ರಮಗಳಲ್ಲಿ ವಯಸ್ಕರ ಶಿಕ್ಷಣ ಕಾರ್ಯಕ್ರಮವೂ ಒಂದಾಗಿತ್ತು. ಅದೇ ವರ್ಷದಲ್ಲಿ ಮಹಾತ್ಮಾ ಗಾಂಧೀಜಿಯವರ ಶಿಷ್ಯರೂ ಮತ್ತು ಮಿತ್ರರೂ ಆದ ಶ್ರೀ ಥಕ್ಕರ್ ಬಾಪಾ ಅವರ ಅಮೃತ ಹಸ್ತದಿಂದ ಒಂದು ವಯಸ್ಕರ ಶಿಕ್ಷಣ ಕೇಂದ್ರವು ಈಗಿನ ಮೈಸೂರು ರೇಷ್ಮೆ ಕಾರ್ಖಾನೆಯ ಎದುರಿಗೆ ಪೌರ ಕಾರ್ಮಿಕರಿಗಾಗಿ ತೆರೆಯಲ್ಪಟ್ಟಿತು. ಇದಕ್ಕಾಗಿ ಒಂದು ಕಟ್ಟಡವನ್ನು ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಸಂಘದ ನಿಧಿಯಿಂದ ಕಟ್ಟಲಾಯಿತು. ಮಹಿಳೆಯರು ಮತ್ತು ಪುರುಷರೂ ಸೇರಿ ಸುಮಾರು ೨೨ ಜನರು ಈ ವಯಸ್ಕರ ಶಿಕ್ಷಣ ಕೇಂದ್ರಕ್ಕೆ ದಾಖಲಾದರು. ವಾರದಲ್ಲಿ ಏಳು ದಿವಸಗಳೂ ವಯಸ್ಕರ ಶಿಕ್ಷಣ ಕಾರ್ಯ ನಡೆಯುವ ಏರ್ಪಾಟಾಯಿತು. ಅಂದಿನ ಕಾರ್ಯಕ್ರಮದಲ್ಲಿ ಭಾಗವಹಿಸಿದ ಉತ್ಸಾಹೀ ತರುಣ ವಿದ್ಯಾರ್ಥಿಗಳೆಂದರೆ ಶ್ರೀಯುತರಾದ ಎಂ. ಎನ್. ರಾಮಚಂದ್ರ ಜೋಯಿಸ್, ಎಸ್. ಎಸ್. ರಾಘವಚಾರ್, ಬಿ. ಕೆ. ಶ್ರೀನಿವಾಸಮೂರ್ತಿ, ಎಂ. ಶೇಷಾದ್ರಿ, ಎಲ್. ವಿ. ರಾಜಗೋಪಾಲ್, ಎ. ಸಿ. ಭೈರಪ್ಪ, ವೈ. ಜಿ. ಕೃಷ್ಣಮೂರ್ತಿ, ವೈ. ಜಿ. ರಾಮಸ್ವಾಮಿ, ಎಸ್. ಎಂ. ಮುನಿವೆಂಕಟಪ್ಪ, ಟಿ. ಎನ್. ಮಾದಪ್ಪಗೌಡ ಮುಂತಾದವರು. ಇವರುಗಳೆಲ್ಲಾ ಸಂಚಾಲಕರಿಗೆ ನೆರವಾಗಿ ದಿನಕ್ಕೆ ಒಬ್ಬರಂತೆ ಸರದಿಯ ಪ್ರಕಾರ ವಯಸ್ಕರ ಶಿಕ್ಷಣ ಕೇಂದ್ರದ ಕಾರ್ಯವನ್ನು ನಿರ್ವಹಿಸುತ್ತಿದ್ದರು. ಶ್ರೀಮಾನ್ ಟಿ. ಕೃಷ್ಣಮೂರ್ತಿ ಅವರು ಈ ಕೆಲಸದಲ್ಲಿ ಹೆಚ್ಚು ಆಸಕ್ತಿವಹಿಸಿ ವಿದ್ಯಾರ್ಥಿಗಳಿಗೆ ಸಾಕಷ್ಟು ಪ್ರೋತ್ಸಾಹ ನೀಡಿ ಕಾರ್ಯಕ್ರಮ ಮುಂದುವರಿಯಲು ಚಾಲಕ ಶಕ್ತಿಯಾದರು. ಇದೇ ಅವಧಿಯಲ್ಲಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಸಂಘದವರು ಸುತ್ತಮುತ್ತಲಿನ ಗ್ರಾಮಗಳಾದ ಶೆಟ್ಟಿಹಳ್ಳಿ, ಹಡುವಾರಹಳ್ಳಿ, ಲಲಿತಾದ್ರಿಪುರ ಮುಂತಾದ ಗ್ರಾಮಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು. ಈ ಸಂಘದವರು ತಮ್ಮ ಕಾರ್ಯಕ್ರಮವನ್ನು ವಿಸ್ತರಿಸಲು ಮೈಸೂರು ಪುರಸಭೆಯನೆರವನ್ನು ಪಡೆದು ವಯಸ್ಕರ ಶಿಕ್ಷಣವನ್ನೂ ಜಾರಿಗೊಳಿಸಲು ಕ್ರಮಕೈಗೊಂಡರು. ಈ ಅಂಶವು ವಯಸ್ಕರ

ಶಿಕ್ಷಣ ಸಮಿತಿಯ ವಿಧಿವತ್ತಾದ ಹುಟ್ಟುವಿಕೆಗೆ ಬಹುಮಟ್ಟಿಗೆ ಕಾರಣವಾಯಿತೆಂದರೆ ಅತಿಶಯೋಕ್ತಿಯಾಗಲಾರದು.

೧೯೪೧ರಲ್ಲಿ ಅಕ್ಷರ ಪ್ರಚಾರ ಸಮಿತಿಯ ಹುಟ್ಟು

ಮೈಸೂರು ನಗರದ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಉತ್ಸಾಹಿ ವಿದ್ಯಾರ್ಥಿ ತಂಡವು ಪ್ರಾಯೋಗಿಕವಾಗಿ ಸಿದ್ಧಪಡಿಸಿದ ಪಠ್ಯ ಪುಸ್ತಕಗಳ ಸಹಾಯದಿಂದ ೫ ತಿಂಗಳ ಕಾಲ ಸಾಕ್ಷರತಾ ತರಗತಿಗಳನ್ನು ನಡೆಸಿ, ಕಾರ್ಯಕ್ರಮವನ್ನು ಯಶಸ್ವಿಯಾಗಿ ಮುಗಿಸಿದವರಿಗೆ ಅಂದಿನ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿದ್ದ ಶ್ರೀಯುತ ಎನ್. ಎಸ್. ಸುಬ್ಬರಾವ್ ಅವರಿಂದ ಅರ್ಹತಾ ಪತ್ರಗಳನ್ನು ವಿತರಣೆ ಮಾಡಿಸಿದರು. ಈ ಸಂದರ್ಭದಲ್ಲಿ ಹೊಸದಾಗಿ ಅಕ್ಷರಸ್ಥರಾದವರ ಪ್ರಗತಿ ಪರಿಶೀಲಿಸಿ ಮೆಚ್ಚಿ ಇದಕ್ಕೆ ಪ್ರೋತ್ಸಾಹ ರೂಪಕವಾಗಿ ವಿಶ್ವವಿದ್ಯಾನಿಲಯದಿಂದ ೫೦೦ ರೂ. ಬಿಡುಗಡೆ ಮಾಡಲಾಯಿತು. ಇದರ ಜೊತೆಯಲ್ಲಿ ಮೈಸೂರು ನಗರಸಭೆಯೂ ನೆರವು ನೀಡಲು ಮುಂದೆ ಬಂದಿತು. ಈ ಎಲ್ಲಾ ಕಾರಣಗಳಿಂದ ವಿದ್ಯಾರ್ಥಿಗಳಿಗೆ ಇನ್ನೂ ಹೆಚ್ಚಿನ ಕೆಲಸ ಮಾಡಲು ಪ್ರೇರಣೆ ಉಂಟಾಯಿತು. ಅಧ್ಯಾಪಕರು ಮತ್ತು ಆಸಕ್ತ ಮಹನೀಯರು ಕಲೆತು ಈ ಕಾರ್ಯಕ್ರಮಕ್ಕೆ ವಿಶೇಷ ಪಠ್ಯ ಪುಸ್ತಕ ರಚಿಸಿದರು ಮತ್ತು ವಯಸ್ಕರ ಶಿಕ್ಷಣ ಅಧ್ಯಾಪಕರಿಗೆ ತರಬೇತಿ ನೀಡಲು ಸಹಕಾರ ನೀಡಿದರು. ಇದರ ಅಂಗವಾಗಿ ವಿದ್ಯಾರ್ಥಿಗಳು, ಗರಡಿ, ದೇವಸ್ಥಾನ ರಾಮಮಂದಿರ, ಜಗಲಿ ಮುಂತಾದ ಲಭ್ಯ ಸ್ಥಳಗಳಲ್ಲಿ ತರಗತಿ ನಡೆಸಲು ಪ್ರಾರಂಭಿಸಿದರು. ಪರಿಣಾಮಕಾರಿಯಾಗಿ ನಡೆದ ಈ ಕಾರ್ಯಕ್ರಮ ಸರ್ಕಾರದ ಗಮನ ಸೆಳೆಯಿತು. ಈ ದಿಸೆಯಲ್ಲಿ ಪ್ರಾಯೋಗಿಕ ಕಾರ್ಯಕ್ರಮ ಕೈಗೊಳ್ಳಲು ಮಂಡ್ಯ ಜಿಲ್ಲೆಯನ್ನು ಆಯ್ಕೆ ಮಾಡಿಕೊಂಡು ಇದಕ್ಕಾಗಿ ೨೦ಸಾವಿರ ರೂಪಾಯಿ ಮಂಜೂರು ಮಾಡಿತು. ಈ ಎಲ್ಲ ಕಾರಣದಿಂದ ೧೯೪೧ರ ವೇಳೆಗೆ ಅಕ್ಷರ ಪ್ರಚಾರ ಸಮಿತಿಯು ಜನ್ಮ ತಾಳಿತು. ಕನ್ನಡದ ಕಣ್ವ ಬಿ. ಎಂ. ಶ್ರೀಕಂಠಯ್ಯನವರು ಸಮಿತಿಯ ಆಧ್ಯಕ್ಷರಾದರು.

೧೯೪೩ರಲ್ಲಿ ಸಂಸ್ಥಾನದ ಅಕ್ಷರ ಪ್ರಚಾರ ಸಮಿತಿಯಾಗಿ ಮಾರ್ಪಾಡು

ಮೈಸೂರು ಸಂಸ್ಥಾನದ ಮಹಾರಾಜರು ೧೯೪೩ರಲ್ಲಿ ಜನಪ್ರಿಯರಾದ ಇಬ್ಬರು ಖಾಸಗಿ ಮಹನೀಯರನ್ನು ತಮ್ಮ ಮಂತ್ರಿ ಮಂಡಲಕ್ಕೆ ಆರಿಸಿಕೊಂಡರು. ಭಾರತದ ಬೆನ್ನೆಲುಬಾದ ಹಳ್ಳಿಗಳು ಪ್ರಗತಿಯಾದಾಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ ಎಂಬುದನ್ನು ಮನಗಂಡ ಈ ಇಬ್ಬರು ಮಹನೀಯರು ಗ್ರಾಮಾಭಿವೃದ್ಧಿ ಯೋಜನೆಯನ್ನು ರೂಪಿಸಿಕೊಂಡು ಕಾರ್ಯಾನುಷ್ಠಾನ ಮಾಡುವಲ್ಲಿ ಮುಂದಾದರು. ಈ ಕಾರ್ಯಕ್ರಮದಲ್ಲಿ ಅಕ್ಷರ ಪ್ರಚಾರವನ್ನು ಅಳವಡಿಸಿಕೊಳ್ಳಲಾಯಿತು. ಆದ್ದರಿಂದ ಅಕ್ಷರ ಪ್ರಚಾರ ಸಮಿತಿಯು "ಸಂಸ್ಥಾನದ ಅಕ್ಷರ ಪ್ರಚಾರ ಸಮಿತಿ"ಯಾಗಿ ಮಾರ್ಪಾಡಾಯಿತು.

೧೯೪೪ರಲ್ಲಿ ಅಕ್ಷರ ಪ್ರಚಾರ ಸಮಿತಿ ಕಾರ್ಯಕ್ರಮ ವಿಸ್ತರಣೆ

ಈ ಹಿಂದೆ ನಡೆಸಿದ ಸಾಕ್ಷರತಾ ಕೇಂದ್ರಗಳಲ್ಲಿ ದಾಖಲಾಗಿ ಸಾಕ್ಷರರಾಗಿದ್ದ ಕೆಲವ

ರನ್ನು ಸಂದರ್ಶಿಸಿ ಕಲಿಕೆಯ ಮಟ್ಟವನ್ನು ೧೯೪೪ರಲ್ಲಿ ಮೌಲ್ಯಮಾಪನ ಮಾಡಿದಾಗ ಅವರು ಮತ್ತೆ ಅನಕ್ಷರತೆಗೆ ಹಿಂದಿರುಗಿರುವುದು ವ್ಯಕ್ತವಾಯಿತು. ಹೊಸದಾಗಿ ಅಕ್ಷರ ಕಲಿತವರು ತಮ್ಮ ಅಧ್ಯಯನ ಮುಂದುವರಿಸಿಕೊಂಡು ಹೋಗಲು ಸಮರ್ಪಕ ವ್ಯವಸ್ಥೆ ಇಲ್ಲದಿರುವುದೇ ಇದಕ್ಕೆ ಕಾರಣವಾಗಿತ್ತು. ಇವನ್ನು ಮನಗಂಡ ಸಮಿತಿಯು ಮುಂದೆ ಹಾಗಾಗದಿರಲು ತನ್ನ ಕಾರ್ಯವ್ಯಾಪ್ತಿಯಲ್ಲಿ ಈ ಚಟುವಟಿಕೆಗಳನ್ನು ಅಳವಡಿಸಿಕೊಂಡಿತು.

—ನವ ಸಾಕ್ಷರರಿಗೆ ಓದಲು ಅನುಕೂಲವಾಗುವಂತೆ ಸುಲಭ ಶೈಲಿಯ ಆಕರ್ಷಕ ವಿಷಯ ಒಳಗೊಂಡ ಪುಸ್ತಕ ರಚನೆ ಮತ್ತು ಪ್ರಕಟಣೆ.

—ನವ ಸಾಕ್ಷರರು ಓದಿ ಗ್ರಹಿಸಲು ಸಹಕಾರಿಯಾಗುವಂತೆ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಸುದ್ದಿ ಸಮಾಚಾರಗಳನ್ನು ಸುಲಭ ಶೈಲಿಯಲ್ಲಿ ತಿಳಿಸಲು 'ಬೆಳಕು' ವಾರಪತ್ರಿಕೆಯನ್ನು ಪ್ರಕಟಿಸಿ ವಿತರಿಸುವ ಏರ್ಪಾಡು.

—ಕಲಿಯುವವರು ಆಸಕ್ತಿಯಿಂದ ಬರುವಂತೆ ವಯಸ್ಕರ ಶಿಕ್ಷಣ ಕೇಂದ್ರಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಉಪಯುಕ್ತ ವಿಷಯಗಳನ್ನು ಕುರಿತು ಉಪನ್ಯಾಸ ಮುಂತಾದುವುಗಳ ವ್ಯವಸ್ಥೆ.

೧೯೪೫ರಲ್ಲಿ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಉದಯ

ಓದು ಬರಹ ಕಲಿಯುವುದು ಜ್ಞಾನಾರ್ಜನೆಗೆ ಒಂದು ಸಾಧನವೇ ಹೊರತು, ಅದೇ ಶಿಕ್ಷಣವಲ್ಲ ಎಂಬುದನ್ನು ಮನಗಂಡು, ಅಕ್ಷರ ಕಲಿಯುವುದನ್ನು ಮಾತ್ರ ಗುರಿಯಾಗಿಟ್ಟುಕೊಳ್ಳದೆ ಕಲಿತಿರುವುದನ್ನು ಉಳಿಸಿಕೊಂಡು ಬೆಳೆಸಿಕೊಳ್ಳಲು ತನ್ನ ಕಾರ್ಯಾಂಗವನ್ನು ವಿಸ್ತರಿಸಿಕೊಂಡ ಅಕ್ಷರ ಪ್ರಚಾರ ಸಮಿತಿಯು ೧೯೪೫ರಲ್ಲಿ ವಯಸ್ಕರ ಶಿಕ್ಷಣ ಸಮಿತಿಯಾಗಿ ಮಾರ್ಪಾಡಾಗಿ, ಅಂದಿನಿಂದ ಎಲ್ಲಾ ಜಿಲ್ಲೆಗಳಿಗೂ ತನ್ನ ಕಾರ್ಯಚಟುವಟಿಕೆಯನ್ನು ವಿಸ್ತರಿಸಿಕೊಂಡು ಕೆಳಕಂಡಂತೆ ಕಾರ್ಯಕ್ರಮ ಜಾರಿಗೊಳಿಸಲು ಕ್ರಮ ಕೈಗೊಂಡಿತು.

ಅ) ಸಾಕ್ಷರತಾ ತರಗತಿಗಳ ವ್ಯವಸ್ಥೆ.
ಆ) ಪುಸ್ತಕ ಭಂಡಾರದ ವ್ಯವಸ್ಥೆ.
ಇ) ಪ್ರಕಟಣೆ ಮತ್ತು ಮುದ್ರಣ ಶಾಖೆ ಪ್ರಾರಂಭ.
ಈ) ವಿದ್ಯಾಪೀಠಗಳ ಸ್ಥಾಪನೆ.
ಉ) ಗ್ರಾಮ ಕಲೆಗಳ ಪುನರುಜ್ಜೀವನ ಕಾರ್ಯಕ್ರಮ.
ಊ) ದೃಕ್ ಶ್ರವಣ ಘಟಕಗಳ ಪ್ರಾರಂಭ.
ಋ) ಕಾರ್ಯಕರ್ತರಿಗೆ ತರಬೇತಿ ವ್ಯವಸ್ಥೆ.
ೠ) ಸಂಶೋಧನಾ ಶಾಖೆ ಪ್ರಾರಂಭ.
ಎ) ಸಾಹಿತ್ಯ ರಚನಾಲಯಗಳ ಏರ್ಪಾಡು
ಏ) ಜನತಾ ಶಿಕ್ಷಣ ಕೇಂದ್ರಗಳ ವ್ಯವಸ್ಥೆ.

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯು ತನ್ನ ವೈಶಿಷ್ಟ್ಯಪೂರ್ಣ ಕಾರ್ಯಕ್ರಮಗಳಿಂದ ದೇಶ ವಿದೇಶಗಳ ಗಮನ ಸೆಳೆದು ೧೯೭೦ರಲ್ಲಿ ನೆಹರೂ ಸಾಕ್ಷರತಾ ಪ್ರಶಸ್ತಿ ಮತ್ತು ೧೯೭೩ರಲ್ಲಿ ಮಹಮದ್ ರಿಜಾಫಹಲ್ವಿ ಪ್ರಶಸ್ತಿಯನ್ನು ಗಳಿಸಿದೆ. ಡೆನ್ಮಾರ್ಕ್ ದೇಶವು ಸಮಿತಿಗೆ ಆಗಾಗ ಧನ ಸಹಾಯ ನೀಡುವುದರ ಮೂಲಕ ವಿದ್ಯಾ

ಪೀಠಗಳ ಅಭಿವೃದ್ಧಿ ಹಾಗೂ ಕಾರ್ಯಕರ್ತರ ತರಬೇತಿಗೆ ಸಹಕಾರಿಯಾಗಿರುತ್ತದೆ. ಫೋರ್ಡ್ ಫೌಂಡೇಷನ್ ಸಹ ನಾನಾ ರೀತಿಯಲ್ಲಿ ಸಹಕಾರವನ್ನು ನೀಡಿದೆ. ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಕಾರ್ಯಕರ್ತರಾಗಿದ್ದ ಪ್ರೊ|| ಡಬ್ಲ್ಯೂ. ಜಿ. ಈಗಲ್‌ಟನ್ ದಿವಂಗತರುಗಳಾದ ಸರ್ವಶ್ರೀ ಎಸ್. ವಿ. ಶ್ರೀನಿವಾಸರಾವ್, ಟಿ. ಕೃಷ್ಣಮೂರ್ತಿ, ನ. ಭದ್ರಯ್ಯ ಮುಂತಾದ ಮಹನೀಯರು ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ಯುನೆಸ್ಕೋ ಪರಿಣಿತರಾಗಿ ಸೇವೆ ಸಲ್ಲಿಸಿರುವುದು ಸಮಿತಿಗೆ ಅತ್ಯಂತ ಹೆಮ್ಮೆಯ ವಿಷಯವಾಗಿದೆ. ಯುನೆಸ್ಕೊ ಸಂಸ್ಥೆ ಸಮಿತಿಯ ಕಾರ್ಯಕರ್ತರಿಗೆ ಫೆಲೊಷಿಪ್ ನೀಡುವುದರ ಜೊತೆಗೆ ಗಿಫ್ಟ್ ಕೂಪನ್‌ಗಳ ಮೂಲಕ ವಿಶೇಷವಾಗಿ ಧನಸಹಾಯ ನೀಡಿದೆ.

—೧೯೭೮ರಿಂದ ಈ ದೇಶದಲ್ಲಿ ಜಾರಿಗೆ ಬಂದ ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮದ ಅನ್ವಯ ರಾಜ್ಯ ಸಂಪನ್ಮೂಲ ಕೇಂದ್ರವನ್ನು ಪ್ರಾರಂಭಿಸಿ, ಕರ್ನಾಟಕದಲ್ಲೆ ಮುಂಚೂಣಿಯಲ್ಲಿ ನಿಂತು ಕಾರ್ಯಕ್ರಮ ಜಾರಿಗೊಳಿಸಿದೆ.

—ಮೈಸೂರು ನಗರದಲ್ಲಿ ಪ್ರಸಕ್ತ ಸಾಲಿನಿಂದ ಅನೌಪಚಾರಿಕ ಶಿಕ್ಷಣ ಯೋಜನೆಯನ್ನು ಜಾರಿಗೊಳಿಸಲು ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಶಿಕ್ಷಣ ಇಲಾಖೆ ಮಂಜೂರಾತಿ ನೀಡಿದೆ. ಈ ಯೋಜನೆಯ ಅನುಷ್ಠಾನಕ್ಕೆ ಅಗತ್ಯ ಇರುವ ಪೂರ್ವಸಿದ್ಧತಾ ಕೆಲಸದಲ್ಲಿ ಸಮಿತಿಯು ಕಾರ್ಯನಿರತವಾಗಿದೆ.

—ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯು ೫ ದಶಕಗಳ ಸಾಧನೆಯ ಸಿಂಹಾವಲೋಕನ ಮಾಡಿದಾಗ ತನ್ನ ಏಳುಬೀಳುಗಳ ನಡುವೆಯೂ ವಿಶಿಷ್ಟ ದಾಖಲೆಗಳನ್ನು ಸ್ಥಾಪಿಸಿಕೊಂಡು ಮುನ್ನಡೆಯುತ್ತಿರುವುದು ಗಮನಾರ್ಹ ಅಂಶವಾಗಿದೆ.

ಹಣದ ಬಲದಿಂದ ಕೊಬ್ಬುವವರು ಮೂರ್ಖರು, ಕೀರ್ತಿಗಾಗಿ ಅಪೇಕ್ಷೆ ಮಾಡುವವರು ಅದಕ್ಕಿಂತ ಮೂರ್ಖರು. ತನಗಿಂತ ಬಲ್ಲವರು ಬೇರಿಲ್ಲವೆಂಬ ಗರ್ವದಿಂದಿರುವವನರಂತೂ ಶತಮೂರ್ಖರು.

—ಸ್ವಿಫ್ಟ್

ಅಕ್ಷರ ಕಲಿಕೆ—ಒಂದು ಪ್ರಯೋಗ

ದೇಜಗೌ

ಭಾರತಕ್ಕೆ ಸ್ವಾತಂತ್ರ್ಯ ಬಂದು ಇನ್ನೇನು ಅರ್ಧಶತಮಾನವಾಗಲಿದೆ. ಇದೆ ತಾನೆ ಕೇಂದ್ರ ಸರ್ಕಾರ ಕನಸೊಡೆದೆದ್ದು ಬೃಹತ್ ಪ್ರಮಾಣದಲ್ಲಿ ಸಾಕ್ಷರತಾ ಆಂದೋಲನ ಯೋಜನೆಯನ್ನು ಹಮ್ಮಿಕೊಂಡಿದೆ. ಸರ್ಕಾರ ಪ್ರಕಟಿಸುವ ಅಂಕಿ ಅಂಶಗಳನ್ನು ಗಮನಿಸಿದರೆ ಆ ಯೋಜನೆ ಸಂಪೂರ್ಣವಾಗಿ ಯಶಸ್ಸು ಗಳಿಸಿದೆ ಎಂದೇ ಲೆಕ್ಕ. ಹಲವು ಸಲ ಅಂಕಿ ಅಂಶಗಳಿಗೂ ವಾಸ್ತವ ಪರಿಸ್ಥಿತಿಗೂ ದೂರಾಂತರವಿದೆಯೆಂಬುದು ಸರ್ವವೇದ್ಯ. ಈ ಯೋಜನೆಯದೂ ಅದೇ ಹಣೆಬರಹ. ಕೆಲವು ಜಿಲ್ಲಾಧಿಕಾರಿಗಳು ಅತ್ಯಂತ ಶ್ರದ್ಧೆ ಮುತುವರ್ಜಿ ಪ್ರಾಮಾಣಿಕತೆಗಳಿಂದ ದುಡಿದಿದ್ದಾರೆ, ನಿಜ. ಆದರೆ ಯೋಜನೆಯ ಯಶಸ್ಸು ಬೋಧಕರನ್ನವಲಂಬಿಸಿದೆಯೆಂಬುದನ್ನು ಮರೆಯುವಂತಿಲ್ಲ. ಅದರ ಅಯಶಸ್ಸಿಗೆ ಕೇಂದ್ರೀಕರಣ ಪ್ರಮುಖ ಬಾಧಕವೆಂಬುದನ್ನು ಮರೆಯಲಾಗದು.

ಸಣ್ಣದಾದುದೇ ಸುಂದರವೆಂಬುದೊಂದು ಜಗತ್ಪ್ರಸಿದ್ಧ ಗ್ರಂಥ. ಆ ಸೂತ್ರವನ್ನು ಜೀವನದ ಎಲ್ಲ ಕ್ಷೇತ್ರಗಳಿಗೂ ಅನ್ವಯಿಸಬಹುದು. ಮೈಸೂರಿನಲ್ಲಿ ಇಂಡೊ-ಡೇನಿಷ್ ಸಾಂಸ್ಕೃತಿಕ ಸಂಸ್ಥೆಯೊಂದಿದೆ. ಇಡೀ ಜೀವಮಾನವೆಲ್ಲ ವಯಸ್ಕರ ಶಿಕ್ಷಣ ಸಂಸ್ಥೆಗೆ ದುಡಿದ ಶ್ರೀ ರಜತಾದ್ರಿಯವರು ಅದರ ಮಾರ್ಗದರ್ಶಕರು. ಅವರು ಹಮ್ಮಿಕೊಂಡಿರುವ ಹಲವು ಯೋಜನೆಗಳಲ್ಲಿ ಸಣ್ಣ ಪ್ರಮಾಣದ ಸಾಕ್ಷರತಾ ಆಂದೋಲನವೂ ಒಂದು. ಕಂಠೀರವ ನರಸರಾಜಪುರವೆಂಬುದು ನಗರದ ಪೂರ್ವಕ್ಕಿರುವ ಒಂದು ಸ್ಲಮ್ ಪ್ರದೇಶ. ಅಲ್ಲಿಯ ನಿವಾಸಿಗಳಲ್ಲಿ ಶೇ. ೭೦ ಭಾಗ ಮುಸ್ಲಿಮರು ಮತ್ತು ತಮಿಳರು. ನಗರಪಾಲಿಕೆ ಸದಸ್ಯರಾದ ಶ್ರೀ ಶ್ರೀಕಂಠಯ್ಯನವರು ನಡಸುತ್ತಿರುವ ಶ್ರೀಕಂಠೇಶ್ವರ ಪ್ರೌಢಶಾಲೆಯ ಶಿಕ್ಷಕರ ಸಹಕಾರದಿಂದ, ರಜತಾದ್ರಿಯವರ ನೇತೃತ್ವದಲ್ಲಿ ನಿರಕ್ಷರಿ ವಯಸ್ಕರಿಗಾಗಿ ಸಂಜೆ ೭ ರಿಂದ ೮ ಗಂಟೆಯವರೆಗೆ ತರಗತಿ ನಡೆಯುತ್ತಿವೆ.

ಇಲ್ಲಿ ಮೂರು ತರಗತಿಗಳು ನಡೆಯುತ್ತವೆ. ಒಟ್ಟು ಎಪ್ಪತ್ತು ಮಹಿಳೆಯರು ಓದು ಕಲಿಯುತ್ತಿದ್ದಾರೆ. ಅವರಲ್ಲಿ ಮುಸ್ಲಿಮ್ ಮತ್ತು ತಮಿಳರೇ ಹೆಚ್ಚು ಮಂದಿ. ಸಾಮಾನ್ಯವಾಗಿ ಅವರು ಅಥವಾ ಅವರ ಗಂಡಂದಿರು ಕೂಲಿಕಾರರು, ಇಲ್ಲವೆ ಬೀದಿ ಮಾರಾಟಗಾರರು. ಕಲಿಯುವವರ ಸರಾಸರಿ ವಯಸ್ಸು ೨೫. ಸರಾಸರಿ ಹಾಜರಿ ಶೇಕಡ ೭೦. ಕಲಿಸುವ ಮೂವರು ಶಿಕ್ಷಕಿ

ಯರಲ್ಲಿ ಇಬ್ಬರು ಮುಸ್ಲಿಮರು. ಕಲಿಸುವವರ ಶ್ರದ್ಧೋತ್ಸಾಹ ಮೆಚ್ಚುವಂಥದು. ಪ್ರತಿಯೊಬ್ಬ ವಿದ್ಯಾರ್ಥಿನಿ ಬಗ್ಗೆಯೂ ತುಂಬ ಮುತುವರ್ಜಿ ವಹಿಸುತ್ತಾರೆ.

ಇಲ್ಲಿಯ ಒಂದು ವಿಶೇಷವೆಂದರೆ, ಜೆ.ಎಸ್.ಎಸ್. ಶ್ರಮಿಕ ವಿದ್ಯಾಪೀಠದ ಸಹಕಾರದೊಡನೆ ಆ ನಿರಕ್ಷರಿ ಮಹಿಳೆಯರಿಗೆ ಹೊಲಿಗೆ ಮತ್ತು ಜರಿ ತರಗತಿಗಳನ್ನು ಏರ್ಪಡಿಸಲಾಗಿದೆ. ತರಗತಿಗಳಿಗೆ ಬೇಕಾದ ಸಾಧನ ಸೌಲಭ್ಯಗಳನ್ನು ವಿದ್ಯಾಪೀಠವೇ ಒದಗಿಸಿದೆ. ರೋಟರಿ ಕ್ಲಬ್ಬು ಮತ್ತು ದಾನಿಗಳು ಹೊಲಿಗೆ ಯಂತ್ರ, ಜರಿ ನೆಕ್ಕಿ ಸಾಮಗ್ರಿ ಮತ್ತು ಗ್ಯಾಸ್ ದೀಪಗಳನ್ನು ಕೊಳ್ಳಲು ಸಹಾಯ ಮಾಡಿದ್ದಾರೆ. ಈ ವೃತ್ತಿ ತರಗತಿಗಳಿಗೆ ಬರುವ ಮಹಿಳೆಯರು ಕಡ್ಡಾಯವಾಗಿ ಕಲಿಕಾ ಕೇಂದ್ರಗಳಲ್ಲಿ ಹಾಜರಾಗಲೇಬೇಕು. ಎರಡು ಮೂರು ತಿಂಗಳಲ್ಲಿ ಆ ಮಹಿಳೆಯರು ಎಷ್ಟರಮಟ್ಟಿಗೆ ಅಕ್ಷರ ಕಲಿತಿದ್ದಾರೆಂದರೆ, ಕಪ್ಪುಗೋಡೆ ಹಲಗೆಯ ಮೇಲೆ ಶಿಕ್ಷಕಿಯರು ಬರೆದ ಟಿಪ್ಪಣಿಗಳನ್ನೂ ಲೆಕ್ಕವನ್ನೂ ಅವರು ತಮ್ಮ ನೋಟು ಬುಕ್ಕುಗಳಲ್ಲಿ ಪ್ರತಿ ಮಾಡಿಕೊಳ್ಳುತ್ತಾರೆ.

ಇಷ್ಟು ಬೇಗ ಇಷ್ಟರಮಟ್ಟಿಗೆ ಓದು ಬರಹ ಕಲಿತಿದ್ದಾರಲ್ಲ ಈ ತಾಯಂದಿರು, ಬೋಧನಾ ವಿಧಾನದ ಗುಟ್ಟೇನು ಎಂದು ನಾನೇ ತನಿಖೆಗೆ ಹೋಗಿದ್ದಾಗ ಶಿಕ್ಷಕಿಯರನ್ನು ಕೇಳಿದೆ. ಅವರು ಕೊಟ್ಟ ಉತ್ತರ ಇದು: 'ನೋಡಿ ಸಾರ್, ಪದವಿಧಾನವಿದೆಯಲ್ಲ, ಅದು ಕುರುಡುಪಾಠ. ಕಂಠಪಾಠದ ಹೊರತು ಅವು ಮನಸ್ಸಿನಲ್ಲುಳಿಯುವುದಿಲ್ಲ. ಐದಾರು ಪಾಠ ಮುಗಿದ ನಂತರ, ಮತ್ತೆ ಮೊದಲ ಪಾಠ ಓದಿ ಎಂದರೆ ತಡವರಿಸುತ್ತಾರೆ. ಆ ಪದಗಳನ್ನು ನೆಪ್ಪಿನಿಂದ ಗುರುತಿಸಬೇಕು. ಅದೇ ಪದಗಳು ಅಥವಾ ಅದೇ ಅಕ್ಷರಗಳು ಬರುವ ಬೇರೆ ಪುಸ್ತಕವನ್ನು ಕೊಟ್ಟು ಓದಿರೆಂದರೆ ಅವರಿಂದಾಗದು. ಬರಹವಂತು ಸಾಧ್ಯವೇ ಇಲ್ಲ. ಅದರಿಂದಾಗಿ ಪೂರ್ವದ ಸಾಂಪ್ರದಾಯಕ ಪದ್ಧತಿಯನ್ನು ಹಿಡಿದು, ವರ್ಣಮಾಲೆ ಮತ್ತು ಕಾಗುಣಿತಗಳನ್ನು ಕಲಿಸಿದೆವು. ಒಂದು ತಿಂಗಳಲ್ಲಿ ಅವನ್ನು ಕಲಿಸಿ, ವಯಸ್ಕರ ಶಿಕ್ಷಣ ಸಮಿತಿಯ ಪಠ್ಯ ಪುಸ್ತಕದ ಪಾಠಗಳನ್ನು ಪ್ರಾರಂಭಿಸಿದೆವು. ಅವನ್ನವರು ಸಲೀಸಾಗಿ, ತಡವರಿಸದೆ ಓದುತ್ತಾರೆ.'

ಶಿಕ್ಷಕಿಯ ಉತ್ತರದಲ್ಲಿ ವಾಸ್ತವ ಸತ್ಯವಿದೆ. ಭಾರತೀಯ ಭಾಷೆಗಳ ವರ್ಣಮಾಲೆಗಳಿಗೆ ಆಕರ ಸಂಸ್ಕೃತ ವರ್ಣಮಾಲೆ. ಅದು ಎರಡೂವರೆ ಸಾವಿರ ವರ್ಷಗಳಿಗೂ ಹಿಂದಿನದು. ಅದನ್ನು ವೈಜ್ಞಾನಿಕವಾಗಿ ಪರಿಷ್ಕರಿಸಿ ವ್ಯವಸ್ಥೆಗೊಳಿಸಿದ್ದ ಪಾಣಿನಿಗೆ ಪ್ರತಿಯೊಂದು ಅಕ್ಷರದ ಸ್ವರೂಪ ಲಕ್ಷಣ ಜಾಯಮಾನಗಳು ಗೊತ್ತಿದ್ದುವು. ಭಾರತೀಯರು ಉಚ್ಚರಿಸುವ ಪ್ರತಿಯೊಂದು ಧ್ವನಿಗೂ ಒಂದೊಂದು ಸುಸ್ಪಷ್ಟ ಧ್ವನಿಮಾ ಉಂಟು. ಜಗತ್ತಿನ ಯಾವ ಭಾಷೆಯಲ್ಲಿಯೂ ಇಂಥ ಪರಿಪೂರ್ಣ ವ್ಯವಸ್ಥಿತ ವರ್ಣಮಾಲೆಯಿಲ್ಲ. ಉಚ್ಚಾರಣಾ ಕ್ರಮಕ್ಕನುಗುಣವಾಗಿ ಅಕ್ಷರಗಳ ವಿಂಗಡಣೆ ಹಾಗೂ ಜೋಡಣೆ ವ್ಯವಸ್ಥೆಗೊಂಡಿದೆ. ವ್ಯಂಜನ ಶಿವನಂತೆ ನಿಷ್ಕ್ರಿಯ ; ಶಕ್ತಿರೂಪದ ಸ್ವರ ಅದರ ಜೊತೆಗೂಡಿದಾಗ ಮಾತ್ರ ಅದು ಕ್ರಿಯಾಶೀಲವಾಗುತ್ತದೆ. ಈ ಮಾತು ಸಾಮಾನ್ಯವಾಗಿ ಎಲ್ಲ ಭಾಷೆಗಳಿಗೂ ಅನ್ವಯಿಸುತ್ತದೆ. ಆದರೆ ಇಲ್ಲಿಯ ಭಾಷೆ

ಗಳಲ್ಲಿರುವ ಕಾಗುಣಿತ ವ್ಯವಸ್ಥೆ ಇತರ ಭಾಷೆಗಳಲ್ಲಿಲ್ಲ. ಆದ್ದರಿಂದ ವರ್ಣ ಹಾಗೂ ಕಾಗುಣಿತಗಳನ್ನು ಕಲಿಸಿದ್ದಾದರೆ, ಓದು ಬರಹಗಳನ್ನು ವ್ಯವಸ್ಥಿತ ರೀತಿಯಲ್ಲಿ ಕಲಿಸಿದಂತಾಗುತ್ತದೆ. ಆಗ ಯಾವ ಪುಸ್ತಕ ಕೊಟ್ಟರೂ ಕಲಿತವ ಓದುತ್ತಾನೆ. ಆಬಾಲವೃದ್ಧರು ಸಾಕ್ಷರರಾಗಬೇಕಾದ ವಿಧಾನವೇ ಇದು. ನಿರಕ್ಷರಿಗಳಾದ ವೃದ್ಧರು ಅನುಭವಸ್ಥರಾದ್ದರಿಂದ ವರ್ಣಮಾಲಾ ಪದ್ಧತಿ ಸರಿಯಲ್ಲವೆಂಬ ಯೋಚನೆ ತಪ್ಪೆಂಬುದಕ್ಕೆ ಪೂರ್ವೋಕ್ತ ಮುಸ್ಲಿಮ್ ಶಿಕ್ಷಕಿಯರ ಅನುಭವವೇ ಸಾಕ್ಷಿ. ವರ್ಣಮಾಲಾ ಪದ್ಧತಿಯ ಪ್ರಯೋಜನ ಶೀಘ್ರ ಮತ್ತು ಶಾಶ್ವತವೆಂಬುದು ಈ ಪ್ರಯೋಗದಿಂದ ಸುಸ್ಪಷ್ಟ. ಸಂದರ್ಭನರಿತು ಎರಡು ಪದ್ಧತಿಗಳನ್ನು ಮಿಶ್ರಮಾಡುವುದೇ ಸುವರ್ಣಮಾರ್ಗವೆಂದು ಹೇಳಬಹುದು.

ಕಳೆದ ತಿಂಗಳು (ಜುಲೈ, ೧೯೯೪) ನನ್ನ ಮಿತ್ರರೊಡನೆ ನಾನೂ ಹೋಗಿ ದೀರ್ಘಕಾಲ ಬೋಧಕರೊಡನೆ ಹಾಗೂ ಕಲಿಯುವವರೊಡನೆ ವಿಚಾರ ವಿನಿಮಯ ಮಾಡಿದಾಗ, ಆ ಕೇಂದ್ರದ ಯಶಸ್ಸಿನ ಬಗ್ಗೆ ನಮಗೆ ತುಂಬ ತೃಪ್ತಿಯಾಯಿತು. ಆಗ ನನಗೆ ಹೊಳೆದ ಸಂಗತಿಗಳಿಷ್ಟು : ಮುಸ್ಲಿಮರಾಗಲಿ ತಮಿಳರಾಗಲಿ ಇಲ್ಲಿಯ ಆಡುಭಾಷೆಯನ್ನು ಕಲಿಯಲು ಕಾತರರಾಗಿದ್ದಾರೆ. ಗಂಡಸರಿಗಿಂತ ಹೆಂಗಸರು ಹೆಚ್ಚು ಆಸಕ್ತಿ ವಹಿಸುತ್ತಾರೆ; ಅಷ್ಟೇ ಅಲ್ಲ, ಶೀಘ್ರವಾಗಿಯೂ ಚೆನ್ನಾಗಿಯೂ ಕಲಿಯುತ್ತಾರೆ. ತಾವು ಓದು ಬರಹ ಕಲಿತದ್ದಾದರೆ ತಮ್ಮ ಮಕ್ಕಳನ್ನು ಒಳ್ಳೆಯ ವಿದ್ಯಾವಂತರನ್ನಾಗಿ, ಸುಸಂಸ್ಕೃತರನ್ನಾಗಿ ಬೆಳೆಸಬಹುದೆಂಬುದು ಅವರ ಅಪೇಕ್ಷೆಯಾಗಿದೆ. ಕಲಿತವರ ಹಾಗೂ ರಾಜಕೀಯ ಕಪಟನಾಟಕ ಸೂತ್ರಧಾರರ ಶೋಷಣೆಯಿಂದ ಬಚಾವಾಗಬಹುದೆಂಬ ಭರವಸೆ ಅವರಿಗಿದೆ. ಜಗತ್ತಿನ ಆಗುಹೋಗುಗಳನ್ನು ತಿಳಿಯಲು ಓದು ಅನುಕೂಲವಾಗುತ್ತದೆಂಬ ಆಸೆಯೂ ಅವರಿಗಿದೆ.

ತಮಿಳು ಹೆಂಗಸೊಬ್ಬಳಿಗೆ ನಾನು ಹಲವು ಪ್ರಶ್ನೆಗಳನ್ನು ಹಾಕಿದೆ. ಅವಳು ಅತ್ಯಂತ ಉತ್ಸಾಹದಿಂದ ನನ್ನ ಪ್ರಶ್ನೆಗಳಿಗೆ ಉತ್ತರ ಹೇಳಿದಳು : ಅವಳ ವಯಸ್ಸು ಮೂವತ್ತೈದಿರಬಹುದು. ಮೂರು ಮಕ್ಕಳ ತಾಯಿ. ಗಂಡ ಬೀದಿ ಮಾರಾಟಗಾರ. ಅವಳಿಗೆ ಬೇರೆಯವರ ಮನೆಗೆಲಸ. ಒಬ್ಬ ಮಗ ಪ್ರೌಢಶಾಲೆಯಲ್ಲಿ ಓದುತ್ತಿದ್ದಾನೆ. ಮನೆಗೆ ಹೋದಾಗ ಅವನಿಂದಲೂ ಪಾಠ ಹೇಳಿಸಿಕೊಳ್ಳುತ್ತಾಳೆ. ಒಂದು ದಿನವೂ ತರಗತಿಗೆ ಗೈರುಹಾಜರಾದದ್ದಿಲ್ಲ. ಅವಳಿಗೆ ತಮಿಳು ಭಾಷೆಯೂ ಬರುವುದಿಲ್ಲ. ಶಿಕ್ಷಕರು ಅನುಸರಿಸುವ ಬೋಧನ ವಿಧಾನ ಉಪಯುಕ್ತವಾಗಿದೆ. ಯಾವುದಾದರೂ ಪಾಠ ಓದುವಂತೆ ಸೂಚಿಸಿದಾಗ, ಪುಸ್ತಕ ತೆರೆದು ಪಟಪಟನೆ ಓದಲಾರಂಭಿಸಿದಳು. ಹೊಸಪಾಠ ಓದುವಂತೆ ಕೇಳಿದಾಗ, ಕಾಗುಣಿತ ಕಲಿತಿದ್ದರ ಪರಿಣಾಮವಾಗಿ, ಪದಗಳನ್ನು ಜೋಡಿಸಿಕೊಂಡು ಸ್ವಲ್ಪವೂ ತಡವರಿಸದೆ ಓದುತ್ತಿದ್ದ ರೀತಿ ಆಶ್ಚರ್ಯಕರವಾಗಿತ್ತು. ಅಂತೆಯೇ ಮುಸ್ಲಿಮ್ ಮಹಿಳೆಯೊಬ್ಬಳನ್ನು ಓದುವಂತೆ ಕೇಳಿದಾಗಲೂ ನಮಗೆ ಆಶ್ಚರ್ಯ ಕಾದಿತ್ತು. ಅಕ್ಷರಗಳ, ಅಲ್ಪಪ್ರಾಣ ಮಹಾಪ್ರಾಣಗಳ ಉಚ್ಚಾರಣೆಯಲ್ಲಿ ಏನೊಂದೂ ಕುಂದು ಕಾಣಿಸಲಿಲ್ಲ.

ಕೆಲವು ಪದಗಳನ್ನು ಕಪ್ಪು ಹಲಗೆಯ ಮೇಲೆ ಬರೆಸಿದಾಗ, ತಪ್ಪುಗಳು ಕಾಣಲಿಲ್ಲ. ಯಾವುದಾದರೂ ಹಾಡನ್ನು ಹೇಳುವಂತೆ ಕೇಳಿದಾಗ, 'ಜಯ ಭಾರತ ಜನನಿಯ ತನುಜಾತೆ' ಎಂಬ ಕವಿತೆಯಿಂದ ಪ್ರಾರಂಭಿಸಿ, ಮತ್ತೆರಡು ಗೀತೆಗಳನ್ನು ಮೇಳದಲ್ಲಿ ಸೊಗಸಾಗಿ, ಉಚ್ಚಾರಣೆಯಲ್ಲಿ ತಪ್ಪಿಲ್ಲದಂತೆ, ಕನ್ನಡ ಎಲ್ಲರ ಮಾತೃಭಾಷೆಯೇನೋ ಎಂಬ ಭ್ರಮೆ ಹುಟ್ಟುವಂತೆ ಹಾಡಿದರು. ರಜತಾದ್ರಿಯವರು ಆಗಾಗ್ಗೆ ತರಗತಿಗಳಿಗೆ ಭೇಟಿಕೊಟ್ಟು, ಕಲಿಯುವವರನ್ನು ಪರೀಕ್ಷಿಸುವುದಲ್ಲದೆ, ಶಿಕ್ಷಕಿಯರನ್ನು ಹುರಿದುಂಬಿಸುತ್ತಾರೆ. ವಯಸ್ಕರ ಶಿಕ್ಷಣ ಅವರ ಪಾಲಿಗೆ ಕೇವಲ ಹವ್ಯಾಸವಲ್ಲ, ಅವರ ರಕ್ತದಲ್ಲಿ ರಕ್ತವಾಗಿ ಸೇರಿಕೊಂಡಿದೆ, ಅವರ ಬದುಕಿನ ಒಂದು ಭಾಗವಾಗಿದೆಯೆಂಬುದು ಸುಸ್ಪಷ್ಟ.

ಆರು ತಿಂಗಳ ನಂತರ (ಆಗಸ್ಟ್ ಕಳೆದ ಮೇಲೆ) ಆ ಸಾಕ್ಷರರಿಗೆ ಸಾಕ್ಷರೋತ್ತರ ಶಿಕ್ಷಣವನ್ನೂ ಸಮಾಜ ಶಿಕ್ಷಣವನ್ನೂ ಮುಂದುವರಿಸುವ ಆಲೋಚನೆಯಿದೆ. ಜತೆಗೆ ಪಕ್ಕದ ಹಳ್ಳಿಗಳಲ್ಲಿ ಮತ್ತೆ ಕೆಲವು ತರಗತಿಗಳನ್ನು ತೆರೆಯಬೇಕೆನ್ನುವ ಇಚ್ಛೆಯೂ ಇದೆ. ಸಣ್ಣದರಲ್ಲಿ ಸೌಂದರ್ಯವಿದೆಯೆಂಬ ಅರ್ಥಶಾಸ್ತ್ರಜ್ಞನ ಮಾತು ಇಲ್ಲಿಯೂ ನಿಜವಾಗಿದೆ. ವಿಕೇಂದ್ರೀಕರಣ ವ್ಯವಸ್ಥೆಯ ಮೂಲಕ, ಪ್ರಾಚೀನ ಹಾಗೂ ಆಧುನಿಕ ಪದ್ಧತಿಗಳೆರಡನ್ನೂ ಬಳಸಿಕೊಂಡು, ಕಲಿತ ಮಹಿಳೆಯರ ಸಹಕಾರದಿಂದ ವಯಸ್ಕರ ಶಿಕ್ಷಣ ತರಗತಿಗಳನ್ನು ನಡೆಸುವುದಾದರೆ, ಮಹಿಳೆ ವಿದ್ಯಾವಂತೆಯಾದರೆ ಮನೆಯವರೆಲ್ಲ ವಿದ್ಯಾವಂತರಾಗುತ್ತಾರೆನ್ನುವ ಸೂಕ್ತಿಯ ಹಿನ್ನೆಲೆಯಲ್ಲಿ ಮಹಿಳೆಯರಿಗೆ ಆದ್ಯತೆ ನೀಡುವುದಾದರೆ ಸಾಕ್ಷರತಾ ಆಂದೋಲನ ಯಶಸ್ವಿಯಾಗುತ್ತದೆನ್ನುವುದಕ್ಕೆ ಇಂಡೊ-ಡ್ಯಾನಿಷ್ ಸಾಂಸ್ಕೃತಿಕ ಸಂಸ್ಥೆಯ ಈ ನೂತನ ಪ್ರಯೋಗ ನಿದರ್ಶನವಾಗಿದೆ. ಈ ಯೋಜನೆಯ ಯಶಸ್ಸು ಮುಖ್ಯವಾಗಿ ರಜತಾದ್ರಿಯವರಿಗೆ, ಜತೆಗೆ ಅಲ್ಲಿಯ ಬೋಧಕವರ್ಗಕ್ಕೆ ಹಾಗೂ ಶಾಲೆಯ ಆಡಳಿತವರ್ಗಕ್ಕೆ ಸಲ್ಲಬೇಕಾಗಿದೆ.

ನಾವು ಜೀವಿಸಬೇಕು ಮತ್ತು ಜೀವಿಸುತ್ತ ಕಲಿಯುವದನ್ನೆಲ್ಲ ಕಲಿಯಬೇಕು.
ಆದರೆ ಕಲಿಯುವುದನ್ನೆಲ್ಲ ಕಲಿತು ನಂತರ ಜೀವಿಸುವದು ಮಾತ್ರ ಅಸಾಧ್ಯ.

—ಹಿ. ವೆಲ್ಸ್

ದೇವರು ಕೊಟ್ಟಾಗ

ಮಾಧವರಾವ್ ಮುಧೋಳ್

ಬಹಳ ದಿವಸಗಳಿಂದ ಬಷೀರಮಿಯ್ಯಾ ಅವರ ಕೈ ಕಟ್ಟಿದಂತಾಗಿತ್ತು. ಅಂಗಡಿಯ ಆದಾಯ ಕಡಿಮೆ. ಮನೆಯಲ್ಲಿ ಏಳು ಜನ ಊಟ ಮಾಡುವವರು. ಆದರೂ ಅವರು ದೇವರನ್ನು ಕೃತಜ್ಞತೆಯಿಂದ ಸ್ಮರಿಸುತ್ತಿದ್ದರು. ದೊಡ್ಡ ಮಗಳು ಮದುವೆಗೆ ಯೋಗ್ಯಳಾಗಿದ್ದಳು. ಆದರೆ ಅವರ ಹಣ ಕಾಸಿನ ಪರಿಸ್ಥಿತಿ ಸ್ವಲ್ಪವೂ ಸುಧಾರಿಸಿರಲಿಲ್ಲ. ಅವರು ತಮ್ಮ ಪತ್ನಿಗೂ, ತಮ್ಮನ್ನು ಭೇಟಿಯಾಗುವವರಿಗೂ, "ದೇವರೂ ಎಲ್ಲರಿಗೂ ಸಹಾಯ ಮಾಡುತ್ತಾನೆ. ನನಗೂ ಅವನೇ ಮಾಡುವ" ಎಂದು ಅನೇಕ ಸಲ ಹೇಳುತ್ತಿದ್ದರು.

"ಅವನು ಕೊಡುವುದಕ್ಕೆ ಪ್ರಾರಂಭಿಸಿದರೆ ಅನಂತ ಹಸ್ತದಿಂದ ಕೊಡುತ್ತಾನೆ. ಮಾಡು ಹರಿದು ಸುರಿಯುತ್ತಾನೆ" ಎಂದೂ ಒಂದೊಂದು ಸಲ ಹೇಳುವರು. ಜನರು ಕೇಳಿಯೂ ಕೇಳದಂತಿರುತ್ತಿದ್ದರು—"ಅನಂತ ಹಸ್ತದಿಂದ........ಮಾಡು ಹರಿದು ಸುರಿಯುವ...." ಎನ್ನುವ ಇವರ ಮಾತುಗಳು ಜನರ ಹಾಸ್ಯಕ್ಕೆ ಗುರಿಯಾಗುತ್ತಿದ್ದುವು.

ಮಿಯ್ಯಾ ಅವರು ಏನೂ ಉತ್ತರಿಸದೆ ಸುಮ್ಮನೆ ನಕ್ಕುಬಿಡುತ್ತಿದ್ದರು. ಅದೊಂದು ಮುಗ್ಧ ನಗು.

ಒಂದು ರಾತ್ರಿ ಅವರೊಂದು ಕನಸು ಕಂಡರು. ದೇವರೆದುರು ಅವರು ಮೊಣಕಾಲೂರಿ ಪ್ರಾರ್ಥಿಸುತ್ತಿದ್ದಾರೆ. ತಮ್ಮ ಆರ್ಥಿಕ ಪರಿಸ್ಥಿತಿಯ ಗೋಳನ್ನು ತೋಡಿಕೊಳ್ಳುತ್ತಿದ್ದಾರೆ. ಅವರಿಗೆ ಒಂದು ಬೆಳಕು ಕಂಡಿತು. ಒಂದು ಧ್ವನಿ ಕೇಳಿಬಂತು.

"ಬಷೀರ್ ? ಎದ್ದೇಳು !! ಊರಿನ ಆಚೆ ಮಾವಿನ ತೋಪಿನ ಹಿಂಬದಿಗೆ ಹೊರಟು ಹೋಗು. ಅಲ್ಲಿ ಒಂದು ಆಲದ ಮರವಿದೆ. ಅದರ ಹತ್ತಿರವಿರುವ ಭೂಮಿಯನ್ನು ಅಗಿ." ಬಷೀರಮಿಯ್ಯಾ ಅವರು ಧಡಪಡಿಸಿ ಎದ್ದು ಕುಳಿತರು. ಸ್ವಲ್ಪ ಸಮಯ ಮನಸ್ಸಿನಲ್ಲಿ ಕನಸನ್ನೇ ಮೆಲಕು ಹಾಕಿದರು. ಗುದ್ದಲಿ ತೆಗೆದುಕೊಂಡು, ಮೆತ್ತಗೆ ಮನೆಯನ್ನು ಬಿಟ್ಟು ಹೊರಟರು. ಅಲ್ಪ ಸಮಯದಲ್ಲಿ ಆ ಆಲದ ಮರದ ಹತ್ತಿರ ತಲಪಿದರು.

ಅವರು ನಾಲ್ಕೈದು ಸಲ ಅಗಿಯುವಷ್ಟರಲ್ಲೇ ಗುದ್ದಲಿಗೆ ಒಂದು ಬಿರುಸು ಪದಾರ್ಥ ತಗುಲಿತು. ಮಣ್ಣನ್ನು ಸರಿಸಿ ನೋಡಿದರು. ತಾಂಬ್ರದ ಒಂದು ಕುಡಿಕೆ ಕಂಡಿತು. ಕುಡಿಕೆಯ ಬಾಯಿಯ ಮೇಲಿನ ಮಣ್ಣನ್ನು ಆಚೆ ಸರಿಸಿ, ಒಳಗೆ ಕೈ ಹಾಕಿದರು—ದುಂಡು ದುಂಡಾದ ನಾಣ್ಯಗಳಿದ್ದುವು. ಮುಷ್ಟಿ ತುಂಬ ಹೊರಗೆ ತೆಗೆದಾಗ, ಚಿನ್ನದ ನಾಣ್ಯ

ಮೂಲ : ಡಾ|| ಬಿಶೇಶರ ಪ್ರದೀಪ.

ಗಳು. ಅವರ ಸಂತೋಷಕ್ಕೆ ಪಾರವೇ ಇರಲಿಲ್ಲ. ಆದರೆ ಮರುಕ್ಷಣವೇ ಅವರನ್ನು ಅಸಮಾಧಾನ ಆವರಿಸಿತು. ಈ ಹಣದ ಒಡೆಯ ಇದನ್ನು ಹೂತಿಟ್ಟಿದ್ದಾನೆ. ತನ್ನ ಹಣವನ್ನು ಅವನು ತಿರುಗಿ ತೆಗೆದುಕೊಳ್ಳಲು ಬಂದಾಗ, ಇಲ್ಲಿ ಈ ಹಣ ಇರದ್ದನ್ನು ಕಂಡು ಅವನಿಗೆ ಅದೆಷ್ಟು ದುಃಖವಾದೀತು! ಈ ಹಣ ನನ್ನದಾಗುವುದು ಸಾಧ್ಯವಿಲ್ಲ.

ಹೀಗೆ ವಿಚಾರಮಾಡಿ, ಚಿನ್ನದ ನಾಣ್ಯಗಳನ್ನು ಮತ್ತೆ ಅವರು ಕುಡಿಕೆಯಲ್ಲಿ ಹಾಕಿ, ಅದಕ್ಕೆ ಮಣ್ಣನ್ನು ಮೆತ್ತಿದರು. ಅದನ್ನು ಭೂಮಿಯ ಒಳಗಿರಿಸಿ, ಸರಿಯಾಗಿ ಸಮಮಾಡಿದರು. ಮನೆಗೆ ಹಿಂತಿರುಗಿದರು.

ದಿವಸವಿಡೀ ಮೂಕರಂತಿದ್ದರು– ಪತ್ನಿಗೂ ಏನೂ ಹೇಳಲಿಲ್ಲ. ರಾತ್ರಿ ಮಲಗಿದರೆ, ನಿದ್ರೆಯೇ ಬರಲಿಲ್ಲ. ಕುಡಿಕೆಯನ್ನು ತೆಗೆದುಕೊಂಡು ಬರಬೇಕು ಎಂದು ಒಮ್ಮೆ ಯೋಚಿಸುವರು. ಇಲ್ಲ ಇಲ್ಲ ಆ ಹಣ ನನ್ನದಲ್ಲ ಎಂದು ಇನ್ನೊಮ್ಮೆ ಹೇಳುವರು.

ಅವರು ಎಚ್ಚರವಿರುವುದನ್ನೂ, ಬರಿಯ ಮಗ್ಗುಲಾಗುತ್ತಿರುವುದನ್ನೂ ಕಂಡ. ಪತ್ನಿ ವ್ಯಸನದ ಕಾರಣ ಕೇಳಿದಳು.

ಅವರು ತಮ್ಮ ಕನಸಿನ ಕಥೆಯನ್ನು ಆಲದ ಮರದ ಹತ್ತಿರ ಚಿನ್ನದ ನಾಣ್ಯ ತುಂಬಿದ ಕುಡಿಕೆ ಸಿಕ್ಕಿದ್ದನ್ನೂ ಮತ್ತೆ ಅದನ್ನು ಅವರು ಬಿಟ್ಟು ಬಂದುದನ್ನೂ ಎಲ್ಲವನ್ನೂ ಹೇಳಿದರು.

ಪತ್ನಿಗೆ ಸಂಕಟವಾಯಿತು. "ಕೈಗೆ ಬಂದ ಸಂಪತ್ತನ್ನು ತಾವು ಹೀಗೆ ಬಿಟ್ಟು ಬರುವುದೇ" ಎಂದು ಕೇಳಿದಳು.

"ಒಳ್ಳೇ ಮಹಾರಾಯಿತಿ! ಅದು ನಮ್ಮ ಸಂಪತ್ತಲ್ಲ. ಬೇರೆ ಯಾರೋ ಹೂಳಿಟ್ಟ ಹಣ. ಅದನ್ನು ನಾವು ತೆಗೆದು ಕೊಳ್ಳುವುದು ಹೇಗೆ? ಆ ಸಂಪತ್ತು ನಮ್ಮದಾಗುವುದಿಲ್ಲ."

ಪತ್ನಿ ಕೋಪದಿಂದ ಕೈಲಾಗದವಳಂತೆ- ಇವರತ್ತ ನೋಡತೊಡಗಿದಳು.

ಪತಿ-ಪತ್ನಿಯರು ಮಾತನಾಡುತ್ತಿರುವಾಗ, ಯಾರೋ ಇಬ್ಬರು ಕಳವು ಮಾಡಲು ಇವರ ಮನೆ ನುಗ್ಗಿ ಅಡಗಿ ಕುಳಿತ್ತಿದ್ದರು. ಈ ಕಳ್ಳರು, ಪತಿ-ಪತ್ನಿಯರ ಮಾತನ್ನು ಕೇಳಿ, ಕೂಡಲೇ ಆ ಮನೆಯನ್ನು ಬಿಟ್ಟು, ಆ ಕುಡಿಕೆಯನ್ನು ಹುಗಿದಿಟ್ಟ ಸ್ಥಳಕ್ಕೆ ತಲಪಿದರು. ಭೂಮಿ ಇನ್ನೂ ಮೆತ್ತಗಾಗಿಯೇ ಇತ್ತು. ಅದನ್ನು ಅವರು ಬೇಗ ಬೇಗ ಕೆದರಿ ಹಾಕಿದರು. ಒಬ್ಬನು ಕುಡಿಕೆಯ ಒಳಗೆ ಕೈ ಹಾಕಿದ. "ಅಯ್ಯೋ! ಸತ್ತೆ!!" ಎಂದು ಕೂಗಿ, ಕೈ ಹೊರಗೆ ತೆಗೆದುಕೊಂಡ. ಅದೇ ಸಮಯಕ್ಕೆ ಇನ್ನೊಬ್ಬನೂ ಅದರ ಒಳಗೆ ಕೈ ಹಾಕಿದ. ಅವನೂ ಅಯ್ಯೋ ಸತ್ತೆ!" ಎಂದು ಅರಚಿ ಕೈ ಹೊರಗೆ ತೆಗೆದುಕೊಂಡ. ಒಬ್ಬರನ್ನೊಬ್ಬರು ಪರಸ್ಪರ ನೋಡತೊಡಗಿದರು. ಅವರ ಮುಖಗಳ ಮೇಲೆ ನೋವಿನ ಗೆರೆಗಳು ಎದ್ದು ಕಾಣುತ್ತಿದ್ದವು. ತಮ್ಮ ಗಾಯಗೊಂಡ ಕೈಯನ್ನು, ಇನ್ನೊಂದು ಕೈಯಿಂದ ಅದುಮಿಕೊಳ್ಳುತ್ತಿದ್ದರು.

ಮೊದಲನೆಯವನು, "ಈ ಹಾಳು ಬಷೀರ್ ನಮಗೆ ಮೋಸಮಾಡಿದ. ಈ ಕುಡಿಕೆಯಲ್ಲಿ ಅದೇನು ತುಂಬಿದೆಯೋ! ಅದೇನು ಕಡಿವಿತೋ ತಿಳಿಯದು" ಎಂದ. ಅವರಿಬ್ಬರೂ ನೋವಿನಿಂದ ಹಾಯೆ! ಹಾಯೆ!! ಎಂದು ನರಳುತ್ತಿದ್ದರು. ಜೊತೆಗೆ ಅವರ ಹೃದಯದಲ್ಲಿ ಸೇಡಿನ ಕಾವು ಜ್ವಲಿಸು

ತ್ತಿದ್ದಿತು. ಒಬ್ಬ, "ನಡೆ! ಆ ಹಾಳು ಬಷೀರ್‌ನಿಗೂ ಇದರ ರುಚಿ ತೋರಿಸೋಣ" ಎಂದ.

ಅವರು ಕುಡಿಕೆಯ ಬಾಯಿಯನ್ನು ಬಟ್ಟೆಯಿಂದ ಬಿಗಿಯಾಗಿ ಕಟ್ಟಿದರು. ರಾತ್ರೀನೇ ಅದನ್ನು ತೆಗೆದುಕೊಂಡು ಬಷೀರಮಿಯ್ಯಾನ ಮನೆಗೆ ಬಂದರು. ಇಬ್ಬರೂ ಅವರ ಮನೆಯ ಮಾಳಿಗೆಯ ಮಾಡನ್ನು ಏರಿ ಕುಳಿತರು. ಕೆಳಗಡೆಗೆ ಬಷೀರಮಿಯ್ಯಾ ಮಲಗಿದ್ದರು. ಸರಿಯಾಗಿ ಅವರ ಮಂಚದ ಮೇಲೆ ಮಾಳಿಗೆಯ ಮಾಡಿನಲ್ಲಿ ಒಂದು ತೂತು ಕೊರೆದರು. ಕುಡಿಕೆಯ ಬಾಯಿಯನ್ನು ಆ ತೂತಿನ ಮೇಲೆ ತಿರುಗಿಸಿ, ತೆರೆದಿರಿಸಿ, ತಾವು ಓಡಿ ಹೋದರು.

ಮಲಗಿ ಎದ್ದ ಬಷೀರಮಿಯ್ಯಾ ವಿಸ್ಮಯಗೊಂಡರು. ಅವರ ಮಂಚದ ಸುತ್ತ-ಮುತ್ತ ಕೋಣೆಯಲ್ಲಿ ಚಿನ್ನದ ನಾಣ್ಯಗಳೇ ನಾಣ್ಯಗಳು, ಸುರಿದಿದ್ದವು. ಮೇಲೆ ನೋಡಿದರು. ಮಾಡು ಹರಿದು ತೂತು ಆಗಿತ್ತು.



ಬೈದರೆ ಬೈದವರ ಬಾಯಿ ನೋಯುವದು. ಅದರಿಂದ ಇತರರಿಗೆ ಏನಾಗುವುದು? ನಿಂದಿಸಿದರೆ ನಿಂದಿಸಿದವರ ಗುಣವನ್ನು ಹೇಳುವದು. ಕೆಸರಲ್ಲಿ ಹೊರಳಾಡುವ ಹಂದಿ ಅದರಿಂದ ಇತರರ ಮೈ ಹೊಲಸಾಗುವುದೆಂದು ಸಂತೋಷಪಡುವುದು ಅದರ ಮೂರ್ಖತನ. ಪರಿಣಾಮವಾಗಿ ಅದರ ಮೈ ಹೊಲಸಾಗಿ ಅದನ್ನು ದೂರ ಮಾಡುತ್ತಾರೆಂಬುದು ಪಾಪ ಅದಕ್ಕೇನು ಗೊತ್ತು?

—ಯೋಗಸ್ವಾಮಿ

ಆತ್ಮ ನಿರ್ಮಾಣ

ಪಿ. ಶಿವಕುಮಾರಿ

ಪ್ರತಿಯೊಬ್ಬ ಮಾನವನ ಮುಖ್ಯ ಕರ್ತವ್ಯ —ಆತ್ಮ ನಿರ್ಮಾಣ. ಆತ್ಮ ನಿರ್ಮಾಣದಿಂದಲೇ ಸಮಾಜದ ನಿರ್ಮಾಣ. ತಮ್ಮನ್ನು ತಾವು ಸೌಂದರ್ಯಯುತರಾಗಿಡುವುದೇ ಆತ್ಮ ನಿರ್ಮಾಣದ ತಾತ್ಪರ್ಯ. ಸೌಂದರ್ಯವೆಂದರೆ ಬಾಹ್ಯ ಸೌಂದರ್ಯವಲ್ಲ. ದೇಶದ ಇಂದಿನ ಹೆಚ್ಚಿನ ಸಂಪತ್ತು ಬಾಹ್ಯ ಶೃಂಗಾರ ಸಾಮಗ್ರಿಗಳಿಗಾಗಿ ವ್ಯಯವಾಗುತ್ತಿದೆ. ಕ್ರೀಮ್, ಪೌಡರ್, ಸಾಬೂನು, ಸ್ನೋ, ಸುಗಂಧ ತೈಲಗಳು, ವಿಧ ವಿಧದ ಪೋಷಾಕುಗಳು ಮುಂತಾದವುಗಳ ಪ್ರಯೋಗದಿಂದ ಜನರು ತಮ್ಮ ಸೌಂದರ್ಯ ವರ್ಧನೆಯಲ್ಲಿ ನಿರತರಾಗಿರುತ್ತಾರೆ. ಈ ರೀತಿಯ ಫ್ಯಾಷನ್‌ಗಳಿಂದ ಸೌಂದರ್ಯ ವೃದ್ಧಿಸುವ ಬದಲಾಗಿ ದುಂದುವೆಚ್ಚ, ಮಾನಸಿಕ ಕ್ಷೋಭೆ, ದುಃಖಗಳು ವೃದ್ಧಿಸುತ್ತವೆ. ವಾಸ್ತವ ಸೌಂದರ್ಯಕ್ಕಾಗಿ ವ್ಯಕ್ತಿಯಲ್ಲಿ ಈ ೫ ಲಕ್ಷಣಗಳಿರಬೇಕು—
೧) ಇಂದ್ರಿಯನಿಗ್ರಹ ೨) ಜನಸೇವೆ
೩) ಭಗವಂತನ ಸ್ಮರಣೆ ೪) ಸತ್ಯಾನ್ವೇಷಣೆ
೫) ಆತ್ಮಾವಲೋಕನ.

ಇಂದ್ರಿಯ ನಿಗ್ರಹವಿಲ್ಲದ ವ್ಯಕ್ತಿಯು ವಿಷಯಲೋಲುಪತೆಯ ವಶನಾಗಿ ಪರಿವರ್ತತೆಯಾಗುತ್ತಿರುವಂತಹ ಸುಖ ಸೌಂದರ್ಯದ ಕಡೆ ಧಾವಿಸುತ್ತಾ ವಸ್ತು, ವ್ಯಕ್ತಿ ಮತ್ತು ಪರಿಸ್ಥಿತಿಗಳ ದಾಸನಾಗಿ ಅನೇಕ ಪ್ರಕಾರದ ದುರ್ಬಲತೆಗಳ ದಾಸನಾಗುವನು. ಇದರಿಂದಾಗಿ ಅವನಿಗೆ ತನ್ನ ಜೀವನದಲ್ಲಿ ಎಂದೂ ಸುಖ ದೊರೆಯಲಾರದು.

ಜನಸೇವೆಯೇ ಜನಾರ್ಧನ ಸೇವೆ ಎಂದು ಭಾವಿಸಿ ಜನಸೇವೆ ಮಾಡುವುದರಿಂದ ಸ್ವಯಂ ಸುಖಾಸಕ್ತಿ ನಾಶವಾಗುವುದು. ಸುಖಾಸಕ್ತಿಯ ನಾಶದಿಂದ ಸ್ವಾರ್ಥ ಭಾವನೆಯು ತೊಲಗುವುದು. ಇದರಿಂದ ಮನುಷ್ಯನು ಜಿತೇಂದ್ರಿಯನಾಗುವನು. ದುಃಖಿತ ವ್ಯಕ್ತಿಗೆ ಸಹಾಯ ಮಾಡುವುದು, ಸುಖೀ ವ್ಯಕ್ತಿಗಳ ಸಂತೋಷದಲ್ಲಿ ಭಾಗಿಯಾಗುವುದೇ ಜನಸೇವೆಯ ತಾತ್ಪರ್ಯ. ಇದುವೇ ಮಾನವೀಯತೆಯ ವಿಕಾಸದ ಮೂಲ ಮಂತ್ರ. ಈ ರೀತಿಯ ಸೇವೆಯಿಂದ ಆತ್ಮನಿರ್ಮಾಣ ಮತ್ತು ಸಮಾಜ ನಿರ್ಮಾಣ—ಎರಡೂ ಸಾಧ್ಯ.

ತಮ್ಮನ್ನು ತಾವು ನಿರ್ಮಿಸಲು

ಹಿಂದಿ ಮೂಲ—ಸ್ವಾಮಿಜೀ ಶ್ರೀ ಕೃಷ್ಣಾನಂದಜೀ.

ಭಗವಂತನ ಸ್ಮರಣೆಯು ಸರ್ವೋತ್ತಮ ಉಪಾಯ. ಮನುಷ್ಯನು ಯಾವ ರೀತಿ ಆಲೋಚಿಸುವನೋ ಅದೇ ರೀತಿ ತಯಾರಾಗುವನು. (ಮಹಾನಿತಿ ಭಾವಯನ್ ಮಹಾನ್ ಭವತಿ)—ಯಾವನು ಮಹತ್ತರವಾದುದನ್ನು ಕುರಿತು ಚಿಂತಿಸುವನೋ ಅವನು ಮಹಾತ್ಮನಾಗುವನು. ಇದರಲ್ಲಿ ಯಾವುದೇ ಸಂಶಯವಿಲ್ಲ. ಭಗವಂತನಿಗಿಂತ ಮಹಾತ್ಮನು ಯಾವನು? ಅಥವಾ ನಿರಂತರ ಭಗವದ್ ಚಿಂತನೆಯಿಂದ ಶ್ರೇಯಸ್ಸು. ಭಗವದ್ ಚಿಂತನೆ ಮಾಡದವನು ವಿನಾಶಕ್ಕೆ ಕಾರಣವಾಗುವ ಭೋಗ ವಿಲಾಸಗಳ ಚಿಂತನೆ ಮಾಡುವನು. ಭಗವದ್ ಚಿಂತನೆಗೆ ಭಗವಂತನಲ್ಲಿ ಆತ್ಮೀಯತೆಯು ಆವಶ್ಯಕವಾಗಿದೆ.

ಯಾವನು ಸತ್ಯದ ಬೋಧನೆ ಮಾಡುವನೋ ಅವನಿಗೆ ಸತ್ಯಪ್ರಾಪ್ತಿಯು ಖಂಡಿತ. ಆದರೆ ಇದಕ್ಕಾಗಿ ಅಸತ್ಯವನ್ನು ತ್ಯಜಿಸಬೇಕಾಗುವುದು. ಅಸತ್ಯದ ಗೆಳೆತನವಿರುವ ಮನುಷ್ಯನಿಗೆ ಮನದಲ್ಲಿ ಸದಾ ಸಂದೇಹ ಮತ್ತು ಮೃತ್ಯುವಿನ ಭಯವಿರುವುದು. ಯಾವ ವ್ಯಕ್ತಿಯು ಆತ್ಮನಿರ್ಮಾಣದ ಕಡೆಗೆ ಅಗ್ರಸರನಾಗುವನೋ ಅವನು ಮೊದಲನೆಯದಾಗಿ ಅಸತ್ಯವನ್ನು ಬಿಡಬೇಕು, ಎಂದರೆ ತನ್ನ ಕೆಲಸ ಕಾರ್ಯಗಳಿಗಾಗಿ ವಿಶ್ವಾಸ-ವಿವೇಕ-ವಿರೋಧಿಗಳೊಂದಿಗೆ ಸಂಪರ್ಕವಿದ್ದರೆ ಅವರೊಂದಿಗಿನ ಸಂಪರ್ಕ ಕಡಿದುಕೊಳ್ಳಬೇಕು.

ಸಾಧಕನು ಹೆಜ್ಜೆ ಹೆಜ್ಜೆಗೂ ಆತ್ಮಾವಲೋಕನ ಮಾಡಿಕೊಳ್ಳಬೇಕು. ಇದರಿಂದ ತನ್ನ ತಪ್ಪುಗಳನ್ನು ತಿದ್ದಿಕೊಳ್ಳುವ ಅವಕಾಶ ಮತ್ತು ತನಗೆ ದೊರಕಿದಂತಹ ಬಲ, ಯೋಗ್ಯತೆ ಮತ್ತು ಪರಿಸ್ಥಿತಿಯ ಸದುಪಯೋಗವೂ ಆಗುವುದು. ತನ್ನಲ್ಲಿ ಯಾವುದೇ ದೋಷಗಳಿದ್ದರೂ ತ್ಯಜಿಸಬೇಕು. ಆದರೆ ಪರರ ತಪ್ಪುಗಳನ್ನು ಮರೆತೂ ಸೂಚಿಸಬಾರದು. ಪರರಲ್ಲಿ ದೋಷವನ್ನು ಕಾಣುವವರಿಗೆ ಎಂದೂ ತಮ್ಮ ದೋಷಗಳು ಗೋಚರಿಸಲಾರವು. ಪರದೋಷ ಸೂಚನೆ ಮತ್ತು ಪರಚರ್ಚೆಯಿಂದ ಎಂದಿಗೂ ದೂರವಿರಬೇಕು. ಸತ್ಸಂಗ, ಸ್ವತಃ ಅಧ್ಯಯನ ಮತ್ತು ಕೇಳಿ ತಿಳಿದುಕೊಳ್ಳುವ ಫಲವು ಆತ್ಮಾವಲೋಕನದಿಂದಲೇ ದೊರಕುವುದು. ಸಾಧಕನಾದವನು ತಾನು ಪರರಿಂದ ಯಾವ ರೀತಿಯ ವ್ಯವಹಾರವನ್ನು ಇಚ್ಛಿಸುತ್ತಾನೋ ಅಂತೆಯೇ ಪರರೊಡನೆ ತಾನೂ ವ್ಯವಹರಿಸಬೇಕು. ಆತ್ಮ ನಿರ್ಮಾಣಕ್ಕೆ ಆತ್ಮಾವಲೋಕನವು ಆವಶ್ಯಕವಾಗಿದೆ.

ಭಗವಂತನು ಸರ್ವರಿಗೂ ಸದ್ಬುದ್ಧಿಯನ್ನು ಕರುಣಿಸಲಿ.

ಹೃದಯ ವಿಕಾಸಕ್ಕೆ ಹೃದಯ ಪಕ್ವವಾಗಬೇಕು. ಪಕ್ವವಿವೇಕ ಮತ್ತು ಹೃದಯ ವಿಕಾಸದಿಂದ ಮಾನವನ ಜೀವನವು ವಿಶಾಲವಾಗಿ, ಸೊಗಸು, ಪ್ರೀತಿ ಸೌಭಾಗ್ಯಗಳಿಂದ ಬೆಳಗಬಲ್ಲದು.

—ವರ್ಡ್ಸ್‌ವರ್ಥ್

ಸಲಗದೊಡನೆ ಸರಸ; ಬಂಡೀಪುರದಲ್ಲಿ ನಡೆದ ವಾಸ್ತವಿಕ ಘಟನೆ

ಸುಧಾಹರೀಶ್

ಬೇಸಿಗೆ ರಜ ಬಂತೆಂದರೆ ನಮ್ಮ ಮನೆಯವರಿಗೆಲ್ಲ ಕಾಡಿಗೆ ಹೋಗುವ ಆತುರ ಕಾತರ. ಕಾಡಿಗೆ ಅಂದರೆ ವಾನಪ್ರಸ್ಥಾಶ್ರಮಕ್ಕೆ ಅಲ್ಲ; ಅಭಯಾರಣ್ಯಗಳಿಗೆ ಹೋಗಿ ಅಲ್ಲಿ ಪ್ರಕೃತಿಯ ಮಡಿಲಿನಲ್ಲಿ ನಿರಂಕುಶವಾಗಿ ಓಡಾಡಿಕೊಂಡಿರುವ ಪ್ರಾಣಿಗಳ ದರ್ಶನಕ್ಕಾಗಿ ನಮ್ಮೆಲ್ಲರ ಮನಸ್ಸು ಹಾತೊರೆಯುತ್ತಿತ್ತು–ನಮ್ಮೆಲ್ಲರ ಮನ, ಅಂದರೆ ನಾವು ಮೂರು ಜನ ಅಕ್ಕತಂಗಿಯರು,ಮಕ್ಕಳು, ನನ್ನ ತಮ್ಮನ ಕುಟುಂಬ ಹಾಗೂ ನನ್ನ ಚಿಕ್ಕಪ್ಪನ ಮಕ್ಕಳು.

ನಮ್ಮ ಈ ಪ್ರವಾಸಕ್ಕೆ ನಾವು ಒಂದೆರಡು ತಿಂಗಳ ಮುಂಚೆ ಸಿದ್ಧಪಡಿಸುತ್ತಿದ್ದೆವು. ಹಾಗೂ ಅಲ್ಲಿ ಎರಡು ಮೂರು ದಿವಸ ತಂಗುವುದಕ್ಕೆ ಪ್ರವಾಸಿ ಮಂದಿರಕ್ಕೆ ಮುಂಗಡ ಹಣ ಕಳುಹಿಸಿ ಸ್ಥಿರಪಡಿಸಿಕೊಳ್ಳುತ್ತಿದ್ದೆವು. ಈ ಸಲವೂ ಹಾಗೆ ನಮ್ಮ ಕುಟುಂಬದವರೆಲ್ಲ ಒಂದೆಡೆ ಸೇರಿ ಮೂರು ದಿವಸಗಳಿಗೆ ಬೇಕಾಗುವ ಬಟ್ಟೆ, ಬರೆ ಇತ್ಯಾದಿ ಎಲ್ಲ ಸಾಮಾನುಗಳನ್ನೂ ಶೇಖರಿಸಿ ತಯಾರಾದೆವು.

ಎರಡು ಕಾರು, ಒಂದು ವ್ಯಾನ್ ನಮ್ಮ ಕುಟುಂಬವನ್ನು ಹೊತ್ತು ಶುಕ್ರವಾರದ ದಿವಸ ಪ್ರಯಾಣ ಬೆಳೆಸಿತು. ಮಕ್ಕಳ ಜೊತೆ ಹಿರಿಯರ ಉತ್ಸಾಹವೂ ನೂರ್ಮಡಿಯಾಗಿತ್ತು. ಹಾಡು ಹಾಸ್ಯ ಬೆರೆತ ಮಾತುಗಳೊಂದಿಗೆ ಮೂರು ವಾಹನಗಳಲ್ಲಿಯೂ ತುಂಬಿದ್ದ ನಾವು ಪ್ರಯಾಣ ಬೆಳೆಸಿದೆವು.

ಗುಂಡ್ಲುಪೇಟೆಯಲ್ಲಿ ಕಾಫಿಗೆಂದು ನಿಲ್ಲಿಸಿ, ಮುಂದಕ್ಕೆ ಪ್ರಯಾಣ ಬೆಳೆಸಿದೆವು. ಹಂಗಳ ಕಳೆದು ಬಂಡಿಪುರದ ಅಭಯಾರಣ್ಯದ ಅರಣ್ಯ ಪ್ರದೇಶ ಆರಂಭವಾದಂತೆ ಎಲ್ಲರ ಹಾಸ್ಯವೂ ತಣ್ಣಗಾಗಿ ಕಾಡುಪ್ರಾಣಿಗಳನ್ನು ವೀಕ್ಷಿಸುವ ಕುತೂಹಲ, ಆತಂಕ ತೀವ್ರವಾದುವು.

ಮುಂದೆ ಸಾಗುತ್ತಿದ್ದ ಮಾರುತಿ ಕಾರೊಂದು ತಿರುವಿನಲ್ಲಿ ನಿಂತಿದ್ದನ್ನು ಕಂಡು, ನಮ್ಮೆಲ್ಲರ ಕಾರುಗಳೂ ವೇಗವನ್ನು ಕಡಿಮೆ ಮಾಡಿ, ಆ ಮಾರುತಿ ಕಾರನ್ನು ಸಮೀಪಿಸಿದವು. ಆನೆಗಳ ಗುಂಪೊಂದು ರಸ್ತೆಯ ಮಧ್ಯದಲ್ಲೇ ಭಾರಿ ಕೂಟದೊಂದಿಗೆ ವಿಹಾರವನ್ನು ಕೈಗೊಂಡಿತ್ತು. ಗುಂಪಿನ ಮುಂದಿದ್ದ ಸಲಗವಂತೂ ಮುಂದಿದ್ದ ಮಾರುತಿ ಕಾರನ್ನು ಕಂಡು ತನ್ನ ಭೀಮ ಬಲವನ್ನು ಪ್ರದರ್ಶಿಸಲು ಮುನ್ನುಗ್ಗಿತು. ಅದನ್ನು ಕಂಡು ಹೆದರಿದ ಆ ಕಾರಿನ ಚಾಲಕ

ಹಿಂದಕ್ಕೆ ಕಾರನ್ನು ತಿರುಗಿಸಿಕೊಂಡು ಬಂದಿದ್ದರು.

"ಹಿಂದೆ ಹೋಗುವುದೇ ಉತ್ತಮ ಸಾರ್. ಏಕೋ ಅವು ನಮಗೆ ದಾರಿ ಬಿಡುವಂತೆ ಕಾಣುತ್ತಿಲ್ಲ" ಆತ ಹೇಳಿದಾಗ ಈ ಪ್ರದೇಶದಲ್ಲಿ ಓಡಾಡಿ ನುರಿತಿದ್ದ ನನ್ನ ಚಿಕ್ಕಪ್ಪನ ಮಗ :

"ನೀವು ಹಿಂದೆಯೇ ಇರಿ,ಸ್ವಲ್ಪ ಸಮಯ ಕಾದು ನೋಡೋಣ.ಅವು ಹೆಚ್ಚು ಸಮಯ ಇಲ್ಲಿ ನಿಲ್ಲಲಾರವೆಂದು ತೋರುತ್ತೆ" ಎಂದು ಅವರಿಗೆ ಧೈರ್ಯ ಹೇಳಿದ. ಆತ ಒಡಂಬಟ್ಟು ನಮ್ಮ ಹಿಂದೆಯೇ ನಿಂತರು. ಊಟಿಯಿಂದ ಲಾರಿ, ಕಾರುಗಳು ಸಾಲಾಗಿ ನಮ್ಮ ಎದುರು ಸಾಲಿನಲ್ಲಿ ನಿಂತವು. ಮಧ್ಯದಲ್ಲಿ ಆನೆಗಳ ಹಿಂಡು ಆರಾಮವಾಗಿ ವಿರಾಮದಲ್ಲಿ ತೊಡಗಿದ್ದುವು. ಅದೊಂದು ಅಪೂರ್ವ ದೃಶ್ಯ !

ಎಷ್ಟು ಕಾದರೂ ಆನೆಗಳು ಸರಿಯದೆ ಇದ್ದುದನ್ನು ಕಂಡ ಲಾರಿಯವ ಜೋರಾಗಿ ಹಾರನ್ ಮಾಡತೊಡಗಿದ. ಅವನನ್ನು ಅನುಸರಿಸಿ ಎಲ್ಲರೂ ತಮ್ಮ ವಾಹನದ ವಾದನವನ್ನು ಮೊಳಗಿಸಿದರು.

ಏನನ್ನಿಸಿತೋ ಏನೋ ಸಲಗ ಈ ಸದ್ದನ್ನು ಕೇಳಲಾಗದೆ ಜೋರಾಗಿ ಕೂಗನ್ನು ಹಾಕಿತು. ಅದರ ಕೂಗು ಕಾಡಿನಲ್ಲಿ ಮಾರ್ದನಿಸಿತು. ಅನಂತರ ನಿಧಾನವಾಗಿ ತನ್ನ ಹಿಂಡಿನೊಡನೆ ಕಾಡಿನೊಳಗೆ ಮರೆಯಾಯಿತು. ಅದರ ಕೂಗಿನಿಂದ ತತ್ತರಿಸಿಹೋಗಿದ್ದ ನಾವೆಲ್ಲ ಅದರ ನಿರ್ಗಮನದಿಂದ ನಿಟ್ಟುಸಿರುಬಿಟ್ಟೆವು. ಹುಡುಗರ ಮುಖದಲ್ಲಿ ಸಂತೋಷದ ಕಳೆ ಮೂಡಿತು.

ಮುಂದುವರಿದಂತೆ ಜಿಂಕೆಗಳ ಹೊರತು ಮತ್ತಿನ್ನಾವ ಪ್ರಾಣಿಗಳೂ ಗೋಚರಿಸಲಿಲ್ಲ. ಪ್ರಾಣಿಗಳನ್ನು ಕಾಣಬೇಕೆಂಬ ತವಕ ಮನದಲ್ಲಿದ್ದರೂ ಅಷ್ಟೇ ಭಯವೂ ಮನೆ ಮಾಡಿಕೊಂಡಿತ್ತು. ಬಂಡಿಪುರ ಅಭಯಾರಣ್ಯವನ್ನು ದಾಟಿ ನಮ್ಮ ಕಾರುಗಳು ಮಧುಮಲೈ ಅಭಯಾರಣ್ಯದತ್ತ ಸಾಗಿದುವು. ದಟ್ಟಕಾಡು. ಕಾಡಿನ ಮಧ್ಯದಲ್ಲಿ ಯಾವುದಾದರು ಪ್ರಾಣಿ ಗೋಚರಿಸುವುದೇನೋ ಎಂಬ ಅವ್ಯಕ್ತವಾದ ಆಸೆ ನಮ್ಮೆಲ್ಲರನ್ನೂ ಕಾಡಿನತ್ತ ಆಕರ್ಷಿಸಿತು. 'ಓ.. ನಮ್ಮ ಪ್ರವಾಸಿ ಮಂದಿರ !" ಮಕ್ಕಳೆಲ್ಲ ತಮ್ಮ ದೊಡ್ಡ ಧ್ವನಿಯಿಂದ ಕಿರುಚಿದುವು. ಅರಣ್ಯದ ಮಧ್ಯದಲ್ಲೇ ಪ್ರವಾಸಿ ಮಂದಿರವಿತ್ತು. ಅರಣ್ಯದಿಂದ ಮೊಳಗುತ್ತಿದ್ದ ಕಾಡು ಪ್ರಾಣಿಗಳ ಕೂಗು ಎದೆಯನ್ನು ನಡುಗಿಸುತ್ತಿತ್ತು.

ಮರೆಯಲ್ಲೆಲ್ಲೋ ಆನೆಯ ಕೂಗು ಕೇಳಿ ನನ್ನ ತಂಗಿಯೂ ಕಾರಿನಿಂದ ಪ್ರವಾಸಿ ಮಂದಿರದೊಳಗೆ ಬರಲು ಹೆದರಿದಳು. ಆನೆ ಬಂದಾಗ ಕಾಡಿನಲ್ಲಿರುವುದಕ್ಕಿಂತ ಪ್ರವಾಸಿ ಮಂದಿರವೇ ಉತ್ತಮ ಎಂದು ನಾವು ಸಲಹೆಯಿತ್ತಾಗ ಅವಳು ಹೆದರಿಕೆಯಿಂದ ಮುದುಡಿ ನಮ್ಮ ಮಧ್ಯೆಯೇ ನಡೆದಳು. ನಾವೆಲ್ಲ ಬೇಗ ಹೋಗಿ ಪ್ರವಾಸಿ ಮಂದಿರ ಸೇರಿದೆವು. ಪ್ರವಾಸಿ ಮಂದಿರದ ಹಿಂಭಾಗವೆಲ್ಲ ವೀಕ್ಷಿಸುತ್ತಿದ್ದಂತೆ ಪ್ರವಾಸಿ ಮಂದಿರದ ಹಿಂದೆ ನಮಗೆ ಸರಪಳಿಗಳಿಂದ ಬಿಗಿದಿದ್ದ ಆನೆಯೊಂದು ಗೋಚರಿಸಿತು. ಆಗಲೇ ನಮಗೆ ತಿಳಿದಿದ್ದು ....ನಮ್ಮ ಹೃದಯವನ್ನು ನಡುಗಿಸುವಂತೆ ಕೂಗಿದ ಆನೆ ಅದೇ ಎಂದು.

ಪ್ರಯಾಣದ ಆಯಾಸದಿಂದ ಎಲ್ಲರೂ ದಣಿದಿದ್ದರಿಂದ ಅಂದು ಸಂಜೆ ಪ್ರವಾಸಿ

ಮಂದಿರದಲ್ಲೇ ಕುಳಿತು ಹಲವಾರು ಆಟಗಳನ್ನು ಆಡಿದೆವು. ಇಸ್ಪೀಟ್, ಕುಡಿತದ ಹಿರಿಯರ ಗುಂಪೊಂದು ಆಟ ಮುಗಿಸಿದಾಗ ರಾತ್ರಿ ಹತ್ತುವರೆ ಮೀರಿತ್ತು. ಅಷ್ಟರಲ್ಲಿ ಮೇಟಿ ಊಟ ತಯಾರಿದೆ ಎಂದು ಹೇಳಿದ್ದರಿಂದ ಊಟ ಮುಗಿಸಿ ವಾಪಸ್ಸು ಹಿಂದಿರುಗಿ ಮಲಗಿದೆವು. ರಾತ್ರಿಯೆಲ್ಲಾ ಪ್ರಾಣಿಗಳ ಕೂಗು ಕಾಡಿನಿಂದ ಮೊಳಗಿದವು. ಪ್ರವಾಸಿ ಮಂದಿರದ ಬಳಿ ಪ್ರಾಣಿಗಳು ಬರುವ ಸಾಧ್ಯತೆ ಇದೆಯೆಂದು ಮೇಟಿ ಹೇಳಿದ್ದರಿಂದ ನಾವು ಕಿಟಕಿಯಲ್ಲಿ ತಲೆ ಹಾಕಿ ಪ್ರಾಣಿಗಳನ್ನು ನೋಡುವ ಕಾತರದಿಂದ ರಾತ್ರಿಯೆಲ್ಲ ಸುಮಾರು ಹೊತ್ತಿನ ತನಕವೂ ಕಾದು ಕುಳಿತೆವು. ಒಂದು ಸಲ ಜಿಂಕೆಯ ಹಿಂಡು ಆಗಮಿಸಿ ಕೆಲವು ಕ್ಷಣ ಹುಲ್ಲು ಮೇಯುತ್ತಿತ್ತು. ಅನಂತರ ಯಾವುದೋ ಪ್ರಾಣಿಯ ಆಗಮನದ ಸೂಚನೆಯಂತೆ ಹಟಾತ್ತನೆ ನಿರ್ಗಮಿಸಿದವು. ಮತ್ತೊಮ್ಮೆ ಕಾಡು ಹಂದಿಗಳು ಆಗಮಿಸಿ ಸ್ವಲ್ಪ ಸಮಯವಿದ್ದು ಮಾಯವಾದುವು. ನಮಗೆಲ್ಲ ಕಾದು ಕುಳಿತು ಸಾಕಾಗಿ, ಕಣ್ಣಿವೆಗಳು ಮುಚ್ಚುವುದರಲ್ಲಿದ್ದು, ಎಲ್ಲರೂ ನಮ್ಮ ನಮ್ಮ ಹಾಸಿಗೆಯನ್ನು ಸೇರಿ ನಿದ್ರಾದೇವಿಯ ವಶವಾದೆವು.

ಬೆಳಗ್ಗೆ ಬೇಗ ಸ್ನಾನ ತಿಂಡಿ ಮುಗಿಸಿ ಕಾಡಿನೊಳಗೆ ವ್ಯಾನಿನಲ್ಲಿ ಹೊರಡಲು ತಯಾರಾದೆವು. ವ್ಯಾನಿನಲ್ಲಿ ಮೂರು ನಾಲ್ಕು ಘಂಟೆಗಳು ಸುತ್ತಿದರೂ ಯಾವ ವಿಶೇಷ ಪ್ರಾಣಿಯೂ ಗೋಚರಿಸಲಿಲ್ಲ. ಜಿಂಕೆಯ ಗುಂಪು ಮತ್ತು ಕಾಡೆಮ್ಮೆಗಳ ಒಂದು ಗುಂಪು ಮಾತ್ರ ಕಾಣಿಸಿತು. ಅಷ್ಟರಲ್ಲೇ ನಾವು ತೃಪ್ತರಾಗಿ ಹಿಂದಿರುಗಬೇಕಾಯಿತು. ಅಲ್ಲೇ ಸಮೀಪದಲ್ಲಿದ್ದ ಲಾಡ್ಜಿನ ಅಡುಗೆ ಭಟ್ಟರಿಗೆ ಊಟದ ವ್ಯವಸ್ಥೆ ಮಾಡಲು ಹೇಳಿದ್ದೆವಾದ್ದರಿಂದ, ಊಟ ಮುಗಿಸಿ, ಲಾಡ್ಜಿನ ವರಾಂಡದಲ್ಲಿ ಹಾಕಿದ್ದ ಆಸನಗಳಲ್ಲಿ ವಿಶ್ರಾಂತಿ ಪಡೆದೆವು. ಆ ಲಾಡ್ಜಿನ ಮುಂದೆಯಿದ್ದ ಇಪ್ಪತ್ತು ಅಡಿಯ ತಗ್ಗಿನಲ್ಲಿ ತೊರೆ ಹರಿಯುತ್ತಿತ್ತು. ಅಲ್ಲಿಗೆ ನೀರು ಕುಡಿಯಲೆಂದು ಬಂದಿದ್ದ ದೊಡ್ಡ ಒಂಟಿ ಸಲಗ ಹಲವಾರು ನಿಮಿಷಗಳ ಕಾಲ ನಮ್ಮ ಮನವನ್ನು ಸೆರೆ ಹಿಡಿಯಿತು. ತಗ್ಗಿನ ಪ್ರದೇಶಲ್ಲಿದ್ದುದರಿಂದ ನಾವೆಲ್ಲ ಧೈರ್ಯದಿಂದ ನಿಂತು ಅದರ ಒಂದೊಂದು ನಿಮಿಷದ ನಿಲುವನ್ನು ವೀಕ್ಷಿಸಿದೆವು.

ಪಳಗಿಸಿದ ಆನೆಗಳನ್ನು ಕಲೆ ಹಾಕುವ ವಿಶಾಲವಾದ ಅಂಗಳ ಅಲ್ಲೇ ಸಮೀಪದಲ್ಲಿತ್ತು. ಪಳಗಿದ ಆನೆಗಳು ಬೆಳಗ್ಗೆಯೆಲ್ಲಾ ಕಾಡಿನಲ್ಲಿ ಸಂಚರಿಸಿ ಸಂಜೆಯ ಸಮಯದಲ್ಲಿ ಅಲ್ಲಿಗೆ ಮರಳುತ್ತಿದ್ದುವು. ಪ್ರವಾಸಿಗರ ಮನ ತಣಿಸಲು ಅವುಗಳಿಂದ ವಿವಿಧ ಆಟಗಳನ್ನು ಪ್ರದರ್ಶಿಸುತ್ತಿದ್ದರು. ಇವನ್ನು ನೋಡಲೋಸುಗ ನಾವೆಲ್ಲ ಹೊರಟೆವು. ಚಿಕ್ಕಮರಿಯಿಂದ ಎಂಟು-ಹತ್ತು ಅಡಿ ಎತ್ತರದವರೆಗಿನ ಆನೆಗಳು ಅಲ್ಲಿ ಕಲೆ ಹಾಕಲ್ಪಟ್ಟಿದ್ದವು. ಆ ದಿವಸ ಒಂದು ಆನೆ ಇನ್ನೂ ಬಾರದಿದ್ದುದರಿಂದಲೊ ಏನೋ ಹಲವು ಸಮಯ ಕಳೆದರೂ ಆಟದ ಪ್ರದರ್ಶನವಾಗಲಿಲ್ಲ.

ನಮಗೆ ಕುಳಿತು ಸಾಕಾಗಿ, ಕೆಲವರು ಲಾಡ್ಜಿಗೆ ಹೋಗುವ ಆತುರ ಪ್ರಕಟಿಸಿದರು. ಹಾಗಾಗಿ ನಾವೆಲ್ಲ, ಎರಡು ಕಾರಿನ ಜನರು, ಲಾಡ್ಜಿಗೆ ಹೋಗುವುದೆಂದು ನಿರ್ಧರಿಸಿ, ಮಿಕ್ಕವರಿಂದ ಬೀಳ್ಕೊಂಡು ಹೊರಟೆವು.

ನಾವು ಇಳಿದುಕೊಂಡಿದ್ದ ಲಾಡ್ಜನ್ನು ತಲುಪಲು ಕಾಡಿನ ಮಧ್ಯದಲ್ಲೇ ಹಾದು ಹೋಗಬೇಕಿತ್ತು. ನಾವೆಲ್ಲ ಕಾಡು ಪ್ರಾಣಿಗಳ ನಿರೀಕ್ಷೆಯಲ್ಲಿ ಅತ್ತಿತ್ತ ಕಣ್ಣು ಹಾಯಿಸುತ್ತ ಮುನ್ನಡೆದೆವು. ಇದ್ದಕ್ಕಿದ್ದಂತೆ ಮುಂದಿನ ಕಾರಿನಲ್ಲಿದ್ದ ನನ್ನ ತಮ್ಮ ಒಂದು ಪಕ್ಕ ಕೈ ತೋರಿಸುತ್ತ ಕಾರಿನ ವೇಗವನ್ನು ತಗ್ಗಿಸಿದ. ಆ ದೃಶ್ಯವನ್ನು ಕಂಡು ನನ್ನ ಹೃದಯ ಝಲ್ಲೆಂದಿತು. ಪಕ್ಕದಲ್ಲೇ ಸಮೀಪದಲ್ಲಿ ಒಂಟಿ ಸಲಗವೊಂದು ಕಾಡಿನಿಂದ ಧಾವಿಸುತ್ತಿತ್ತು. ಅದು ಕಾರನ್ನು ನೋಡಿದ ಒಡನೆ ಅರಣ್ಯವನ್ನೇ ನಡುಗಿಸುವಂತೆ ತನ್ನ ಕೊರಳಿನಿಂದ ಘೀಕಾರವನ್ನು ಮಾಡಿತು. ನನ್ನ ತಮ್ಮ ಅದನ್ನು ನೋಡಿ ಮುಂದುವರಿದಿದ್ದರೆ ಸರಿ ಹೋಗುತ್ತಿತ್ತು. ಆದರೆ ಆ ದೃಶ್ಯವನ್ನು ನೋಡಲೋಸುಗ ಅವನು ಕಾರನ್ನು ನಿಲ್ಲಿಸಿದ. ಅದರಿಂದ ಕೋಪಾವೇಶಗೊಂಡ ಆನೆ ಘೀಳಿಡುತ್ತ ಕಾರನ್ನು ಅಟ್ಟಿಸಿಕೊಂಡು ಬಂದಿತು. ನನ್ನ ಚಿಕ್ಕಪ್ಪನ ಮಗನೇನೋ ತತ್‌ಕ್ಷಣ ಕಾರನ್ನು ಚಲಾಯಿಸಿ ಮುನ್ನುಗ್ಗಿದ. ಆದರೆ ನಾವು ಹಿಂದೆ ಬಿದ್ದೆವು. ತನ್ನಿಂದ ಪಾರಾದಲ್ಲಾ ಎಂಬ ಅದರ ರೋಷ ನಮ್ಮತ್ತ ತಿರುಗಿ, ಹಿಂತಿರುಗಿ ಘೀಳಿಡುತ್ತ ನಮ್ಮತ್ತ ಧಾವಿಸಿತು. ನನ್ನ ಚಿಕ್ಕಪ್ಪನ ಮಗ ತಾನು ಕುಳಿತಿದ್ದ ಕಾರನ್ನು ಡ್ರೈವ್ ಮಾಡುತ್ತಿದ್ದವನು ಗಾಬರಿಯಿಂದ ಕಾರನ್ನು ತಕ್ಷಣ ಹಿಂತಿರುಗಿಸಿ ಪಲಾಯನ ಮಾಡಿದ. ಆನೆ ಹಿಂದೆ, ನಾವು ಮುಂದೆ. ಸ್ವಲ್ಪ ದೂರ ಹೋದಂತೆ ಅದು ನಮ್ಮನ್ನು ಹೆದರಿಸಿ ಮತ್ತೆ ಕಾಡನ್ನು ಹೊಕ್ಕಿತು. ನಮ್ಮೆದುರಿಗೆ ಬಂದ ಇನ್ನೊಂದು ಕಾರಿನವರೂ ಸಹ ಗಾಬರಿಯಿಂದ ಕಾರನ್ನು ತಿರುಗಿಸಿ ವಾಪಸ್ಸಾಗಲು ಹೊರಟರು. ಅದು ಕಾಡಿನೊಳಗೆ ನಿರ್ಗಮಿಸಿದ್ದನ್ನು ಕಂಡ ನನ್ನ ತಮ್ಮ ಕಾರನ್ನು ಮುಂದುವರಿಸಿದರೆ ಕಾಡಿನಲ್ಲಿ ಅಲ್ಲೇ ಪಕ್ಕದಲ್ಲಿ ನಿಂತಿದ್ದು, ನನ್ನನ್ನು ಗಮನಿಸುತ್ತಿದ್ದ ಆ ಸಲಗ ಅಟ್ಟಿಸಿಕೊಂಡು ಬರುತ್ತಿತ್ತು. ನಾವು ಪುನಃ ಹೆದರಿ ಹಿಂದಕ್ಕೆ ಹೋದರೆ ಅದೂ ಹಿಂತಿರುಗುತ್ತಿತ್ತು. ಹೀಗೆ ಹಲವು ಸಾರಿ ಅದು ನಮ್ಮನ್ನು ಹೆದರಿಸುತ್ತ ದಾರಿಗೆ ಅಡ್ಡಲಾಗಿ ನಿಂತಿತ್ತು. ಅಷ್ಟರಲ್ಲಿ ಆ ದಾರಿಯಿಂದ ಬಂದ ಒಂದು ಲಾರಿ ಜೋರಾಗಿ ಹಾರನ್ ಮಾಡುತ್ತಾ ಬಂದಿದ್ದರಿಂದ ಅದು ಹೆದರಿ ಗಾಬರಿಯಿಂದ ಕಾಡಿನೊಳಗೆ ನುಗ್ಗಿದ್ದು, ಹೊರಬರಲಿಲ್ಲ. ಬದುಕಿದೆಯಾ ಬಡಜೀವವೇ ಎಂದುಕೊಂಡ ನಾವು ಆ ಲಾರಿಯ ಹಿಂದೆಯೇ ವೇಗವಾಗಿ ನುಗ್ಗಿ ನಾವು ಇಳಿದುಕೊಂಡಿದ್ದ ಪ್ರವಾಸಿ ಮಂದಿರವನ್ನು ತಲುಪಿ ಉಸ್ಸಪ್ಪ ಎಂದು ಕುಳಿತೆವು. ಅರ್ಧ ಗಂಟೆಯ ತರುವಾಯ ಇನ್ನೊಂದು ಕಾರಿನಲ್ಲಿ ನನ್ನ ತಂಗಿ ಮತ್ತು ಇತರರು ಆಗಮಿಸಿದರು. ಅವರಿಗೆ ನಮ್ಮ ಆನೆಯ ಭೇಟಿಯ ಕಥೆಯನ್ನು ವಿವರಿಸಿದಾಗ ಅವರಿಗೆಲ್ಲಾ ಆಶ್ಚರ್ಯ! ನನ್ನ ತಂಗಿಯಂತೂ ನಾವೆಲ್ಲಾ ಅದೇ ದಾರಿಯಲ್ಲೇ ಇದೇ ತಾನೇ ಬಂದಿದ್ದೇವೆ. ನೀವುಗಳು ಅಲ್ಲಿ ಆನೆಗಳ ಪ್ರದರ್ಶನ ಮತ್ತು ಪೂಜೆಯನ್ನು ಬಿಟ್ಟುಬಂದಿದ್ದೀರಿ. ಆನೆ ಗಣೇಶನ ಸ್ವರೂಪ. ನೀವು ಅದನ್ನು ಅನಾದರಿಸಿ ಬಂದಿದ್ದರಿಂದ ಈ ರೀತಿ ಆಯಿತು ಎಂದು ದೊಡ್ಡ ತತ್ವವನ್ನೇ ಬೋಧಿಸಿದಳು.

ಗಣೇಶನ ಅಸಮಾಧಾನವೋ, ನಮ್ಮ ಅದೃಷ್ಟವೋ, ಅಂತೂ ನಾವು ಗಣೇಶನ ಬೆದರಿಕೆಗೆ ಒಳಗಾದರೂ ಅದೃಷ್ಟವಶಾತ್ ಮೃತ್ಯುವಿನ ದವಡೆಯಿಂದ ಪಾರಾಗಿದ್ದೆವು.

ನೀವು ನಿಮ್ಮ ಜೀವನ ಸಂಗಾತಿಗೆ ಏನನ್ನು ತಿಳಿಸಬಾರದು ?

ಶಂಸ ಐತಾಳ

ಕಂಪ್ಯೂಟರ್ ಸಂಸ್ಥೆಯೊಂದರಲ್ಲಿ ದೊಡ್ಡ ಅಧಿಕಾರಿಯಾಗಿದ್ದ ಡಾ|| ರಾವ್ ಕೆಲಸ ಕಳೆದುಕೊಂಡಿದ್ದಾರೆ. ಆದರೂ ಪ್ರತಿದಿನ ಬೆಳಗ್ಗೆ ಕಛೇರಿ ವೇಳೆಗೆ ಸರಿಯಾಗಿ ಅವರು ಮನೆಯಿಂದ ಹೊರಟು ಸಂಜೆ ಕಛೇರಿ ಬಿಟ್ಟ ವೇಳೆಗೆ ಮನೆಗೆ ಬರುತ್ತಾರೆ. ರಾತ್ರಿ ಟಿ.ವಿ. ನೋಡುತ್ತಿರುವಾಗಲೂ ಅವರು ಮಂಕಾಗಿ ಕುಳಿತಿರುತ್ತಾರೆ; ಹರಟೆ ಹೊಡೆಯುವ ಎಂದಿನ ಉತ್ಸಾಹ ತೋರಿಸುವುದಿಲ್ಲ. ಅವರ ಈ ವಿಚಿತ್ರ ವರ್ತನೆಯಿಂದ, ಮೌನದಿಂದ ದಿಗ್ಭ್ರಮೆಗೊಂಡ ಶ್ರೀಮತಿ ರಾವ್ ಗಂಡ ಯಾವುದೋ ತೊಂದರೆಯಲ್ಲಿ ಸಿಲುಕಿರ ಬೇಕು ಎಂದು ಊಹಿಸುತ್ತಾರೆ. ಕೊನೆಗೂ ಸತ್ಯ ಹೊರಬಿದ್ದಾಗ, ಆಕೆ ಸಿಡಿಮಿಡಿಗೊಳ್ಳು ತ್ತಾರೆ–ಡಾ. ರಾವ್ ತಮಗೆ ವಿಷಯವನ್ನು ತಿಳಿಸದೆ ಮುಚ್ಚಿಟ್ಟ ಬಗ್ಗೆ.

'ತಮ್ಮ ಜೀವನದ ಸಂಗಾತಿಗೆ ತಿಳಿಸ ಲಾರದ ಕೆಲವು ವಿಷಯಗಳು ಇರುತ್ತವೆ ಎಂದು ಅನೇಕ ಗಂಡಂದಿರೂ ಹೆಂಡತಿಯರೂ ಭಾವಿಸಿರುತ್ತಾರೆ' ಎನ್ನುತ್ತಾರೆ ಕುಟುಂಬ ಸಲಹೆಗಾರ ರಾಡ್ನಿ ಶಾಪಿರೊ. ಅವರ ಅಭಿ ಪ್ರಾಯದಂತೆ, 'ಸದಾ ಕಾಲವೂ ನೂರಕ್ಕೆ ನೂರರಷ್ಟು ಸತ್ಯ ಸಂಗತಿಗಳನ್ನು ತಮ್ಮ ಜೀವನ ಸಂಗಾತಿಗೆ ತಿಳಿಸುವ ದಂಪತಿಗಳ ಸಂಬಂಧ ಮಾತ್ರ ಸದೃಢವಾಗಿರುತ್ತದೆ. ತಮ್ಮ ಸಂಗಾತಿಗೆ ನಿಜ ಹೇಳುವ ಅಭ್ಯಾಸ ವುಳ್ಳ ದಂಪತಿಗಳಲ್ಲಿ ಪರಸ್ಪರ ಆತ್ಮೀಯತೆ ವಿಶ್ವಾಸಭಾವನೆಗಳೂ ಇರುತ್ತವೆ.'

ನಿಮ್ಮ ಜೀವನ ಸಂಗಾತಿಯ ರಹಸ್ಯ ಗಳನ್ನು ತಿಳಿಯುವ ಪ್ರಯತ್ನಕ್ಕೆ ತೊಡ ಗುವ ಮೊದಲು, ಗಂಡ ಹೆಂಡಿರು ಸಾಮಾನ್ಯ ವಾಗಿ ತಮ್ಮಲ್ಲಿಯೆ ಬಚ್ಚಿಟ್ಟುಕೊಳ್ಳಲು ಬಯಸುವ ವಿಷಯಗಳು ಯಾವುವು ? ಅವು ಗಳನ್ನು ತಿಳಿಸದೆ ಇರಲು ಕಾರಣಗಳೇನು ? ಎಂಬುದನ್ನು ತಿಳಿಯುವುದು ಆವಶ್ಯಕ ಎನ್ನುತ್ತಾರೆ ಸುಪ್ರಸಿದ್ಧ ಮನೋರೋಗ ಚಿಕಿತ್ಸಕ ಡಾರಿಸ್ ಹೆಲ್ಮರಿಂಗ್. ಅವರ ಅಭಿ ಪ್ರಾಯದಂತೆ, 'ಇತರರಿಗೆ ತಿಳಿಸಲು ಒಪ್ಪದ

೧೯೯೩ರ ಮೇ ತಿಂಗಳಿನ 'ರೀಡರ್ಸ್ ಡೈಜೆಸ್ಟ್' ಮಾಸ ಪತ್ರಿಕೆಯಲ್ಲಿ ಪ್ರಕಟವಾದ ಡಯಾನ್ನೆ ಹೇಲ್ಸ್ ಅವರ 'ವಾಟ್ ಯು ಶುಡ್ ನಾಟ್ ಟೆಲ್ ಯುವರ್ ಸ್ಪೌಸ್' ಎಂಬ ಲೇಖನದ ಆಧಾರದಿಂದ.

ವಿಷಯಗಳು ಸ್ತ್ರೀ–ಪುರುಷರಲ್ಲಿ ಬೇರೆ ಬೇರೆಯೇ ಆಗಿರುತ್ತವೆ.'

ಗಂಡಂದಿರು ತಿಳಿಸದೆ ಇರುವ ವಿಷಯಗಳು ಯಾವುವು ? ಸುಮಾರು ಎರಡು ತಿಂಗಳ ಕಾಲ ಬಾಬ್ ಹೆಂಡತಿಯ ಮುಖಕ್ಕೆ ಮುಖ ಕೊಟ್ಟು ಮಾತನಾಡುತ್ತಿರಲಿಲ್ಲ. ಒಂದು ದಿನ ಅಕಸ್ಮಾತ್ತಾಗಿ, ಗಂಡನ ಬಲ ದವಡೆಯಲ್ಲಿ ಊತವೊಂದು ಬೆಳೆದಿರುವುದು ಹೆಂಡತಿಯ ದೃಷ್ಟಿಗೆ ಬಿತ್ತು. ಅನಂತರ ಬಾಬ್ ದಂಪತಿಗಳು ವೈದ್ಯರಲ್ಲಿಗೆ ಹೋಗುವ ತೀರ್ಮಾನ ಮಾಡಿದರು. ಅವರ ಶಿಫಾರಸಿನಂತೆ ಬಾಬ್, ಕುತ್ತಿಗೆಯ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡರು. ಆಗ ದವಡೆಯಲ್ಲಿ ಬೆಳೆದ ಊತ ನಿರಪಾಯಕಾರಿ ಎಂದು ತಿಳಿದು ಬಂತು. ಆಮೇಲೆಯೇ ಆ ದಂಪತಿ ಒಟ್ಟಿಗೆ ಕುಳಿತು ಮುಖಾಮುಖಿ ಮಾತಾಡುವ 'ಧೈರ್ಯ' ಬಂದದ್ದು.

ಗಂಡಸರಲ್ಲಿ ಅನೇಕರು ತಮ್ಮ ಆರೋಗ್ಯ ಸಮಸ್ಯೆಗಳ ಬಗ್ಗೆ ಇತರರಿಗೆ ತಿಳಿಸಲು ಹಿಂಜರಿಯುತ್ತಾರೆ. 'ಗಂಡಸರು ಹೆಂಗಸರಿಗಿಂತ ಬಲಶಾಲಿಗಳು ಎಂಬ ಸಾಂಪ್ರದಾಯಿಕ ಭಾವನೆಯೇ ಇದಕ್ಕೆ ಕಾರಣ' ಎನ್ನುತ್ತಾರೆ ಮನೋವಿಜ್ಞಾನಿ ಮೆಲ್ ಕ್ರಾಂತ್‌ಸ್ಲರ್. 'ತಮ್ಮ ಹೆಂಡತಿಯರು ತಮ್ಮ ಬಗ್ಗೆ ಹೆಚ್ಚು ಯೋಚಿಸಬಾರದೆಂಬುದೇ ಅನೇಕ ಗಂಡಸರ ಇಚ್ಛೆಯಾಗಿರುತ್ತದೆ.'

'ವಯಸ್ಸಾಗುತ್ತಿರುವುದು ಮತ್ತು ಬದುಕಿನಲ್ಲಿ ತಾವು ನಿರೀಕ್ಷಿಸಿದಷ್ಟನ್ನು ಸಾಧಿಸಲು ಸಾಧ್ಯವಾಗದೆ ಇರುವುದು–ಇವು ಕೂಡ ಗಂಡಸರು ಇತರರ ಜೊತೆ ನಿಸ್ಸಂಕೋಚವಾಗಿ ಮಾತನಾಡದಿರುವಂತೆ ಮಾಡುತ್ತವೆ'ಎನ್ನುತ್ತಾರೆ ಕ್ರಾಂತ್‌ಸ್ಲರ್. ಸಂಸ್ಥೆಯೊಂದರ ಉಪಾಧ್ಯಕ್ಷನಿಗೆ ತನ್ನ ೩೯ನೆ ವಯಸ್ಸಿನಲ್ಲಿ ತಾನು ಮಹಾ ಸೋಲನ್ನು ಅನುಭವಿಸಿದಂತೆ ಅನಿಸಿತು. 'ತನ್ನ ೪೦ ನೆ ವಯಸ್ಸಿನ ವೇಳೆಗೆ ತಾನು ಅದೇ ಸಂಸ್ಥೆಯ ಅಧ್ಯಕ್ಷನಾಗುತ್ತೇನೆ'ಎಂದು ಅವನು ತಿಳಿದುಕೊಂಡಿದ್ದ. ಆದರೆ ಅದು ಸಾಧ್ಯವಾಗಿರಲಿಲ್ಲ ; ಈ ಸೋಲಿನ ಭಾವನೆಯಿಂದಾಗಿ ಅವನು ಕುಡಿಯುವುದನ್ನು ಪ್ರಾರಂಭಿಸಿದ. ಇತರ ಅನೇಕ ದುಶ್ಚಟಗಳನ್ನು ಕಲಿತ. ದಂಪತಿಗಳಲ್ಲಿ ಲೈಂಗಿಕ ಸಾಮರಸ್ಯ ಉಳಿಯಲಿಲ್ಲ. ಪತಿ ತನ್ನನ್ನು ಪ್ರೀತಿಸುವುದಿಲ್ಲವೆಂದು ತಿಳಿದ ಪತ್ನಿ ವೈವಾಹಿಕ ಸಮಾಲೋಚಕರಲ್ಲಿಗೆ ಹೋಗೋಣವೆಂದು ಅವನನ್ನು ಒತ್ತಾಯಿಸತೊಡಗಿದಳು. ಆಗ ಗಂಡ ನಿಜ ತಿಳಿಸಿದ. 'ಸಂಸ್ಥೆಯ ಅಧ್ಯಕ್ಷರಾಗದಿದ್ದರೆ ಏನಂತೆ ? ನಮಗೇನು ಕಮ್ಮಿಯಾಗಿದೆ ? ಸುಮ್ಮನೆ ಯೋಚಿಸಿ ಯೋಚಿಸಿ ಆರೋಗ್ಯ ಕೆಡಿಸಿಕೊಳ್ಳಬೇಡ' ಎಂದು ಹೆಂಡತಿಯೇ ಅವನನ್ನು ಸಮಾಧಾನಪಡಿಸಿದಳು.

ಹೆಂಡತಿಯರು ತಿಳಿಸದೆ ಇರುವ ವಿಷಯಗಳು ಯಾವುವು ? : ವಿಮೆಗೆ ಸಂಬಂಧಿಸಿದ ದಾಖಲೆಗಳಾಗಿ ತಡಕಾಡುತ್ತಿದ್ದಾಗ, ಹೌಸ್ಟನಿನ ಡಾಕ್ಟರ್ ಒಬ್ಬರಿಗೆ ಹೆಂಡತಿಯ ಕಪಾಟಿನಲ್ಲಿ,ಅವಳ ಉಳಿತಾಯ ಖಾತೆಯಲ್ಲಿ ಭಾರಿ ಮೊತ್ತದ ಹಣವಿರುವುದು ತಿಳಿದು ಬಂತು. 'ನನಗೇಕೆ ನೀನಿದನ್ನು ತಿಳಿಸಿಲ್ಲ' ಎಂದವರು ಪ್ರಶ್ನಿಸಿದಾಗ, ಆಕೆ ತನ್ನ ಮೊದಲ ಪತಿ ತನಗೇನನ್ನೂ ಉಳಿಸದೆ, ತನ್ನನ್ನು ಬಿಟ್ಟುಹೋಗಿರುವಸಂಗತಿಯನ್ನು ಕಣ್ಣೀರಿಡುತ್ತ ತಿಳಿಸಿದಳು ; ಮುಂದೆಂದೂ ತನ್ನದು ಬರಿಗೈ ಆಗದಿರುವಂತೆ ನೋಡಿ

ಕೊಳ್ಳುವ ಅಪೇಕ್ಷೆಯನ್ನು ವ್ಯಕ್ತಪಡಿಸಿದಳು. 'ಹೀಗೆಂದ ಮಾತ್ರಕ್ಕೆ ನಿಮ್ಮ ಮೇಲೆ ನನಗೆ ಭರವಸೆಯಿಲ್ಲ ಎಂದು ತಿಳಿಯಬೇಡಿ' ಎಂದೂ ಬಿಕ್ಕಳಿಸುತ್ತ ಪ್ರಾರ್ಥಿಸಿಕೊಂಡಳು.

ಇತರ ಎಲ್ಲ ವಿಷಯಗಳಿಗಿಂತ ಹೆಚ್ಚಾಗಿ ಹಣಕಾಸಿಗೆ ಸಂಬಂಧಿಸಿದ ವಿಷಯಗಳು ಸ್ತ್ರೀಯರ ಪಾಲಿಗೆ ಇತರರಿಗೆ ತಿಳಿಸಬಾರದಂತಹ ನಿಷಿದ್ಧ ಸಂಗತಿಗಳಾಗಿರುತ್ತವೆ. 'ಅತ್ಯಂತ ಪ್ರಾಮಾಣಿಕವಾದ ಹಾಗೂ ಮುಕ್ತವಾದ ಸಂಬಂಧವುಳ್ಳ ದಾಂಪತ್ಯಗಳಲ್ಲಿಯೂ ಹೆಂಗಸರು ತಾವೆಷ್ಟು ಖರ್ಚು ಮಾಡುತ್ತೇವೆ ಅಥವಾ ಉಳಿತಾಯ ಮಾಡುತ್ತೇವೆ ಎಂಬ ವಿವರಗಳನ್ನು ತಮ್ಮ ಗಂಡಂದಿರಿಗೆ ತಿಳಿಸಬಯಸುವುದಿಲ್ಲ' ಎನ್ನುತ್ತಾರೆ ಶಾಪಿರೊ.

ತಾವೆಷ್ಟು ಸಂಪಾದಿಸುತ್ತೇವೆ ಎಂದೂ ಸ್ತ್ರೀಯರು ಗಂಡಂದಿರಿಗೆ ತಿಳಿಸಲು ಇಷ್ಟಪಡುವುದಿಲ್ಲ. ಗಂಡಂದಿರಿಗಿಂತ ಹೆಚ್ಚು ವೇತನ ಪಡೆಯುವ ಹೆಂಡತಿಯರ ವಿಚಾರದಲ್ಲಂತೂ ಮೇಲಿನ ಮಾತು ನೂರಕ್ಕೆ ನೂರರಷ್ಟು ನಿಜ.

ನೀವು ಏನನ್ನು ತಿಳಿಸಬಾರದು? ಕೆಲವು ರಹಸ್ಯಗಳನ್ನು ಬಹಿರಂಗಗೊಳಿಸುವುದರಿಂದ, ದಂಪತಿಗಳ ನಡುವಣ ಪ್ರೇಮಸಂಬಂಧಗಳಿಗೆ ಅಡ್ಡಿಯುಂಟಾಗುತ್ತದೆ ಎಂಬುದು ಸುಳ್ಳಲ್ಲ. ಅದೇ ರೀತಿ ವಿವಾಹಪೂರ್ವ ಸಂಬಂಧಗಳ ಬಗ್ಗೆ ತಮ್ಮ ಸಂಗಾತಿಗಳಿಗೆ ತಿಳಿಸುವುದರಿಂದಲೂ ಹಾನಿಯುಂಟು. ಅಂಥ ರಹಸ್ಯಗಳನ್ನು ಸಾಧ್ಯವಾದಷ್ಟು ಬಚ್ಚಿಡುವುದೇ ಒಳ್ಳೆಯದು ಎನ್ನುತ್ತಾರೆ ಹೆಲ್ಮರಿಂಗ್. ಇಂಥಸಂದರ್ಭಗಳಲ್ಲಿ ಸತ್ಯಹರಿಶ್ಚಂದ್ರನಾಗುವುದರಿಂದ ನೋವು ಹೆಚ್ಚುತ್ತದೆ, ಸಂಕಟ ಅಧಿಕವಾಗುತ್ತದೆ.'

ವಿವಾಹೇತರ ಸಂಬಂಧಗಳನ್ನು ಕುರಿತ ಸತ್ಯಗಳಂತೂ ಪರಸ್ಪರರಿಗೆ ತಿಳಿಯದಂತೆ ಎಚ್ಚರಿಕೆ ವಹಿಸುವುದು ಅತ್ಯಾವಶ್ಯಕ. ಇಂಥ ಅನೈತಿಕ ಸಂಬಂಧವನ್ನೇನಾದರೂ ನೀವು ಹೊಂದಿದ್ದರೆ, ನಿಮ್ಮ ಕುಟುಂಬದ ವೈವಾಹಿಕ ಸಮಾಲೋಚಕರ ಸಲಹೆ ಪಡೆಯುವವರೆಗೆ ಗುಟ್ಟನ್ನು ರಟ್ಟುಮಾಡದಿರಿ ಎನ್ನುತ್ತಾರೆ ಕ್ರಾಂತ್‌ಸ್ಲರ್. ಇಂಥ ಸಂದರ್ಭಗಳಲ್ಲಿ ನೀವು ವಿವೇಕದಿಂದ ವರ್ತಿಸಬೇಕು. ನಿಮಗೆ ನೀವೇ ಈ ಕೆಳಗಿನ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕು. ಈಗ ಈ ಸತ್ಯವನ್ನು ತಿಳಿಸುವುದರಿಂದ ನಾನೇನು ಸಾಧಿಸಿದಂತಾಗುತ್ತದೆ? ಸತ್ಯವನ್ನು ಹೇಳುವುದರಿಂದ ನಮ್ಮ ದಾಂಪತ್ಯಕ್ಕೆ ಆಗಬಹುದಾದುದೇನು? ಲಾಭವೆ ಅಥವಾ ನಷ್ಟವೆ? ನನ್ನ ಅಂತರಂಗ ನನ್ನವರಿಗೆ ನನ್ನವಳಿಗೆ ಅರ್ಥವಾಗಬಹುದೆ?–ಇತ್ಯಾದಿ.

ಜೀವನ ಸಂಗಾತಿಯ ಎದುರು ಸತ್ಯವನ್ನು ಬಹಿರಂಗಗೊಳಿಸಬೇಕು ಎಂಬುದೂ ಮಹತ್ವದ ವಿಚಾರವಾಗಿದೆ. 'ಹೆಚ್ಚಿನವರಿಗೆ ರಹಸ್ಯವನ್ನು ಇತರರಿಗೆ ತಿಳಿಸುವುದು ಹೇಗೆ ಎಂದೇ ತಿಳಿದಿರುವುದಿಲ್ಲ' ಎನ್ನುತ್ತಾರೆ ಕ್ರಾಂತ್‌ಸ್ಲರ್. 'ಎಷ್ಟೋ ಸಲ, ಅನೇಕ ವರ್ಷಗಳಿಂದ ಬಚ್ಚಿಟ್ಟುಕೊಂಡ ಸಂಗತಿ ಯಾವುದಾದರೊಂದುದಿನ ಇದ್ದಿಕ್ಕಿದ್ದಂತೆ ಬಯಲಾಗುವುದೂ ಉಂಟು.' ಒಬ್ಬಳು ಮಹಿಳೆಯಂತೂ ತಾನು ಗರ್ಭಿಣಿಯೆಂಬ ವಿಷಯವನ್ನು ಗಂಡನಿಗೆ ತಿಳಿಸಿದ್ದು, ಅವನು ಸಮುದ್ರವಿಹಾರದ ಟಿಕೆಟ್ಟನ್ನು ತಂದ ಮೇಲೆಯೇ.

ತಮ್ಮ ಗೌಪ್ಯಗಳನ್ನು ಪರಸ್ಪರ ಹಂಚಿಕೊಳ್ಳಲು ಅಗತ್ಯವಾಗಿರುವ ಆತ್ಮೀಯತೆ ಮತ್ತು ಪರಸ್ಪರ ವಿಶ್ವಾಸ ಸಂಬಂಧಗಳನ್ನು ಬೆಳೆಸಿಕೊಳ್ಳಲೂ ಜಾಣ್ಮೆ ಅಭ್ಯಾಸಗಳು ಅಗತ್ಯ. ಈ ಕುರಿತಂತೆ ಇಲ್ಲಿ ಕೆಲವು ಸಲಹೆಗಳನ್ನು ಕೊಡಲಾಗಿದೆ :

ಮಾತಾಡಲು ಸಮಯಾವಕಾಶ ಮಾಡಿಕೊಳ್ಳಿ : ಉದ್ಯೋಗಸ್ಥ ದಂಪತಿಗಳಿಗಂತೂ ಒಟ್ಟಿಗೆ ಕುಳಿತುಕೊಂಡು ಸಂಭಾಷಣೆ ನಡೆಸಲು ಸಮಯವೇ ಸಿಗುವುದಿಲ್ಲ. "ಆದ್ದರಿಂದ ಸಹಜವಾಗಿಯೇ ಅವರ ನಡುವೆ ಭಾವಾತ್ಮಕ ಕಂದಕವುಂಟಾಗುತ್ತದೆ" ಗಂಡ-ಹೆಂಡಿರ ನಡುವೆ ಅಂತರವಿಲ್ಲದಂತೆ ನೋಡಿಕೊಳ್ಳುವುದು ತುಂಬ ಕಷ್ಟ. ಈ ಮಾನಸಿಕ ದೂರ ಇಲ್ಲದಂತೆ ಮಾಡಲು ಇರುವ ಒಂದೇ ಮಾರ್ಗವೆಂದರೆ, ಪ್ರತಿದಿನ ಕನಿಷ್ಠ ಹತ್ತಿಪ್ಪತ್ತು ನಿಮಿಷಗಳಷ್ಟು ಅವಧಿಯನ್ನು ಹಾಗೂ ವಾರಾಂತ್ಯದಲ್ಲಿ ಅರ್ಧದಿನವನ್ನು ದಂಪತಿಗಳು ಸಂಭಾಷಣೆಗಾಗಿಯೇ ಮೀಸಲಾಗಿರಿಸುವುದು.

ರಹಸ್ಯಗಳನ್ನು ಹಂಚಿಕೊಳ್ಳಿ : ನಿಮ್ಮ ಸಂಗಾತಿಯ ಅಂತರಂಗದ ಭಾವನೆಗಳನ್ನು ಅರಿಯುವಾಗಲೇ ನಿಮ್ಮ ಭಾವನೆಗಳನ್ನೂ ತಿಳಿಸಿ. ಗಂಡ ಹೆಂಡಿರು ಪರಸ್ಪರ ಬಚ್ಚಿಡಬೇಕಾದ ವಿಷಯ ಯಾವುದೂ ಇರುವುದಿಲ್ಲ ಎಂಬುದು ನಿಮ್ಮ ನೆನಪಿನಲ್ಲಿರಲಿ. ಕಛೇರಿಯಲ್ಲಿ ಕೆಲಸ ಮಾಡುತ್ತಿರುವಾಗ ನಡುನಡುವೆ ಚಾಕಲೇಟ್ ತಿನ್ನುವಂತಹ ಯಃಕಶ್ಚಿತ್ ವಿಷಯವೇ ಇರಲಿ, ತಿಳಿಸಲು ಹಿಂಜರಿಯಬೇಡಿ ಹೀಗೆ ಮುಚ್ಚಿಡುವ ಅಭ್ಯಾಸ ಕಮ್ಮಿಯಾಗುತ್ತ ಬಂದಂತೆ, ದಂಪತಿಗಳಲ್ಲಿ ಸ್ನೇಹವಿಶ್ವಾಸಗಳು ಹೆಚ್ಚುತ್ತವೆ.

'ಮನಸ್ಸನ್ನು ಓದಲು' ಪ್ರಯತ್ನಿಸಬೇಡಿ : 'ಪರಸ್ಪರರ ಮನೋಭಾವನೆಗಳನ್ನು ಸಂಪೂರ್ಣ ತಿಳಿದುಕೊಂಡಿದ್ದೇವೆ ಎಂದು ಕೆಲವು ದಂಪತಿಗಳು ಭಾವಿಸಿರುವುದರಿಂದಲೇ ಅವರು ಹೆಚ್ಚು ಕೇಳಲು ಅಥವಾ ಹೇಳಲು ಬಯಸುವುದಿಲ್ಲ.' ಎನ್ನುತ್ತಾರೆ ಬಾರ್ಬರ್. ಒಬ್ಬ ಅಧಿಕಾರಿ ಸೇವೆಯಿಂದ ನಿವೃತ್ತನಾದ ಅನಂತರ ವಿಹಾರಧಾಮವೊಂದರಲ್ಲಿ ಒಂದು ತಿಂಗಳನ್ನು ಕಳೆಯಲು ಅಗತ್ಯವಾಗಿರುವ ಹೊಟೆಲ್ ಟಿಕೆಟ್ಟನ್ನು ತಂದ. ತನ್ನ ಮಡದಿಯದೂ ಅದೇ ಬಯಕೆ ಎಂದು ಅವನು ಭಾವಿಸಿದ್ದ. ಆದರೆ ತನಗೆ ಸ್ನೇಹಿತರನ್ನು ಮಕ್ಕಳು ಹಾಗೂ ಮೊಮ್ಮಕ್ಕಳನ್ನು ಬಿಟ್ಟು ದೂರವಿರಲು ಸಾಧ್ಯವಿಲ್ಲವೆಂದು ಹೆಂಡತಿ ಹೇಳಿದಾಗ, ಅಧಿಕಾರಿಗೆ ಅತ್ಯಾಶ್ಚರ್ಯವಾಯಿತು. 'ಹಲವು ವರ್ಷಗಳಿಂದಲೇ ನಾವು ಈ ಯೋಜನೆಯನ್ನು ರೂಪಿಸಿದ್ದೆನಲ್ಲ' ಎಂದು ಅವನು ಹೇಳಿದಾಗ 'ಆದರೆ ನೀನೆಂದೂ ಈ ವಿಷಯವನ್ನು ನನಗೆ ತಿಳಿಸಿಲ್ಲವಲ್ಲ' ಎಂದಳು ಅವನ ಹೆಂಡತಿ.

ಅಧಿಕಪ್ರಸಂಗ ಮಾಡಬೇಡಿ : ನಿಮ್ಮ ಜೀವನಸಂಗಾತಿ ನಿಮ್ಮಿಂದ ಏನೋ ಬಚ್ಚಿಡುತ್ತಿದ್ದಾಳೆ/ನೆ ಎನಿಸಿದಾಗಲೂ ಅದನ್ನು ತಿಳಿಯುವ ಅಧಿಕಪ್ರಸಂಗಮಾಡಬೇಡಿ, ಅವಳ/ನ ವೈಯಕ್ತಿಕ ಕಾಗದ ಪತ್ರಗಳನ್ನು ನೋಡುವ ಕುತೂಹಲ ತೋರಿಸಬೇಡಿ. 'ನಿಮ್ಮ ಜೀವನಸಂಗಾತಿಗೆ ಬಂದ ವೈಯಕ್ತಿಕ ಪತ್ರಗಳನ್ನು ಒಡೆದು ಓದುವುದೂ ಅವಳ/ನ

ವೈಯಕ್ತಿಕ ದಿನಚರಿಯ ಮೇಲೆ ಕಣ್ಣಾಡಿಸುವುದೂ ಉಚಿತವಲ್ಲ' ಎನ್ನುತ್ತಾರೆ ಕ್ರಾಂತ್ಸ್ಲರ್. 'ಸತ್ಯವನ್ನು ತಿಳಿಸಲು ಸಕಾಲ ಒದಗಿಬಂದಿದೆ ಎಂದು ನಿಮ್ಮ ಜೀವನ ಸಂಗಾತಿಗೆ ಅನಿಸಿ ಅವಳೆ/ನೇ ಸತ್ಯವನ್ನು ಹೇಳುವವರೆಗೂ ರಹಸ್ಯವನ್ನು ಅರಿಯುವ ಪ್ರಯತ್ನ ಮಾಡಬೇಡಿ'.

ಒಬ್ಬನಿಗೆ, ತನ್ನ ಹೆಂಡತಿಗೆ ದೂರದ ಊರಿನಿಂದ ಆಗಾಗ ಪತ್ರ ಬರುತ್ತಿರುವುದನ್ನು ಗಮನಿಸಿ ಅನುಮಾನವುಂಟಾಯಿತು. 'ಪತ್ರ ಯಾರದು' ಎಂದು ಪ್ರಶ್ನಿಸಿದಾಗ ಹೆಂಡತಿ 'ನನ್ನ ಹಳೆಯ ಗೆಳೆಯನದು' ಎಂದು ಮೊಟಕ್ಕಾಗಿ ಉತ್ತರಿಸಿದಳು. ಕೊನೆಗೊಂದು ದಿನ, ಹೆಂಡತಿ ತನ್ನ ಮೇಜಿನ ಮೇಲೆ ಮರೆತು ಬಿಟ್ಟುಹೋಗಿದ್ದ ಪತ್ರ ಗಂಡನಿಗೆ ಸಿಕ್ಕಿತು. ಆ ಪತ್ರ, ಹೆಂಡತಿಯ ಬಾಲ್ಯದ ಸಹಪಾಠಿಯದಾಗಿತ್ತು. ಆದರೆ ಈಗ ಅವನು ರೋಗಿಷ್ಟನಾಗಿ ಆಸ್ಪತ್ರೆ ಸೇರಿದ್ದು ತನ್ನ ಅಂತ್ಯವನ್ನು ನಿರೀಕ್ಷಿಸುತ್ತಿದ್ದ. ವಿಷಯ ತಿಳಿದಾಗ ಗಂಡನಿಗೆ ತನ್ನ ಅಧಿಕಪ್ರಸಂಗತನದ ಬಗ್ಗೆ ಲಜ್ಜೆಯಾಯಿತು.

ವಿಶ್ವಾಸವನ್ನು ದುರುಪಯೋಗಪಡಿಸಿಕೊಳ್ಳಲು ಎಂದೂ ಪ್ರಯತ್ನಿಸಬೇಡಿ: ನಿಮ್ಮ ಜೀವನ ಸಂಗಾತಿಗೆ ನಿಮ್ಮ ಮೇಲೆ ಭರವಸೆಯಿದೆ ಎಂದ ಮಾತ್ರಕ್ಕೆ ಅವಳ/ನ ಎದುರು ಸುಳ್ಳಾಡ ಹೋಗಬೇಡಿ. ಒಮ್ಮೆ ಕಳೆದುಕೊಂಡ ವಿಶ್ವಾಸವನ್ನು ಪುನಃ ಸಂಪಾದಿಸುವುದು ಕಷ್ಟ ಎಂಬುದು ಯಾವಾಗಲೂ ನಿಮ್ಮ ಜ್ಞಾಪಕದಲ್ಲಿ ಇರಲಿ.

ಜಾಣ್ಮೆಯಿಂದ ವರ್ತಿಸಿ: ಪರಸ್ಪರ ಭಿನ್ನಾಭಿಪ್ರಾಯಗಳು ಉಂಟಾದಾಗ, ಟೀಕೆ ಮಾಡುವ ಅಥವಾ ಜಗಳವಾಡುವ ಸಂದರ್ಭ ಬಂದಾಗ ಕೂಡ, ನಿಮ್ಮ ಸಂಗಾತಿಯ ಬಗ್ಗೆ ಏನೂ ಹೇಳದೆ, ನಿಮ್ಮ ಬಗ್ಗೆಯೇ ಹೇಳಿಕೊಳ್ಳಿ. ಉದಾಹರಣೆಗೆ, 'ನನ್ನ ಪತ್ರವನ್ನು ನೀನೇಕೆ ಒಡೆದು ಓದಿದೆ?' ಅಥವಾ 'ನಿನ್ನ ಎರಡು ಚೆಕ್‌ಗಳು ಬ್ಯಾಂಕ್‌ನಿಂದ ಮರಳಿ ಬಂದಿವೆ ಎಂದು ನೀನೇಕೆ ತಿಳಿಸಲಿಲ್ಲ?' ಎಂದು ಹೇಳುವ ಬದಲು 'ನನ್ನ ವಿಳಾಸಕ್ಕೆ ಬರುವ ಎಲ್ಲ ಪತ್ರಗಳೂ ನನ್ನ ಖಾಸಗಿಯವು ಎಂದು ನನ್ನ ಭಾವನೆ' ಅಥವಾ 'ಬ್ಯಾಂಕ್ ಖಾತೆಯಲ್ಲಿ ಏನೋ ತಪ್ಪುಗಳಾಗಿರಬಹುದು' ಎಂದು ಸರಳವಾಗಿ ಹೇಳುವ ಅಭ್ಯಾಸಮಾಡಿ.

ಕಿವಿಗೊಟ್ಟು ಕೇಳಿ: ಯಾವಾಗ ಬಾಯಿ ಮುಚ್ಚಿಕೊಂಡಿರಬೇಕು ಮತ್ತು ಯಾವಾಗ ಕಿವಿಗಳನ್ನು ತೆರೆದುಕೊಳ್ಳಬೇಕು ಎಂಬುದನ್ನು ಮೊದಲು ಕಲಿತುಕೊಳ್ಳಿ. ಮಾತನಾಡುತ್ತಿರುವ ನಿಮ್ಮ ಸಂಗಾತಿಯ ಮುಖವನ್ನು ನೋಡುತ್ತಿರುವುದು, ತಲೆ ಅಲ್ಲಾಡಿಸುವುದು—ಇಂತಹ ಸರಳ ವಿಷಯಗಳನ್ನು ತಿಳಿದಿದ್ದರಷ್ಟೇ ಸಾಕು–ಅವಳು/ರು ನಿಮ್ಮನ್ನು ಇಷ್ಟಪಡುತ್ತಾಳೆ/ರೆ.

'ನೀನು/ವು ಮುಖ್ಯ, ನೀನು/ವು ಹೇಳುತ್ತಿರುವುದೂ ಮುಖ್ಯ. ನೀನು/ವು ನನ್ನೊಡನೆ ಹಂಚಿಕೊಳ್ಳಲು ಸಿದ್ಧವಾಗಿರುವ ಯಾವುದೇ ರಹಸ್ಯವನ್ನು ಅಥವಾ ಪ್ರತಿಯೊಂದೂ ರಹಸ್ಯವನ್ನು ತಿಳಿಯಲು ನಾನು ಸಿದ್ಧನಿದ್ದೇನೆ' ಎಂಬ ಖಚಿತ ಅಭಿಪ್ರಾಯ ಯಾವಾಗಲೂ ನಿಮ್ಮದಾಗಿರಲಿ.

ನಮ್ಮಲ್ಲಿರುವ ರಹಸ್ಯಮಯ ಶಕ್ತಿ

ಕೆ. ಶಾಂತಾಮಣಿ

ಯಾರಾದರೂ ನಿಮ್ಮನ್ನು "ನಿಮ್ಮ ಸ್ನೇಹಿತರ ಮತ್ತು ಬಂಧುಗಳ ಫೋನ್ ನಂಬರ್ ಹೇಳಿ" ಎಂದು ಕೇಳಿದರೆ ನಿಮಗೆ ಅದನ್ನು ಹೇಳಲು ಸಾಧ್ಯವೆ? ನೀವು ಮಾಡಬೇಕಾದ ಕೆಲಸಗಳ ಪಟ್ಟಿಯನ್ನು ಮಾಡಿ ಇಟ್ಟುಕೊಂಡು ಕೆಲಸ ಮಾಡುವಿರಾ?

ಒಂದು ವೇಳೆ ನೀವು ನಿಮ್ಮ ಮೆದುಳಿನ ಕಾರ್ಯಕ್ಕೆ ಭಂಗ ತರದೇ ಹೋದರೆ ಮತ್ತು ಅದಕ್ಕೆ ಆವಶ್ಯಕ ಅನುಕೂಲಗಳನ್ನು ಒದಗಿಸಿಕೊಟ್ಟರೆ ಅದು ನಿಮ್ಮ ನೆನಪಿನ ಶಕ್ತಿಯನ್ನು ಚುರುಕುಗೊಳಿಸುತ್ತದೆ. ಆದರೆ ಒಂದೇ ಒಂದು ತೊಂದರೆ ಏನೆಂದರೆ ಸಾವಿರದಲ್ಲಿ ಒಬ್ಬ ವ್ಯಕ್ತಿ ಮೆದುಳಿಗೆ ಇಷ್ಟಪಟ್ಟ ಕೆಲಸ ಮಾಡಲು ಅನುಕೂಲಗಳನ್ನು ಒದಗಿಸಿಕೊಡುತ್ತಾನೆ. ನಮ್ಮ ಬುರುಡೆಯ ಒಳಗೆ ಆಶ್ಚರ್ಯಕರವಾದ ಒಂದು ಯಂತ್ರವಿದ್ದು ಅದರ ಸ್ವಲ್ಪ ಅಂಶವನ್ನು ಮಾತ್ರ ಉಪಯೋಗಿಸುತ್ತಿದ್ದೇವೆ ಎಂಬ ವಿಷಯ ಕೆಲವೇ ಜನರಿಗೆ ಮಾತ್ರ ತಿಳಿದಿದೆ.

ಆಧುನಿಕ ಎಲೆಕ್ಟ್ರಾನಿಕ್ ಉಪಕರಣಗಳಲ್ಲಿ ಕಂಡು ಬರುವಂತಹ ಸಂಕೀರ್ಣತೆಗಿಂತಲೂ ಹೆಚ್ಚು ಸಂಕೀರ್ಣತೆ ಈ ಪುಟ್ಟ ಮೆದುಳಿನಲ್ಲಿ ಕಂಡು ಬರುತ್ತದೆ.

ಪ್ರಪಂಚದ ಉತ್ತಮ ಕಂಪ್ಯೂಟರ್ ಒಳಗೆ ಸಂಗ್ರಹವಾಗಿರುವ ಜ್ಞಾನ ಭಂಡಾರಕ್ಕಿಂತಲೂ ಎರಡೂವರೆಯಷ್ಟು ಹೆಚ್ಚು ಜ್ಞಾನ ಭಂಡಾರವನ್ನು ಸಂಗ್ರಹಿಸಿಟ್ಟುಕೊಳ್ಳುವ ಶಕ್ತಿ ಈ ಮೆದುಳಿಗಿದೆ. ಈ ಜ್ಞಾನ ಭಂಡಾರ ಪ್ರಪಂಚದ ದೊಡ್ಡ ಪುಸ್ತಕ ಭಂಡಾರವೆನಿಸಿದ ಬ್ರಿಟಿಷ್ ಮ್ಯೂಜಿಯಂ ಪುಸ್ತಕ ಭಂಡಾರದಲ್ಲಿರುವ ಐವತ್ತು ಲಕ್ಷ ಪುಸ್ತಕಗಳಿಗೆ ವಿಷಯ ಸಾಮಗ್ರಿಯನ್ನು ಒದಗಿಸುತ್ತದೆ. ತಜ್ಞರು ಹೇಳುವಂತೆ ನಿಮಗೆ ತಿಳಿದಿರುವ ಎಲ್ಲ ವಿಷಯಗಳನ್ನು ಬರೆದಿಡಲು ಕುಳಿತರೆ ಎರಡು ಸಾವಿರ ವರ್ಷಗಳವರೆಗೆ ಇದೇ ಕೆಲಸ ಮಾಡುತ್ತಿರುವಿರಿ. ಕಲ್ಪನೆಯ ಕಾಲು ಅಸ್ಥಿರವಾಗತೊಡಗುತ್ತದೆ.

ಅಮೆರಿಕದ ಮಾಂಟ್ರಿಯಲ್‌ನ ಮ್ಯಾಗಿಲ್ ವಿಶ್ವವಿದ್ಯಾಲಯದಲ್ಲಿ ಡಾ॥ ವೈಯಿಲ್ಡರ್ ಪೆನ್‌ಫೀಲ್ಡರ ನಿರ್ದೇಶನದಲ್ಲಿ ಮೆದುಳಿನ ಮೇಲೆ ನಡೆಸಿದ ಪ್ರಯೋಗಗಳ ಪರಿಣಾಮ ಸ್ವರೂಪವಾಗಿ ಈ ಆಶ್ಚರ್ಯಕರ ವಿಷಯಗಳು ಹೊರ ಬಂದುವು.

೧೯೮೧ರ 'ನವನೀತ' ಹಿಂದಿ ಮಾಸಪತ್ರಿಕೆಯಲ್ಲಿ ಪ್ರಕಟವಾದ "ಮೈಕೇಲ್ ಫಿಲಿಪ್ಸರವರ ರಹಸ್ಯಮಯ ಶಕ್ತಿ ಜೊ ಹಮಾಕಿ ಅಂದರ್ ಮೌಜೂದ್ ಹೈ" ಎಂಬ ವೈಜ್ಞಾನಿಕ ಲೇಖನದ ಅನುವಾದ.

ಡಾ|| ಪೆನ್‌ಫೀಲ್ಡರು ಹೀಗೆ ಹೇಳುತ್ತಾರೆ–"ಮೆದುಳಿನಲ್ಲಿ ಸಂಗ್ರಹವಾದ ಎಲ್ಲ ಸೂಚನೆಗಳ ವಿಶ್ರಣ ಮತ್ತು ನಿಯಂತ್ರಣ ಒಂದು "ಸ್ವಿಚ್ ಬೋರ್ಡ್" ಮೂಲಕ ನಡೆಯುತ್ತದೆ. ಅದರ ಸೂಕ್ಷ್ಮತೆ ಮತ್ತು ಸಂಕೀರ್ಣತೆಯನ್ನು ಕಲ್ಪನೆಯೂ ಕಲ್ಪಿಸಿಕೊಳ್ಳಲಾರದು.

ಅದ್ಭುತ ಜ್ಞಾನ ಭಂಡಾರದ ಪೂರ್ಣ ಪ್ರಯೋಜನ ನಾವು ಪಡೆಯುತ್ತಿಲ್ಲವೆಂಬುದು ದುಃಖಕರ ಸಂಗತಿಯೇ ಸರಿ. ನಾವು ಮಾನಸಿಕ ಶಕ್ತಿಯ ಪ್ರಯೋಜನವನ್ನು ಆಪತ್ಕಾಲದಲ್ಲಿ ಬಿಟ್ಟು ಇನ್ನು ಯಾವಾಗಲೂ ಪಡೆಯುವುದಿಲ್ಲ. ವಿಚಿತ್ರ ಸಂಗತಿ ಎಂದರೆ ನಮಗೆ ಇಷ್ಟವಾದ ವಿಷಯಗಳನ್ನು ನಾವು ಸುಲಭವಾಗಿ ನೆನಪಿನಲ್ಲಿಡುತ್ತೇವೆ. ಉದಾಹರಣೆಗೆ ಇತಿಹಾಸದ ಇಸವಿಗಳನ್ನು ನೆನಪಿನಲ್ಲಿಡಲಾಗದ ವಿದ್ಯಾರ್ಥಿ ಕ್ರಿಕೆಟ್ ಸ್ಕೋರುಗಳನ್ನು ಸುಲಭವಾಗಿ ನೆನಪಿನಲ್ಲಿಡುತ್ತಾನೆ.

ಹೀಗೆ ಹೇಳಿದ ಮಾತ್ರಕ್ಕೆ ವಿಜ್ಞಾನಿಗಳು ವರ್ಷಗಟ್ಟಲೆ ಪ್ರಯೋಗ ಮಾಡಿದ ನಂತರ ಮೆದುಳಿನ ರಹಸ್ಯಪೂರ್ಣ ಕೆಲಸಗಳನ್ನು ಅದರ ಸಂಪೂರ್ಣ ಶಕ್ತಿಯನ್ನು ತಿಳಿದಿದ್ದಾರೆ ಎಂಬ ಅರ್ಥವಲ್ಲ. ಖಂಡಿತ ಅದಲ್ಲ. ಆದರೆ ಇಷ್ಟು ಮಾತ್ರ ನಿಜ. ಒಬ್ಬ ಸಾಧಾರಣ ವ್ಯಕ್ತಿ ತನ್ನ ಮೆದುಳಿನಲ್ಲಿ ಅಡಗಿರುವ ಶಕ್ತಿಯ ಉಪಯೋಗದ ರೀತಿಯನ್ನು ಕಲಿತರೆ, ಮಾನಸಿಕ ಶಕ್ತಿಯನ್ನು ಉಪಯೋಗಿಸಿ ಮಾಡುವಂತಹ ಕೆಲಸಗಳನ್ನು ಕಡಿಮೆ ಪ್ರಯತ್ನದಿಂದ ಮಾಡಬಲ್ಲನು.

ನಿಮ್ಮ ಮೆದುಳು ಪ್ರಪಂಚದ ಎಲ್ಲಕ್ಕಿಂತ ಹೆಚ್ಚಿನ ಆಶ್ಚರ್ಯಕರ ಹಾಗೂ ವಿಚಿತ್ರ ಯಂತ್ರ ಎಂಬುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ತಜ್ಞರ ಪ್ರಕಾರ ಮಿದುಳಿಗಿಂತಲೂ ಶ್ರೇಷ್ಠವಾದ ಕಂಪ್ಯೂಟರ್ ತಯಾರಿಸಲು ಮನುಷ್ಯನಿಗೆ ಸಾವಿರಾರು ವರ್ಷಗಳು ಬೇಕು.

ಪ್ರತಿಭಾವಂತ ವ್ಯಕ್ತಿ ಯಾರು?

ಮೆದುಳಿನ ರಹಸ್ಯಗಳನ್ನು ಪತ್ತೆ ಹಚ್ಚುವುದರಲ್ಲಿ ಮಿಚಿಗನ್ ವಿಶ್ವವಿದ್ಯಾಲಯದ ಪ್ರೊ|| ಜೇಮ್ಸ್ ಮೆಕನಾಲ್ ಮತ್ತು ಅವರ ಸಹೋದ್ಯೋಗಿಗಳು ಬಹಳಷ್ಟು ಶ್ರಮವಹಿಸಿದ್ದಾರೆ. ಪ್ರತಿಭಾವಂತರೆಂದು ನಾವು ತಿಳಿದಿರುವ ವ್ಯಕ್ತಿಗಳು ವಾಸ್ತವದಲ್ಲಿ ಅವರು ತಮ್ಮ ಮಾನಸಿಕ ಸಾಮರ್ಥ್ಯಗಳನ್ನು ಅರಿತಿರುವ ಸಾಮಾನ್ಯ ವ್ಯಕ್ತಿಗಳಾಗಿರುತ್ತಾರೆ. ಮನೋವ್ಯಾಪಾರಗಳು ಯಾವ ರೀತಿಯಲ್ಲಿ ಆಗುತ್ತವೆ ಎಂಬುವುದನ್ನು ತಿಳಿದಿರುತ್ತಾರೆ. ಮಾನಸಿಕ ವ್ಯಾಪಾರಗಳ ರೀತಿಯನ್ನು ತಿಳಿದುಕೊಂಡರೆ ಮಾನಸಿಕ ಸಾಮರ್ಥ್ಯಗಳು ಹೆಚ್ಚು ಕಡಿಮೆ ತಿಳಿದ ಹಾಗೇ ಆಗುತ್ತದೆ. ನ್ಯೂಯಾರ್ಕಿನ ಗ್ಯಾರೇಜೊಂದರ ಮಾಲೀಕ ಅವನಲ್ಲಿಗೆ ಬರುವ ಎಲ್ಲ ಕಾರುಗಳ ನಂಬರ್‌ಗಳನ್ನು ನೆನಪಿಟ್ಟುಕೊಂಡರೆ ಅವನನ್ನು ಪ್ರತಿಭಾವಂತ ಎಂದು ತಿಳಿಯುವಿರಾ? ಅಮೆರಿಕದ ಪ್ರೆಸಿಡೆಂಟ್ ಜಾನ್ಸನ್ನನ ಸಹೋದ್ಯೋಗಿಯೊಬ್ಬರಿಗೆ ಜಾನ್ಸನ್ನನು ಚುನಾವಣೆಯಲ್ಲಿ ಜಯ ಗಳಿಸಲು ಸಹಾಯ ಮಾಡಿದ ೨೦,೦೦೦ ಜನರ ಹೆಸರೂ ಬಾಯಿಪಾಠವಾಗಿತ್ತಂತೆ. ಆತ ಒಬ್ಬ ಸಾಧಾರಣ ಮನುಷ್ಯನಾಗಿದ್ದ. ಅಮೆರಿಕದ ರೈತನೊಬ್ಬನ ಎಂಟು ವರ್ಷದ ಮಗ ಕಾಲಿಬರ್ನ್ ೨೧ ಸಂಖ್ಯೆಯುಳ್ಳ ಲೆಕ್ಕದ

ಸಮಸ್ಯೆಯನ್ನು ಮನಸ್ಸಿನಲ್ಲೇ ಮಾಡಿಕೊಂಡು ಹತ್ತು ಸೆಕೆಂಡಿನಲ್ಲಿ ಬಿಡಿಸಿ ಹೇಳಿಬಿಡುತ್ತಿದ್ದ.

ಮೆದುಳಿನ ಆಕಾರ ಚಕ್ಕೋತದ ತೊಳೆಗಳಂತೆ ಇರುತ್ತದೆ. ಅವುಗಳಲ್ಲಿ ಒಂದು ಕುಸುಮದ ತುದಿಯಷ್ಟು ನರಕೋಶಗಗಲ್ಲಿ ಟೆಲಿಫೋನ್ ಬೂತ್‌ನ ಆಕಾರದ ಕಂಪ್ಯೂಟರಲ್ಲಿ ಅಡಗಿಸಬಹುದಾದಷ್ಟು ವಿಷಯಗಳನ್ನು ನೆನಪಿನಲ್ಲಿ ಇಟುಕೊಳ್ಳಬಹುದಾದಷ್ಟು ಸಾಧ್ಯವಿದೆ.

ಸ್ವೀಡನ್ನಿನ ಕೆಲವು ವಿಜ್ಞಾನಿಗಳು ಮೆದುಳಿನ ಮೇಲೆ ಪ್ರಯೋಗ ನಡೆಸಿದ ನಂತರ ಎಲ್ಲ ಜೀವಂತ ಕೋಶಗಳಲ್ಲಿರುವ ಆರ್. ಎನ್. ಎ. (ರೈಬೋ ನ್ಯೂಕ್ಲಿಕ್ ಆಸಿಡ್) ಎಂಬ ಪದಾರ್ಥ ಮೆದುಳಿನಲ್ಲಿರುವ ಕ್ಲಿಷ್ಟ ಯಂತ್ರ ವಿನ್ಯಾಸವನ್ನು ಸರಾಗಗೊಳಿಸುವುದರಲ್ಲಿ ಸಹಾಯಕವಾಗುತ್ತದೆ. ಆರ್.ಎನ್.ಎ.ಯನ್ನು ಪೂರ್ತಿಯಾಗಿ ವಿಶ್ಲೇಷಿಸಿದ ನಂತರ ಕೃತಕ ಆರ್.ಎನ್.ಎ. ತಯಾರು ಮಾಡಿ ಮನುಷ್ಯನ ಮೆದುಳಿನ ಅಪಾರ ಸಾಮರ್ಥ್ಯವನ್ನು ಉಪಯೋಗಿಸಿಕೊಳ್ಳುತ್ತೇವೆ ಎಂಬ ನಂಬಿಕೆಯನ್ನು ತಳೆದಿದ್ದಾರೆ.

ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದ ಡಾಕ್ಟರ್ ಜಾರ್ಜ್‌ಬ್ರೆಡ್‌ಫೋರ್ಡ್‌ ಮತ್ತು ಟೋರೆಂಟೋ ಸನ್ನಿಬ್ರೂಕ್ ಆಸ್ಪತ್ರೆಯ ಡಾಕ್ಟರ್ ಬೂತರಾಯ್ಡರು ಮಾನವೀಯ ಸಂಬಂಧಗಳ ಬಗ್ಗೆ ಅನೇಕ ಪ್ರಯೋಗಗಳನ್ನು ನಡೆಸಿದರು. ಈ ಪ್ರಯೋಗಗಳನ್ನು ನಮ್ಮಲ್ಲಿ ಹೆಚ್ಚು ಜನರು ನಾವು ತಿಳಿದಿರುವುದಕ್ಕಿಂತ ಹೆಚ್ಚು ಶಕ್ತಿಶಾಲಿಗಳಾಗಿದ್ದಾರೆ ಎಂಬುದು ಈ ಪ್ರಯೋಗಗಳಿಂದ ತಿಳಿದುಬರುತ್ತದೆ. ಅಪಾಯವನ್ನು ನಾವು ತಿಳಿದುಕೊಂಡಿರುವುದಕ್ಕಿಂತಲೂ ಹೆಚ್ಚು ಸಾಮರ್ಥ್ಯದಿಂದ ಎದುರಿಸಬಲ್ಲೆವು. ಮತ್ತು ತಿಳಿದಿರುವುದಕ್ಕಿಂತ ಹೆಚ್ಚು ದಿನ ಉಪವಾಸ ಇರಬಲ್ಲೆವು. ಭಯ, ಕೋಪ ಮತ್ತು ಅನುಕಂಪ ಈ ಮೂರೂ ಮನೋವೇಗಗಳ ಅಧಿಕತೆ ಮಾನವನನ್ನು ಅತಿಮಾನವನನ್ನಾಗಿ ಮಾರ್ಪಡಿಸುತ್ತದೆ. ಕೋಪಗೊಂಡ ವ್ಯಕ್ತಿ ಸಾಮಾನ್ಯ ಮನುಷ್ಯನಿಗಿಂತಲೂ ಹೆಚ್ಚು ಭಾರವನ್ನು ಎತ್ತಬಲ್ಲನು ಮತ್ತು ಎರಡರಷ್ಟು ಶಕ್ತಿಯಿಂದ ಪ್ರಹಾರ ಮಾಡಬಲ್ಲನು.

ಅಪಾಯ ಪರಿಸ್ಥಿತಿಯಲ್ಲಿ ನೂರಕ್ಕೆ ಅರವತ್ತೈದರಷ್ಟು ಜನ ಹೆಚ್ಚು ಸ್ಪಷ್ಟರೂಪದಲ್ಲಿ ಚಿಂತಿಸುತ್ತಾರೆ ಎಂದು ಅಮೆರಿಕದ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈಕಾಲಜಿಯಲ್ಲಿ ನಡೆಸಿದ ಪ್ರಯೋಗಗಳಿಂದ ತಿಳಿದುಬಂದಿದೆ. ನಾವು ಯಾರಾದರೂ ಒಬ್ಬ ಅಸಹಾಯಕ ವ್ಯಕ್ತಿಗೆ ಸಹಾಯ ಮಾಡಲು ಹೊರಟಾಗ ನಮ್ಮ ಶಕ್ತಿ ಮತ್ತು ಧೈರ್ಯ ದ್ವಿಗುಣವಾಗುತ್ತದೆ ಎಂಬುದೂ ಈ ಪ್ರಯೋಗಗಳಿಂದ ತಿಳಿದು ಬಂದಿದೆ.

ಭೂಮಿಯ ಮೇಲಿರುವ ಎಲ್ಲ ಪ್ರಾಣಿಗಳಲ್ಲಿ ಮನುಷ್ಯ ಎಲ್ಲರಿಗಿಂತ ಹೆಚ್ಚು ಆಕ್ರಮಣಕಾರಿ ಎಂಬುದಾಗಿ ಬ್ರುಸೇಲ್ಸ್‌ನಲ್ಲಿ ನಡೆದ ಜೀವಶಾಸ್ತ್ರಜ್ಞರ ಅಂತರರಾಷ್ಟ್ರೀಯ ಸಮ್ಮೇಳನದಿಂದ ತಿಳಿದು ಬಂದಿದೆ. ಕೋಪ ಬಂದಾಗ ಅವನು ತನ್ನ ಜಾತಿಯವರನ್ನೇ ಕೊಂದುಬಿಡುತ್ತಾನೆ. ತಡೆಯಿಲ್ಲದ ಕೋಪದಲ್ಲಿ ಆ ಶಕ್ತಿ ಇದೆ.

ಇದ್ದಕ್ಕಿದ್ದಂತೆ ಕೋಪಗೊಂಡ ವ್ಯಕ್ತಿಯ ಗ್ರಂಥಿಗಳು ಮತ್ತು ಸ್ನಾಯುಗಳಲ್ಲಿ

ಉಂಟಾಗುವ ರಾಸಾಯನಿಕ ಪರಿವರ್ತನೆಯ ಕಾರಣದಿಂದ ಅವನು ಮೊದಲಿಗಿಂತ ಹೆಚ್ಚು ಶಕ್ತಿವಂತನಾಗುತ್ತಾನೆ. ಆದರೆ ಎಲ್ಲಿಂದ ಬರುತ್ತದೆ ಎಂಬುದು ಇನ್ನೂ ಯಾರಿಗೂ ತಿಳಿದಿಲ್ಲ. ಜ್ಯೂರಿಕ್ ವಿಶ್ವವಿದ್ಯಾಲಯದ ಡಾ॥ ಫ್ರಿಜರೇಲರು ನಡೆಸಿದ ಪ್ರಯೋಗಗಳಿಂದ ಈ ಹೆಚ್ಚಿನ ಶಕ್ತಿ ಬರುವುದಂತೂ ನಿಜ, ಸುಳ್ಳಲ್ಲ ಎಂಬುದು ಸಾಬೀತಾಗಿದೆ.

ಭಯ ಮತ್ತು ಕೋಪಗಳ ಆವಶ್ಯಕತೆ

ಕೋಪ ಮತ್ತು ಅದರ ಪರಿಣಾಮಗಳ ಬಗ್ಗೆ ಇಬ್ರಾನಾನ್ ವಿಶ್ವವಿದ್ಯಾಲಯದ ಡಾ॥ ಸ್ಟೇನಿಸ್ಲಾವ್ ಎಡ್ರೆಸ್ಕಿಯವರು ವಿಶೇಷ ಅಧ್ಯಯನ ನಡೆಸಿದ್ದಾರೆ. ಅವರು 'ಪ್ರಪಂಚದಲ್ಲಿ ಮುಂದುವರಿಯಲು ಸಾಕಷ್ಟು ಪ್ರಮಾಣದಲ್ಲಿ ಕೋಪದ ಅಗತ್ಯವಿದೆ. ಕೋಪದ ಹೆಚ್ಚಿನ ಪ್ರಮಾಣವು ಶರೀರಕ್ಕೆ ಶಕ್ತಿ ನೀಡುವ ಬದಲು ಅದನ್ನು ಒಣಗಿಸಿಯೂ ಬಿಡುತ್ತದೆ. ವಾಸ್ತವದಲ್ಲಿ ಕೋಪವು ನೀಡುವ ಶಕ್ತಿಯನ್ನು ವಿಶೇಷ ಸಂದರ್ಭದಲ್ಲಿ ಮಾತ್ರ ಉಪಯೋಗಿಸುವುದು ಸೂಕ್ತವಾಗಿದೆ.

ಭಯದ ಸಮಯದಲ್ಲೂ ಕೂಡ ನಮ್ಮ ಶಾರೀರಿಕ ಮತ್ತು ಮಾನಸಿಕ ಪ್ರತಿಕ್ರಿಯೆಗಳು ತೀವ್ರವಾಗುತ್ತದೆ. ಕಳೆದ ಮಹಾಯುದ್ಧದಲ್ಲಿ ಆಕಾಶದಲ್ಲಿ ಶತ್ರುಗಳನ್ನು ಎದುರಿಸುತ್ತಾ, ವಿಮಾನ ಚಾಲಕರ ಪ್ರತಿಕ್ರಿಯೆ ಅದೆಷ್ಟು ತೀವ್ರವಾಗಿರುತ್ತದೆಂದರೆ ಅವರು ೯ ಸೆಕೆಂಡುಗಳು ಶತ್ರುಗಳ ವಿಮಾನ ಗುರ್ತಿಸಲು, ಏನು ಮಾಡಬೇಕೆಂದು ನಿಶ್ಚಯಿಸಲು ೫ ಸೆಕೆಂಡು, ಅದನ್ನು ಕಾರ್ಯರೂಪಕ್ಕೆ ತರಲು ೫ ಸೆಕೆಂಡುಗಳನ್ನು ತೆಗೆದುಕೊಳ್ಳುತ್ತಿದ್ದು ಭಯದಿಂದ ಪಡೆದ ಶಿಕ್ಷಣ ಅವರ ಯಾವ ಪ್ರಾಧ್ಯಾಪಕರಿಂದಲೂ ಸಿಕ್ಕಿರಲಿಲ್ಲ. ಜ್ಯೂರಿಕ್‌ನ ಒಂದು ಪ್ರಸಿದ್ಧ ಆಸ್ಪತ್ರೆಯ ಸಂಪರ್ಕ ಹೊಂದಿದ್ದ ಡಾ॥ ಹೆಲ್ಗನ್ನರು ಹೀಗೆ ಹೇಳುತ್ತಾರೆ, "ನೀವು ಎಷ್ಟೇ ಅಪಾಯದಲ್ಲಿದ್ದರೂ ನಿಮ್ಮ ಶರೀರದ ಮೇಲೆ ಪೂರ್ಣ ಭರವಸೆ ಇಡಿ. ಏಕೆಂದರೆ ಶರೀರ ರಚನೆಕ್ಕಿಂತ ಹೆಚ್ಚಾದ ಯಂತ್ರ ವಿನ್ಯಾಸ ನಿಮಗೆ ಬೇರೆಲ್ಲೂ ದೊರೆಯುವುದಿಲ್ಲ.

ಶರೀರದ ಸಾಮರ್ಥ್ಯದ ಬಗ್ಗೆ ಪ್ರಯೋಗ ನಡೆಸಿದನಂತರ, ನೀರು ಕುಡಿಯದೆ ನಾವು ೧೧ ದಿನಗಳವರೆಗೆ ಇರಬಹುದೆಂದು ತಿಳಿದು ಬಂದಿದೆ. ಆದರೆ ಆ ಸಮಯದಲ್ಲಿ ನಾವು ಹೆಚ್ಚು ಓಡಾಡಬಾರದು ಮತ್ತು ನಮ್ಮ ಸುತ್ತಮುತ್ತಲಿನ ಹವಾಮಾನ ತಂಪಾಗಿರುವುದು ಆವಶ್ಯಕವಾಗಿದೆ. ನಮ್ಮೊಳಗೆ ನೀರು ಇದ್ದಾಗ ನಾವು ವಿಪರೀತ ಉಷ್ಣತೆಯನ್ನು ಸಹಿಸಬಹುದು.

ಸ್ಟೀಫನಸನ್ ಎಂಬ ಪ್ರಖ್ಯಾತ ಚಿಕಿತ್ಸಕನು ಹೀಗೆ ಹೇಳುತ್ತಾನೆ "ಭಯ ಮತ್ತು ಕೋಪಗಳ ಉತ್ತೇಜನವಿಲ್ಲದೆಯೂ ಕೂಡ ಮನುಷ್ಯನಲ್ಲಿಅವನುತಿಳಿದಿರುವುದಕ್ಕಿಂತಲೂ ಮತ್ತು ಉಪಯೋಗಿಸುವುದಕ್ಕಿಂತಲೂ ಹೆಚ್ಚಿನ ಶಕ್ತಿ ಇರುತ್ತದೆ. ೫೦ ವರುಷದ ವ್ಯಕ್ತಿಯಲ್ಲಿ ೨೫ ವರ್ಷದ ಯುವಕನ ೮೨%ರಷ್ಟು ಶಕ್ತಿ ಇರುತ್ತದೆ. ಮಾನಸಿಕ ಶಕ್ತಿಯೂ ಅಷ್ಟೇ ಇರುತ್ತದೆ.

ಇಂದ್ರಿಯಾತೀತ ಅನುಭೂತಿ

ಇಂದ್ರಿಯಾತೀತ ಅನುಭವದ ಬಗ್ಗೆ ಸಂಶೋಧನೆಯು ಕಳೆದ ಹತ್ತು ವರ್ಷಗಳಿಂದ

ನಡೆಯುತ್ತಿದೆ. ಇದರ ಫಲ ಸ್ವರೂಪವಾಗಿ ಪರಾ-ವಿಜ್ಞಾನಕ್ಕೆ ವಿಜ್ಞಾನದ ಒಂದು ಶಾಖೆಯ ಸ್ಥಾನವನ್ನು ಕೊಡಲಾಗಿದೆ. ಹಾರ್ಬರ್ಡ್ ವಿಶ್ವವಿದ್ಯಾಲಯದ ಡಾ|| ಜೇರೋಮೋ ಬೂನರ್‌ರವರು ಅಂತರ್ಜ್ಞಾನವೆಂಬ ರಹಸ್ಯಮಯ ಶಕ್ತಿಯೊಂದು ಮಾನವ ಶರೀರದಲ್ಲಿದೆ—ಮೆದುಳಿನ ಮಧ್ಯದಲ್ಲಿರುವ ಸಣ್ಣ ಬೆರಳಿನ ಆಕಾರದ 'ಥಲಾಮರ್ಸ್' (ಚೇತಕ) ಕೋಶಾಣುಗಳ ಪಾತ್ರೆಯಲ್ಲಿದೆ' ಎಂದು ಹೇಳಿದ್ದಾರೆ. ಮೊದಲಿನ ಚಿಕಿತ್ಸಕರು 'ಥಲಾಮಸ್'ಗೆ ಅಷ್ಟೇನೂ ಮಹತ್ವ ಕೊಟ್ಟಿರಲಿಲ್ಲ. ಆದರೆ ಅದಕ್ಕೆ ಈಗ ಹೆಚ್ಚಿನ ಮಹತ್ವವನ್ನು ಕೊಟ್ಟಿದ್ದಾರೆ. ಅಂತರ್ಬೋಧ ಶಕ್ತಿಯನ್ನು ಈ ಥಲಾಮಸ್ ಒದಗಿಸುತ್ತದೆ ಎಂಬ ಅಭಿಪ್ರಾಯವನ್ನು ಹೊಂದಿದ್ದಾರೆ. ಇದೇ ಕಾರಣದಿಂದಲೆ ಮೆದುಳಿನ ಕೇಂದ್ರಿಯ ಭಾಗದಲ್ಲಿ ಆಘಾತ ಉಂಟಾದಾಗ ಒಮ್ಮೊಮ್ಮೆ ಮನುಷ್ಯ ಭವಿಷ್ಯವನ್ನು ಕಾಣುವ ಸಾಮರ್ಥ್ಯವನ್ನು ಹೊಂದಿರುತ್ತಾನೆ.

'ಚೇತಕ'ವನ್ನು ಸರಿಯಾದ ರೀತಿಯಲ್ಲಿ ವಿಕಸಿತಗೊಳಿಸಿದರೆ ಮನುಷ್ಯನಲ್ಲಿರುವ ಸುಪ್ತ ಜ್ಞಾನೇಂದ್ರಿಯಗಳು ಜಾಗೃತವಾಗುತ್ತದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಪಶು ಪಕ್ಷಿಗಳಲ್ಲಿ ಅವು ವಿಕಸಿತಗೊಂಡಿವೆ. ಆಗ ಮನುಷ್ಯನೂ ಕೂಡ ಭ್ರಮರದಂತೆ ಮೈಲಿಗಳಷ್ಟು ದೂರದಲ್ಲಿರುವ ಪುಷ್ಪಗಳ ಸುವಾಸನೆಯನ್ನು ಆಘ್ರಾಣಿಸಬಲ್ಲ, ಘ್ರಾಣ ಶಕ್ತಿ ನಾಯಿಯ ಘ್ರಾಣ ಶಕ್ತಿಯಂತೆ ತೀವ್ರವಾಗುವುದು ಮತ್ತು ಗೂಬೆಯಂತೆ ರಾತ್ರಿಯ ವೇಳೆಯಲ್ಲೂ ಕೂಡ ನೋಡಬಲ್ಲ.

ಈ ಎಲ್ಲ ಸಾಮರ್ಥ್ಯಗಳು ಮೊದಲಿನಿಂದಲೂ ನಮ್ಮಲ್ಲಿವೆ. ಆದರೆ ನಾವಿನ್ನೂ ಅದರ ಉಪಯೋಗವನ್ನು ಕಲಿತಿಲ್ಲ.

ಎಲ್ಲಕ್ಕಿಂತ ಹೆಚ್ಚಾದ ಚಮತ್ಕಾರ ಪೂರ್ಣ ಮನಃಶಕ್ತಿ

ಮನುಷ್ಯನ ಎಲ್ಲಕ್ಕಿಂತ ಹೆಚ್ಚಾದ ಚಮತ್ಕಾರ ಪೂರ್ಣ ಶಕ್ತಿ ಎಂದರೆ ಮನಃಶಕ್ತಿ. ಅವನು ಕನಸಿನಲ್ಲಿ ಭವಿಷ್ಯವನ್ನು ನೋಡಬಲ್ಲ. ಈ ಮನಃಶಕ್ತಿಯ ಬಗ್ಗೆ ತಿಳಿಯಲು ಬ್ರಿಟನ್ ಮತ್ತು ಅಮೆರಿಕದ ಒಂದು ದಂಡು ಸಂಶೋಧನಾ ನಿರತವಾಗಿದೆ.

ಕೆಲವು ವಿಜ್ಞಾನಿಗಳ ಅಭಿಪ್ರಾಯದಂತೆ ನಮ್ಮೆಲ್ಲರಿಗೂ ಕನಸಿನಲ್ಲಿ ಭವಿಷ್ಯದ ದರ್ಶನವಾಗುತ್ತದೆ. ಆದರೆ ಅದು ಇತರ ಕನಸಿನ ಜೊತೆಗೆ ಸೇರಿಕೊಂಡು ಹೋಗಿರುವುದರಿಂದ ಎದ್ದಮೇಲೆ ಅದರ ನೆನಪಿರುವುದಿಲ್ಲ.

ಈ ಭವಿಷ್ಯ ಸೂಚಕ ಸ್ವಪ್ನಗಳು ಎಲ್ಲಿಂದ ಬರುತ್ತವೆ ಎಂಬುದು ವಿಜ್ಞಾನಿಗಳ ಒಂದು ಪ್ರಶ್ನೆ. ಕೆಲವರಿಗೆ ಹಗಲಿನಲ್ಲೂ ಕನಸು ಬೀಳುತ್ತವೆ. ಅವು ಸಾಧಾರಣ ಸ್ವಪ್ನಗಳಲ್ಲ. ಭವಿಷ್ಯ ಸೂಚಕ ಸ್ವಪ್ನಗಳೇ ಆಗಿರುತ್ತವೆ. ೩೫೦ ಹಗಲು ಕನಸಿನವರ ಕನಸುಗಳ ಬಗ್ಗೆ ಸಂಶೋಧನೆ ನಡೆಸಿ ಹಗಲು ಗನಸುಗಳು ಬೆಲೆಯುಳ್ಳದ್ದೆಂದೂ ಮತ್ತು ಶೇ. ೫೦ರಷ್ಟು ಹಗಲು ಗನಸುಗಳು ಭವಿಷ್ಯವನ್ನು ಸೂಚಿಸುವಂಥದ್ದೆಂದೂ ಅಭಿಪ್ರಾಯಪಟ್ಟಿದ್ದಾರೆ.

ಜರ್ಮನಿಯ ರಸಾಯನಶಾಸ್ತ್ರಜ್ಞ, ಫ್ರೆಡಂಕ್ ಕ್ಕೆಕುಲೆ ಬೆಂಜೀನ್‌ಗೆ ಅಣು

ಸಂರಚನೆ ಕನಸಿನಲ್ಲಿ ಕಾಣಿಸಿಕೊಂಡಿತ್ತು. ಅವನು ಕನಸಿನಲ್ಲಿ, ಕಾರ್ಬನ್ನಿನ ಆರು ಪರಮಾಣುಗಳು ಒಂದೇ ಲೈನಿನಲ್ಲಿ ನರ್ತಿಸದೆ ಗೋಲಾಕಾರದಲ್ಲಿ ನರ್ತಿಸುತ್ತಿದ್ದುದನ್ನು ಕಂಡನು.

ಕನಸಿನಲ್ಲಿ ಭವಿಷ್ಯ ದರ್ಶನವಾಗುವ ಚಮತ್ಕಾರಪೂರ್ಣ ಮನಃಶಕ್ತಿಯ ರಹಸ್ಯದ ಉದ್ಘಾಟನೆ ಮಾನವನ ಮೆದುಳಿಗೆ ಒಂದು ಹೊಸ ಯುಗವನ್ನು ಪ್ರಾರಂಭ ಮಾಡಬಲ್ಲದಾಗಿದೆ.



ದೇವರ ಕೃಪೆ ಪಡೆಯಲು ಕಾಡಿಗೆ ಹೋಗಿ ತಪಸ್ಸು ಮಾಡಬೇಕಾಗಿಲ್ಲ. ಊಟ ಬಿಟ್ಟು ಉಪವಾಸ ಮಾಡಿ ಸೊರಗಬೇಕಾಗಿಲ್ಲ. ಯಜ್ಞಯಾಗಾದಿಗಳನ್ನು ಮಾಡಿ ಬೆಂಕಿಯ ಮುಂದೆ ಮೈ ಸುಟ್ಟುಕೊಳ್ಳಬೇಕಾಗಿಲ್ಲ. ದೇವರ ನಾಮಸ್ಮರಣೆಯೊಂದೇ ಸಾಕು ದೇವರನ್ನೊಲಿಸಿಕೊಳ್ಳುವುದಕ್ಕೆ.

—ಕಬೀರದಾಸ

ಸತ್ಸಂಗದಿಂದ ದುಷ್ಟರಿಗೂ ಸಾಧುತ್ವ ಬರುವುದು. ಆದರೆ ಸಾಧುಗಳಿಗೆ ದುಸ್ಸಂಗದಿಂದ ದುಷ್ಟತ್ವವು ಬರುವುದಿಲ್ಲ. ಹೂವಿನಿಂದ ಹುಟ್ಟಿದ ಸುವಾಸನೆಯನ್ನು ಭ್ರಮರವು ಹೀರಿಕೊಳ್ಳುತ್ತದೆ. ಆದರೆ ಭ್ರಮರದ ಮೈಬಣ್ಣವನ್ನು ಹೂವು ಎಂದೂ ಹಿಡಿದುಕೊಳ್ಳಲಾರದು.

—ಸುಭಾಷಿತ

'ಸಿಮೆಂಟಿನ ಗೋರಿಯ ಉರುಳಲ್ಲಿ ಸಿಲುಕಿದಾಗ ...'

ಎನ್. ಕೆ. ರಾಮಶೇಷನ್

"... ಆ ಆಳವಾದ ಹಗೇವಿನ ತಳದಿಂದ ಒಂದು ಭಯಾನಕ ಆರ್ತನಾದ:
"ಅದೊ, ಅದೊ, ಮತ್ತೆ ಮತ್ತೆ ಅದು ನನ್ನ ಮೇಲೆಯೇ ಕವಿಯುತ್ತಿದೆ....
ನನ್ನನ್ನು ಸಾಯಗೊಡಬೇಡಿ...."

ಹೆಮ್‌ಹೀತ್ ಕಲ್ಲಿದ್ದಲು ಗಣಿ ನೌಕೆಯ ಸಿಮೆಂಟ್ ಹಗೇವು ...ಮೇಲಿನ ಹದಿನೆಂಟು ಮೀಟರು ದೂರದಷ್ಟು ಕ್ರಮಿಸಿದ ಕ್ರಿಸ್ ಎಲ್ಲಿಸ್ ಹಾಗೆಯೆ ನಿಡುಸುಯ್ದು....ದಿನ ನಿತ್ಯದ ಕೆಲಸ....ಸಿಮೆಂಟಿನ ಹಗೇವಿನ ಕಿರಿದಾದ ತಪಾಸಣಾ ಕಂತಿಯ ಮೂಲಕ ಹಣಿಕಿ ನೋಡಿದ....ಮತ್ತೆ ಬೇಕಾದಂತೆ ತಿರುಗುವ ಏಣಿಯ ಮೂಲಕ ಗವಿಯಂತಿದ್ದ ಉಕ್ಕಿನ ಕೊಳವೆಯೊಳಗಡೆ ಹಾಗೆಯೇ ಇಳಿಯತೊಡಗಿದ.

ಸಿಮೆಂಟು ಹಗೇವು ಸಾಕಷ್ಟು ಖಾಲಿಯಾಗಿತ್ತು.... ಆದರೆ... ಸಿಮೆಂಟಿನ ಧೂಳು, ಹಗೇವಿನ ಕೊಳವೆಯ ಒಳಗೋಡೆ, ಕೆಳಭಾಗಗಳಲ್ಲಿ ಅಡಕಿತ್ತು.ಅಲ್ಲಲ್ಲಿ ಅದು ಬುಗುರಿಯಾಕಾರದ ದಪ್ಪ ಐಸ್‌ಕ್ರೀಂನಂತೆ ಅಡಕಿಕೊಂಡಿತ್ತು. ಕ್ರಿಸ್‌ಎಲ್ಲಿಸ್, ಏಣಿಯ ಮೂಲಕ ಇಳಿದು, ತಳತಲುಪಿ, ತನ್ನ ಬೂಟುಗಳನ್ನು ಊರಬೇಕು,ಇದ್ದಕ್ಕಿದ್ದಂತೆ ಸಿಲಿಂಡರಿನ ಎಲ್ಲೆಡೆಯಿಂದ ಕವಿದ ಸಿಮೆಂಟ್ ಧೂಳಿನಿಂದ ಆವರಿಸಿಹೋದ....ಮೂರೂವರೆ ಮೀಟರ್ ಎತ್ತರಕ್ಕೂ ಮೀರಿದ ದಪ್ಪ ಧೂಳದು....!!

ಕ್ರಿಸ್‌ಎಲ್ಲಿಸ್ ಕೆಳಗಿಳಿದದ್ದು ತನ್ನ ಸಹೋದ್ಯೋಗಿ, ಕಾರ್ಮಿಕನ ಶಿರಸ್ತ್ರಾಣ (ಹೆಲ್ಮೆಟ್)ವನ್ನು ಹುಡುಕಿ ತರಲೋಸುಗ. ಆ ಶಿರಸ್ತ್ರಾಣವು ಬಿದ್ದುಹೋದದ್ದರಿಂದ ಕೊಳವೆಯ ಒಂದು ಕಿಂಡಿ ಅರ್ಧದಷ್ಟು ಮುಚ್ಚಿಹೋಗಿ, ಇನ್ನರ್ಧ ಭಾಗ ಹೆಲ್ಮೆಟ್ ಮಾತ್ರ ಕಾಣಿಸುತ್ತಿತ್ತು. ಹೆಲ್ಮೆಟ್‌ಅನ್ನು ಹೆಕ್ಕಿ ತೆಗೆದು, ತಾನು ಬಂದ ತೂಗೇಣಿಯ ಮೆಟ್ಟಲೇರುವಷ್ಟರಲ್ಲೇ ಸಿಮೆಂಟು ಪುಡಿಪುಡಿಯಾಗಿ ತನ್ನ ಮೇಲೆಯೆ ತಪತಪನೆ ಉದುರುತ್ತಿರುವುದನ್ನು ಎಲ್ಲಿಸ್ ಗುರುತಿಸಿದ. ತಕ್ಷಣವೇ ಅವನಿಗೆ ಗಾಬರಿಯಾಯಿತು.

೧೯೮೭ರ ಮೇ ತಿಂಗಳಿನ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾದ ಪಿಲ್ಬೆರ್ ಬ್ರೌಸ್ ಅವರ ಲೇಖನದ ಅನುವಾದ.

ದಬದಬನೆ ಕೈ ಚಾಚಿ, ಏಣಿಯಿಂದ ಮೇಲಕ್ಕೆ ತನ್ನನ್ನು ಎಳೆದುಕೊಂಡೇ ಏರಿದ. ಆದರೆ, ಆದದ್ದೇನು? ಅವನೇರವೆಳಸಿದಂತೆ, ಆತನ ಕಾಲು, ಮಂಡಿಯೆತ್ತರಕ್ಕೂ ಅವುಕಿ ಕವಿದ ಸಿಮೆಂಟು ಅವನನ್ನು ಅಲುಗಗೊಡಲಿಲ್ಲ! ಏಣಿಯ ಒಂದು ಮೆಟ್ಟಿಲು ಸಿಮೆಂಟಿನಲ್ಲಿ ಹೂತುಹೋದಾಗ, ಅಲ್ಲೇ ಒಂದು ಕಾಲನ್ನು ಇರಿಸಿಕೊಂಡ ಎಲ್ಲಿಸ್ ತಾನು ಉರುಳಲ್ಲಿ ಸಿಲುಕಿದೆನೆಂದುಕೊಂಡ, ತೀಕ್ಷ್ಣವಾದ ಧೂಳು ಕವಿದು ಅವನಿಗೆ ಉಸಿರೇ ಕಟ್ಟಿ ಹೋಯಿತು.

ಹಗೇವಿನ ಮೇಲ್ಭಾಗದಿಂದ ಫೋರ್‌ಮನ್ ಜಾನ್‌ವುಡ್, ತನ್ನ ಸ್ನೇಹಿತನ ಫಜೀತಿಯನ್ನು ಮನಗಂಡನೇನೊ. ಆಳವಾದ ಕೋಣೆಯಲ್ಲಿ ಕಿರಣ ಬೀರಬಲ್ಲ ಟಾರ್ಚ್ ಅವನಲ್ಲಿತ್ತು. ಹಾಗೆಯೇ, ಅದರ ಬೆಳಕಿನಲ್ಲಿ ಧೂಳಿನ ಮಬ್ಬಿನಲ್ಲಿ ಹುಡುಕಿದಾಗ, ಒಂದು ದೈನ್ಯದ ದನಿ ಕೇಳಿಬಂದಿತು.... "ದಮ್ಮಯ್ಯ, ನನ್ನನ್ನು ಕಾಪಾಡಿ! ಅದು, ಎಲ್ಲಿಸ್‌ನ ಧ್ವನಿಯೇ ಖಂಡಿತ!

೧೯೮೬, ಜನವರಿ ೧೫ ರ ಸಂಜೆ ಕಳೆದು ಏಳು ಗಂಟೆಗೆ ಮುಂಚೆ ಎಲ್ಲಿಸ್ ತನ್ನ ಮೆಚ್ಚಿನ ನೀಲಿ ಕಾರಿನಲ್ಲಿ ಬಂದದ್ದು, ಇಂಗ್ಲೆಂಡಿನ ಸ್ಟ್ಯಾಫರ್ಡ್‌ಷೈರಿನಲ್ಲಿ ಎರಡನೆಯ ಬೃಹತ್ ಕಲ್ಲಿದ್ದಲು ಸಾಗಿಸುವ ನೌಕೆಯದು. ೧೮೦೦ ರಷ್ಟು ನಾವಿಕ–ಕಾರ್ಮಿಕರು, ಗಣಿ ಪರಿಣತರು, ತಜ್ಞರು ಅಲ್ಲಿ ದುಡಿಯುತ್ತಿದ್ದದ್ದು. ಎಲ್ಲಿಸ್ ತನ್ನ ಮಧ್ಯಾಹ್ನದ ಕೆಲಸದ ಸರದಿಯನ್ನು ನಿರ್ವಹಿಸಲು ಬಂದಿದ್ದ. ಮೂವತ್ತೆರಡರ ಪ್ರಾಯದ ದೃಢಕಾಯಸಾತ. ಖುಷಿಮನುಷ್ಯ,... ಪುಟ್ಟ ಸಂಸಾರ. ಹೆಂಡತಿ, ಮಗ, ಹಿತಮಿತ ಎಲ್ಲದರಲ್ಲೂ. ಕಲ್ಲಿದ್ದಲು ಪರಿಷ್ಕರಿಸುವ ಯಂತ್ರೋಪಕರಣದಲ್ಲಿ ಎಲ್ಲಿಸ್‌ನ ದುಡಿಮೆ. ಇದ್ದಲನ್ನು ಜರಡಿಹಿಡಿದು, ಸಾರಕೆ ಮಾಡಿ, ತೊಳೆದು, ಶುದ್ಧಿಗೊಳಿಸಿ, ಒಣಗಿಸಿ, ಪರಿಷ್ಕರಿಸುವ ಕಾಯಕ.

ಕಲ್ಲಿದ್ದಲು ತಯಾರಿಕೆಯ ನೆಲೆಯ ನಡುವೆಯೆ ಸಿಮೆಂಟ್ ಹಗೇವು ನಿಲ್ಲಿಸಿರುವುದು. ದೃಢವಾದ ಉಕ್ಕಿನ ಕೊಳವೆ (ಸಿಲಿಂಡರ್) ೧೨೦ ಟನ್ ಸಿಮೆಂಟು ಶೇಖರಿಸಬಲ್ಲ ಹಗೇವು. ಅಲ್ಲಿಂದ ಸಿಮೆಂಟು ಒಂದು ಸ್ವಯಂಚಾಲಿತ ಪಟ್ಟಿಗಳ ಮೂಲಕ ಅಲಿಕೆಯಂತಹ ಪಾತ್ರೆಗೆ ಸುರುವಿಕೊಂಡು,.... ಅಲ್ಲಿ ನುಣ್ಣನೆಯ ಇದ್ದಿಲುಹುಡಿಯನ್ನು ಬೆರೆಸಿ, ಸಾಂಧ್ರಗೊಳಿಸುವುದು....ಅದನ್ನು ಮತ್ತೆ ಆಚೆದೂಡಿ, ಕುಪ್ಪೆ ಮಾಡುವದು. ಮಧ್ಯಾಹ್ನವಿಡೀ ಆ ಯಂತ್ರೋಪಕರಣ ಒಂದೇಸಮನೆ ಚಾಲನೆಯಲ್ಲಿರಿಸಿ ಎಷ್ಟು ಸಾಧ್ಯವೂ ಅಷ್ಟು ಸಿಮೆಂಟನ್ನು ಹೊರದೂಡಿ ಹಾಕುವ ಕೆಲಸ ನಡೆದಿತ್ತು. ಆದ್ದರಿಂದ, ಕ್ರಿಸ್ ಎಲ್ಲಿಸ್ ತನ್ನ ಮಿತ್ರನ 'ಹೆಲ್ಮೆಟ್' ನೋಡಿದೊಡನೆಯೆ ಅದನ್ನು ತರಲೆಂದು ಕೆಳಗುಳಿದಿದ್ದ. ಅವನಿಗಾಗಲಿ, ಫೋರ್‌ಮನ್ ಜಾನ್‌ವುಡ್ ಆಗಲಿ, ಗಂಡಾಂತರವೇನನ್ನೂ ನಿರೀಕ್ಷಿಸಿರಲಿಲ್ಲ. ಅದು ಅವರ ಆಲೋಚನೆಗೂ ನಿಲುಕಲಿಲ್ಲ. ಕೇವಲ ಒಂದೆರಡು ಮಿನಿಟುಗಳ ಕೆಲಸ, ಆದರೆ ನಡೆದದ್ದು ??

ಇದೀಗ ಸಿಮೆಂಟ್ ಗೋರಿಯು ಕವಿಯುತ್ತಿದ್ದಂತೆ ಹತಾಶೆಯಿಂದ ಕಂಗಾಲಾದ ಎಲ್ಲಿಸ್ ಒಂದು ತೆರನಾದ ಮಾನಸಿಕ ಉನ್ಮಾದಕ್ಕೆ ಒಳಗಾದ! ಕೂಗೇ[illegible]

ನೆರವಿನಿಂದ ಸರಸರನೆ ಕೆಳಗಿಳಿದ ವುಡ್, ತನ್ನ ಗೆಳೆಯನನ್ನು ಸಮಾಧಾನಗೊಳಿಸಲು ತನ್ನೆಲ್ಲ ಮಾತಿನ ಜಾಣ್ಮೆಯನ್ನು ಬಳಸಿದ. ಅದೇ ಸಮಯಕ್ಕೆ ಸಿಮೆಂಟ್ ಧೂಳನ್ನು ಇನ್ನೂ ದೂಡಿ ಎಲ್ಲಿಸನನ್ನೂ ಎಳೆದುಕೊಳ್ಳೋಣವೆಂದು ಪ್ರಯತ್ನಿಸಿದರೆ, ಎಲ್ಲೆಡೆಯಿಂದಲೂ ಇನ್ನೂ ಕುಪ್ಪೆಯಾಗಿ ಸಿಮೆಂಟ್ ಉದುರುತ್ತಲೇ ಇದೆ! ಅದನ್ನು ಕೆದಕಲೂ ಹೆದರಿದ ವುಡ್, ಏಣಿಯುೂರಿ, ತನ್ನ ಕಾಲುಗಳಿಂದ ಭದ್ರವಾಗಿ ಹಿಡಿದುಕೊಂಡು, ಕೆಳಗಿಳಿದು, ಎಲ್ಲಿಸನನ್ನೂ ಮೇಲೆಳೆದುಕೊಳ್ಳಲು ನಡೆಸಿದ ಎಲ್ಲ ಕಸರತ್ತು ನಿರುಪಯೋಗಿಯೆನಿಸಿತು.

"ಹಾಗೇ....ಸ್ವಲ್ಪ ನಿರಾಳದಿಂದಿರು.... "ಮತ್ತೆ ಭರವಸೆ ನೀಡಿದ ವುಡ್. "ನಾವು ಆದಷ್ಟು ಜಾಗ್ರತೆ ಈ ನರಕಕೂಪದಿಂದ ನಿನ್ನನ್ನು ಹೊರಗೆಳೆದುಕೊಳ್ಳುತ್ತೇವೆ."

ಆದರೆ ಸಿಮೆಂಟು ತೆರೆತೆರೆಯಾಗಿ ಕೊಳವೆಯೆಲ್ಲೆಡೆಯಿಂದಲೂ ಎಲ್ಲಿಸ್‌ನ ಸುತ್ತಲೂ ಕವಿದು ಬರುತ್ತಿದ್ದುದನ್ನು ವುಡ್ ಗಮನಿಸುತ್ತಿದ್ದ. ದಿಗಿಲಿಗೊಳಗಾದ ಎಲ್ಲಿಸನಿಗೆ ಬಿಟ್ಟ ಕಣ್ಣು, ಬಿಟ್ಟ ಬಾಯಿ! ಸಿಮೆಂಟು ಅವನ ನಡುಭಾಗವನ್ನು ಬಳಸಿ ಹಿಡಿದಿತ್ತು.

ಜಾಗರೂಕತೆಯಿಂದ ವುಡ್ ಮೆಲ್ಲನೆ ತೂಗೇಣಿಯ ಮೂಲಕ ಹಗೇವಿನ ಮೇಲೇರಿ ಬಂದ. ಬಂದವನೇ ಇನ್ನೊಬ್ಬ ನುರಿತ ಫೋರ್‌ಮನ್ ಜಾನ್‌ಪಾರ್ಕರ್‌ನನ್ನು ನೆರವಿಗೆ ಕರೆದ. ಅವರಿಬ್ಬರೂ ಹಗೇವಿನೊಳನಡೆದರು. ತೂಗೇಣಿಯ ಮೂಲಕ ಒಂದೊಂದು ತೋಳು ಹಿಡಿದು, ಇನ್ನೊಂದು ತೋಳನ್ನು ಎಲ್ಲಿಸನ ಸುತ್ತ ಕೊಂಡಿ ಹಾಕಿಕೊಂಡು ತಮ್ಮೆಲ್ಲ ಬಲ ಉಪಯೋಗಿಸಿ ಎತ್ತಿದರು. ಅವನನ್ನು ಒಂದು ಅಂಗುಲದಷ್ಟು ಅಲುಗಿಸಲು ಸಾಧ್ಯವಾಗಲಿಲ್ಲ. "ನಾನು ಇನ್ನೂ ನುರಿತವರನ್ನು ನೆರವಿಗೆ ಕರೆತರುತ್ತೇನೆ" ಎಂದ ವುಡ್ ಮತ್ತೆ ಮೇಲೇರಿದ.

ಕ್ರಿಸ್ ಎಲ್ಲಿಸನಿಗೋ ಕಣ್ಣಸುತ್ತಾ ಸಿಮೆಂಟಿನ ಬೂದಾ ಬಣ್ಣದ ಬೂದಿ ಕವಿದ ಮಂಪರು! ಹಾಗೆಯೆ ದಿಟ್ಟಿಸುತ್ತ ಪಾರ್ಕರನಿಗೆ ಮೊರೆಯಿಟ್ಟ. "ನನ್ನನ್ನು ಒಂಟಿಯನ್ನಾಗಿ ಮಾಡಬೇಡಿರಿ."

ಪಾರ್ಕರನಿಗಾಗಲೇ ಸಿಮೆಂಟು ಧೂಳು, ಕುಪ್ಪೆಯಾಗೊಡೆದು, ಚೂರುಚೂರಾಗಿ ತಗುಲಿದ ಅನುಭವ! ಅದರ ಜತೆಗೇ ಯಾವುದೇ ಬೆಚ್ಚಗಿನ ಗಟ್ಟಿ ದ್ರವ, ಅದರ ಲೋಳೆ ಬೇರೆ ಹರಿದು ಬರುತ್ತಿದ್ದ ಅನುಭವ! ಆದರೂ ಪಾರ್ಕರ್ ನಿರ್ಧರಿಸಿದ; "ನಾನು ಇನ್ನು ಬೆನ್ನು ತೋರಕೂಡದು. ಎಲ್ಲಿಸನನ್ನು ಒಂಟಿಮಾಡಕೂಡದು...." ಜತೆಗೇ ದೇವರ ಪ್ರಾರ್ಥನೆ!

ಏಣಿಗೆ ಜೋತು ಬಿದ್ದೇ ಪಾರ್ಕರ್, ತನ್ನ ಒಳ ಅಂಗಿ ಜೇಬಲ್ಲಿ ತಂದಿದ್ದ ಹಗ್ಗವೊಂದನ್ನು ತೆಗೆದು ಎಲ್ಲಿಸನ ಸೊಂಟದಸುತ್ತ ಸಾಧ್ಯವಿದ್ದಷ್ಟು ಬಲವಾಗಿ ಕಟ್ಟಿದ, ಅವನನ್ನು ಮುಳುಗದಂತೆ ತಡೆಯಲು ಮತ್ತೆ ಮತ್ತೆ ಅವನು ತನ್ನ ಪ್ರಯತ್ನ ನಡಸಿದಂತೆಲ್ಲ ಸಿಮೆಂಟಿನ ಗೋಡೆಯ ಒಂದು ಭಾಗವೇ ಕುಸಿಯಿತು. ಅದೆಷ್ಟು ಹಳೆಯದೊ ಹೆವ್ ಹೀತ್ ಕಂಪನಿಯ ಆ ಕೊಳವೆ. "ಅಯ್ಯಯ್ಯೊ! ಗೋಡೆ! ನನ್ನ ಮೇಲೆಯೆ ಕುಸಿಯುತ್ತಿದೆ"—ಎಲ್ಲಿಸ್ ಕಿರಲಿದ. "ಪಾರ್ಕರ್, ನನ್ನನ್ನು ಸಾಯಗೊಡಬೇಡ, ದಮ್ಮಯ್ಯ."

"ಓಹೋ ! ಎಲ್ಲಿಸನ ಮುಖಕ್ಕೆ ರಕ್ಷಣೆ ನೀಡದಿದ್ದರೆ, ಅವನು ಇನ್ನೂ ಉಸಿರುಕಟ್ಟಿ ನೀಲಿಯಾಗುವನಷ್ಟೆ" ಎಂದರಿತ ಪಾರ್ಕರ್. ಒಂದು ಕೈಲಿ ಏಣಿಯನ್ನು ಬಲವಾಗಿ ಹಿಡಿದ. ಹಾಗೆಯೆ ಎಲ್ಲಿಸನ ಮೇಲೆ ತೂಗಿ ಬಿದ್ದು "ನಿನ್ನ ತಲೆಯನ್ನು ನನ್ನಲ್ಲಿ ಹುದುಗಿಸಿಕೊ ಹಾಗೆ ಇರು ಎಲ್ಲಿಸ್ !" ಎಂದು ಗಟ್ಟಿದನಿಯಲ್ಲಿ ತಿಳಿಸಿದ.

ಈಗಾಗಲೇ ಪಾರ್ಕರ್ ಕೂಡ ಅರ್ಧ ಹೂತುಹೋಗಿದ್ದ. ಅವನ ಬೆನ್ನು ಕಾಲು ಗಳಿಗೆ ಕವಿದು ಕೊಳ್ಳುತ್ತಿದ್ದ ಸಿಮೆಂಟಿನ ಒತ್ತಡದ ಅನುಭವ, ಅವನಿಗಾಗುತ್ತಿತ್ತು. ಧೂಳುಧೂಸರಿಕೆಯಿಂದ ಉಸಿರಾಡಲೂ ಆಗದು. ಕೆಮ್ಮು ಕಟ್ಟಿ ಕಟ್ಟಿ ಬರುತ್ತಿತ್ತು. ಅದಲ್ಲದೆ, ಕೊಳವೆಯಲ್ಲಿ ಉಳಿದ ಹಬೆ, ಅದರ ಕಾವು ! ಪಾರ್ಕರನಿಗೆ ಮೂವತ್ತೇಳರ ಪ್ರಾಯ...." ಇನ್ನು ಹೊರಹೋಗಲು ನನಗೆ ಹಾದಿಯಿದೆಯೆ ? ಅದೆಂತು" ಎಂದಾ ಲೋಚಿಸಿ, ಪಾರ್ಕರ್ ಏನೂ ತೋಚ ದಂತಾದ.

ತನ್ನ ಹೆದರಿಕೆ, ಕಳವಳವನ್ನು ಹೊಡೆದು ಬೆಳಿಸಲು ಸಂಕಲ್ಪಿಸಿದ ಜಾನ್ ಎಲ್ಲಿಸನ ತಲೆ ಸುತ್ತ ಇದ್ದ ಸಿಮೆಂಟನ್ನು ಹೆಕ್ಕಿ ಹೆಕ್ಕಿ ಹಾಕಿದ್ದ–ಅವನು ಅದೆಷ್ಟೇ ಮೆದುವಾಗಿ ಸಿಮೆಂಟಿನ ಧೂಳನ್ನು ಗೋರಿದನೊ ಅಷ್ಟು ಸ್ವಲ್ಪ ತಗುಲಿದಲ್ಲಿ ಸಿಮೆಂಟ್ ಇನ್ನೂ ಕೈಗಡೆಗೆ ಧಾವಿಸುತ್ತಿತ್ತು, ಜಾರುತ್ತ ಉದುರುತ್ತಿತ್ತು. ನಿಮಿಷಗಳು ಸರಿದಂತೆ, ಉಸಿರಾಡಲೂ ಕೂಡ ಏದುತ್ತಿದ್ದ ಕ್ರಿಸ್ ಎಲ್ಲಿಸ್, ಇನ್ನೂ ದಿಗ್ಭ್ರಮೆಗೀಡಾದ. ಪಾರ್ಕರನಾದರೋ, ತನ್ನ ಮಿತ್ರನನ್ನು ಹುರಿದುಂಭಿಸಲೆಳ್ಸಿಸಿದ. "ನೋಡಿಲ್ಲ ಎಲ್ಲಿಸ್! ನಮ್ಮಿಬ್ಬರನ್ನೂ ಈ ಧೂಳು ಸಾಯಿಸುವು ದೆಂದು ನಾವು ಆಲೋಚಿಸಿದ್ದರೆ ಇಲ್ಲಿ ನಾವಿರುತ್ತಿದ್ದೆವೆ? ಇನ್ನೇನು ಮಧ್ಯಾಹ್ನದ ಊಟದ ವೇಳೆ ಇನ್ನು ಕೆಲಸದ ವೇಳೆ ಮೀರಿ ಓವರ್‌ಟೈಂ ಕೂಡ ನೀನು ಕೇಳಲು ಅವಕಾಶವಿದೆ, ಅಲ್ಲವೆ ?"

ಕ್ರಿಸ್ ವಿಷಣ್ಣ ನಗೆಯನ್ನು ಚೆಲ್ಲಿದ: ಸಧ್ಯ ! ಈ ಜೀವ ಉಳಿದರೆ ಸಾಕು, ಎನ್ನಿಸಿದೆ.

ರಾತ್ರಿ ೭-೩೦ ಗಂಟೆ ಸರಿದನಂತರ, ಸೋತು ಸೊಪ್ಪಾದ ಜಾನ್‌ವುಡ್, ಗಣಿ ಆಸ್ಪತ್ರೆಗೆ ಧಾವಿಸಿ, ವೈದ್ಯರಿಗೆ, ಅಂಬುಲೆನ್ಸ್‌ಗೆ ತಿಳಿಸಿದ.

"ಸಿಮೆಂಟುಹಾಗೇವು ಕೊಳವೆಯಲ್ಲಿ ಒಬ್ಬ ಸಿಕ್ಕಿಹಾಕಿಕೊಂಡಿದಾನೆ. "ಆಸ್ಪತ್ರೆ ಕಾಂಪೌಂಡರ್, ಮಿಕ್‌ಪ್ರೊಸೆಲ್ಸನಿಗೆ ನುಡಿದ "ಅವನಿಗೆ ಆಮ್ಲಜನಕದ ಅಗತ್ಯ ತುಂಬಾ ಇದೆ."

ಜಾನ್‌ವುಡ್ ಗಣಿ ನಿಯಂತ್ರಣ ಕೇಂದ್ರದ ಅಧಿಕಾರಿಗಳಿಗೂ ಕೆಲವು ಸಂಕೇತ ನೀಡಿದ, ಸೂಚನೆಗಳನ್ನು ಕಳಿಸಿದ. ಸನಿಹದಲ್ಲಿಯೆ ಇದ್ದ ಆರೋಗ್ಯಕೇಂದ್ರದ ಮಿಕ್‌ಪ್ರೊಸೆಲ್ಸ್ ಇಬ್ಬರು ಸಹಾಯಕರೊಂದಿಗೆ ನಾಲ್ಕು ಆಮ್ಲಜನಕ ಕೊಳವೆಗಳನ್ನು ತೆಗೆದು ಕೊಂಡು ನೇರ ಸಿಮೆಂಟು ಹಗೇವು ಕಡೆಗೆ ಧಾವಿಸಿದರು. ಮಿಕ್‌ಪ್ರೊಸೆಲ್ಸ್ ಚಲಾಂತ ಗರ್ಾಮಿ ಹಡಗಿನಲ್ಲಿ ಅನೇಕ ವರ್ಷ ಕೆಲಸ ಮಾಡಿ ಪಳಗಿದ್ದವ. ಒಂದು ಆಮ್ಲಜನಕದ ಸಿಲಿಂಡರನ್ನು ತನ್ನ ಬೆನ್ನಿಗೇರಿಸಿಕೊಂಡ, ಇನ್ನೊಂದನ್ನು ತನ್ನ ದೃಢವಾದ ತೋಳಲ್ಲಿ ಅವುಕಿ, ಹೊರಗೋಡೆಗೆ ಬೆಸೆದಿದ್ದ. ಏಣಿಯ ಮೇಲೇರಿದ್ದ ಅಲ್ಲಿಂದ ಅತ ಹಗೇವಿನೆಡೆ ಸಾಗಿ

ಅನಂತರ ಒಳಗಡೆ, ಹಾಗೂ ತೂಗೇಣಿಯ ನೆರವಿಂದ ಇಳಿಯಬೇಕಾಗಿದ್ದದ್ದು. ಹಗೇವಿನ ನಿರೀಕ್ಷಣಾ ಕಂಡಿಯೆಡೆಗೆ ಮೊದಲು ಬಂದ ಪ್ರೋಸೆಲ್ಸ್, ಒಳಗಿನಾಳಕ್ಕೆ ಕೂಗಿದ. "ಇದೊ, ಇಲ್ಲಿ, ಎಲ್ಲಿಸ್! ವಿಕ್, ನಾನು! ಕೆಳಗಡೆ ಬರುತ್ತಿದ್ದೇನೆ... ಹೆದರಬೇಡ...ನಾವಿದ್ದೇವೆ ನಿನ್ನ ನೆರವಿಗೆ."

ಹಾಗೆಯೇ ತೂಗೇಣಿಯ ಮೂಲಕ ಇಳಿಯುತ್ತ ಪ್ರೋಸೆಲ್ಸ್, ಕವಿದಿದ್ದ ಧೂಳಿನ ಮೋಡದ ಮೂಲಕ ಇಣಿಕುತ್ತಾನೆ, ಕ್ರಿಸ್ ಎಲ್ಲಿಸ್ ತೋಳಿನವರೆವಿಗೂ ಸಿಮೆಂಟನಲ್ಲಿ ಹುದುಗಿಹೋಗಿದ್ದ! ಪಾರ್ಕರ್ ಇಳಿಬಿಟ್ಟಿದ್ದ ತೂಗೇಣಿಯ ಒಂದು ತುದಿಯನ್ನು ಹಾಗೂ ಹೀಗೂ ಹಿಡಿದುಕೊಂಡು, ಜೋತಾಡಲು ಪ್ರಯತ್ನಿಸುತ್ತಿದ್ದ! ಮತ್ತೆ ಸಿಮೆಂಟು ಸತತ ಉದುರುತ್ತಲೇ ಇತ್ತು! ಈ ವೇಳೆಗೆ ಎಲ್ಲಿಸನಿಗೆ ತನ್ನ ಕಾಲುಗಳು ಜವುಗು ಹಿಡಿದು, ಸೆಟೆದವೆಂದೆನ್ನಿಸಿತು.... ಸಿಮೆಂಟಿನ ಭಾರವಾದ ಒತ್ತಡ, ಎದೆಯನ್ನು ಅಮುಕುತ್ತಿತ್ತು ಒಂದೇ ಸಮನೆ.

ಜಾನ್ ಪಾರ್ಕರ್ ಮಾತ್ರ ಈ ಸ್ಥಿತಿಯಲ್ಲೂ ಗೆಳೆಯ ಎಲ್ಲಿಸನ ಜೊತೆ ಗಮನವೀಯುವುದು ಬಿಡಲಿಲ್ಲ. ಅವನು ಎಲ್ಲಿಸನ ಮೇಲೆಯೆ ಅವನ ಮುಖಕ್ಕೆ ಸಿಮೆಂಟು ಉದುರುವುದು ನಿಲ್ಲಲೆಂದು— ಬಾಗಿ ನೇತಾಡುತ್ತ ನಿಂತ, ಹಾಗೇವಿನ ಕಮಾನುಗಳಲ್ಲಿದ್ದ ಸಿಮೆಂಟು ಜಾನ್ ಪಾರ್ಕರ್ ಬೆನ್ನ ಮೇಲೆ ಕವಿದರೂ, ಕವಿದು ಭಾರವೆನಿಸಿದರೂ, ಆತ ಸ್ಥಳ ಬಿಟ್ಟಲುಗಲಿಲ್ಲ. ಹಾಗೆಯೆ, ನೇತಾಡುತ್ತಲೆ, ಮೇಲುಗಡೆಗೆ ಓರೆ ನೋಟವನ್ನು ಬೀರಿದ! ಪ್ರೋಸೆಲ್ಸನಿಗಿಂತ ಹಗೇವಿನ ಮೇಲ್ಭಾಗದ ಸಿಮೆಂಟಿನ ದಪ್ಪ ಗೋಡೆಯು ಯಾವ ಕ್ಷಣದಲ್ಲಾದರೂ ಧೆಪ್ಪೆಂದು ಕುಸಿದು ಎಲ್ಲರನ್ನೂ ಸಮಾಧಿ ಮಾಡಿಬಿಡುವಂತಿತ್ತು. "ಪಾರ್ಕರ್ ಎಚ್ಚರ! ಎಲ್ಲಿಸನ ಮುಖಕ್ಕೆ ಸಿಮೆಂಟು ಕಲ್ಲು ರಾಚಿಯಾತು" ಎಂದ, ಪ್ರೋಸೆಲ್ಸ್. ತನ್ನ ಒಂದು ತೋಳನ್ನು ಏಣಿಗೆ ಬೆಸೆದು, ಇನ್ನೊಂದರಿಂದ ಎಲ್ಲಿಸನ ಬೆನ್ನಿಗೆ ಕವಿದಿದ್ದ ಸಿಮೆಂಟು ಧೂಳನ್ನು ಹೆಕ್ಕಿ ಹಾಕಲು ಪ್ರಯತ್ನಿಸಿದ! ಐದು ನಿಮಿಷ ಅವಿರತ ಶ್ರಮ....ಪೊಸೆಲ್ಸ್ ಪಾರ್ಕರನಿಗೆ ಹೇಳಿದ. ಪರವಾಗಿಲ್ಲ; ಸ್ವಲ್ಪ ಧೂಳು, ಉದುರುವಿಕೆ ಕಡಿಮೆಯಾಗಿದೆ, ನಾವಿಬ್ಬರೂ ಸೇರಿ, ಅವನ ತೋಳ ಸುತ್ತ ಕೊಕ್ಕೆ ಹಾಕಿಕೊಂಡು ಬಳಸಿ, ಹಿಡಿದು, ಮೇಲಕ್ಕೆಳೆದುಕೊಳ್ಳುವ. ಈಗ, ಅವನ ಕಾಯಗಳು ಭದ್ರವಾಗಿ ಸಿಕ್ಕಿಕೊಂಡಿವೆ ಎನಿಸುತ್ತದೆ" ಹಾಗೆಂದ ಕ್ಷಣದಲ್ಲಿಯೆ ಪುನಃ ಅದ್ಯಾವ ಮೂಲೆಯಿಂದಲೊ ಸಿಮೆಂಟಿನ ಒಂದು ಕುಪ್ಪೆ, ಹಾಗೆಯೇ ಉಕ್ಕಿತು ಕುಸಿಯಿತು.

ಮತ್ತೆ ಅದನ್ನು ಪ್ರೋಸೆಲ್ಸ್ ಬಹು ಕಷ್ಟದಿಂದ ಕಿತ್ತುಹಾಕಿದ, ತಳ್ಳಿದ, ಇನ್ನೂ ಸಿಮೆಂಟು ತೆರೆ ತೆರೆ! ಮೂರು ಸಲ ಪ್ರಯತ್ನ, ಮತ್ತೆ ನಿಷ್ಫಲಗೊಂಡ ಪ್ರೋಸೆಲ್ಸ್, ಪಾರ್ಕರನಿಗೆ ನುಡಿದ: "ಈ ರಾಕ್ಷಸ ಸಿಮೆಂಟು ಚಕ್ಕೆಚೂರು .. ....ಧೂಳು.... ಕುಸಿಯುವುದನ್ನು ಹೇಗಾದರೂ ನಾವು ತಡೆಯದೆ ಎಲ್ಲಿಸನನ್ನು ಉಳಿಸಲು ಇನ್ನೇನು ಹಾದಿಯಿದೆ?"

ಅವರಿಬ್ಬರೂ ಮೇಲೇರಲಾಗಲಿಲ್ಲ. ಪೊಸೆಲ್ಸ್, ಮೇಲುಗಡೆಗೆ ಸರಸರನೆ ಏರಿ ಹೋದ, ಸುತ್ತಣ ನೆರೆಹೊರೆಯ ರಕ್ಷಣಾ ತಂಡದವರನ್ನೂ ಕೂಗಿ ಕರೆದ. ಎಲ್ಲರೂ

ಹಗೇವಿನ ಸುತ್ತ ನೆರೆದಾಯಿತು. ಅಗಲವಾದ ಹದಿನೇಳು ವಿಾಟರಿಗೂ ಉದ್ದದ ಊರೆವುರವನ್ನು ಹಗೇವಿನ ಗವಿಯೊಳಕ್ಕೆ ಇಳಿಬಿಡಲು ನಿರ್ಧರಿಸಿದರು. ಮತ್ತೆ ಪೊಸೆಲ್ಸ್ ಇಳಿದ, ಎಲ್ಲಿಸಿನ ಸುತ್ತ ಕವಿದ ಸಿಮೆಂಟನ್ನು ಗೋರಿ ಗೋರಿ ತೆಗೆಯುತ್ತ, ಕಣ್ಣಿಗೆ ಕತ್ತಲೆ ಕವಿದು ಸೋರುತ್ತಿದ್ದ ಎಲ್ಲಿಸನನ್ನು ಧೈರ್ಯದಿಂದಿರಲು ಹೇಗೇ ಹೇಳಿದರೂ ಅವನ ಮಾತೆಲ್ಲವೂ ನಿಶ್ಫಲವಾದವು. ನೆನಪು ಮರುಕಳಿಸಿದಂತೆ, ಹುಚ್ಚನಾದ ಎಲ್ಲಿಸ್, ತನ್ನ ಮುದ್ದಿನ ಮಗ—ಮಡದಿಯ ಹೆಸರು ಹಿಡಿದು ಕೂಗುತ್ತಿದ್ದ.

ಇದ್ದಕ್ಕಿದ್ದಂತೆ, ಪಾರ್ಕರ್, ಪೊಸೆಲ್ಸ್ ಇಬ್ಬರಿಗೂ ತಾವು ಮುಳುಗಿಹೋಗುತ್ತಿರುವ ಅನುಭವ! ಎಲ್ಲಿಸನಿಗಂತೂ ಅವನ ಸೊಂಟಕ್ಕೆ ಸುತ್ತಿದ ದಪ್ಪ ಹಗ್ಗವು ಇನ್ನೂ ಬಿಗುವುಗೊಂಡಂತೆನ್ನಿಸಿತು. "ಏನೊ ಆಗುತ್ತಿದೆ, ಅಪಾಯ ಸಂಭವಿಸುತ್ತಿದೆ.. ...." ಎಲ್ಲಿಸ್ ಬಡಬಡಿಸಿದ: "ಈ ಹಗ್ಗ ನನ್ನನ್ನು ಕತ್ತರಿಸುತ್ತಿದೆಯಲ್ಲೊ—ಪಾರ್ಕರ್....... ಪೊಸೆಲ್ಸ್!

ಜಾನ್‌ಪಾರ್ಕರ್ ಮೇಲುಗಡೆಗೆ ಕಿರಲಿದ: "ಹಗ್ಗ ಎಳೆಯುವುದನ್ನು ನಿಲ್ಲಿಸಿರೊ! ನಿಮ್ಮ ನರ ಸೇದಿಹೋಗ!" ಹಾಗೆಂದೂ ಆತ ಬೈದಿರಲಿಲ್ಲ!

ಹಗೇವಿನ ಸುತ್ತ ಒಂದು ಧ್ವನಿ ಗುಡುಗಿತು:

"ಲೇಯ್, ಮಗನೆ! ಯಾರೂ ಹಗ್ಗ ಎಳೀತ ಇಲ್ಲ. ನಾವು ಒಂದು ಸ್ವಿಚ್ ಹಾಕಿದೇವೆ ಕಣ್ರೊ! ಅಲ್ಲಿ ಸಿಲೆಂಡರಿನ ಸಿಮೆಂಟು ಆಚೆ ಕುಳಿಗಳ ಮೂಲಕ ಹೊರದಬ್ಬಲೆಂದು!"

ಪ್ರೊಸೆಲ್ಸ್‌ನಿಗೆ ರೇಗಿತು. ಪಾರ್ಕರನಿಗೂ ಅಷ್ಟೆ. ಅವರಿಬ್ಬರೂ ಒಟ್ಟಿಗೇ ಕಿರುಚಿದರು: "ಅದನ್ನು ನಿಲ್ಲಿಸಿರೊ! ಸ್ವಿಚ್ಚಂತೆ! ನೀವು ನಮ್ಮನ್ನು ಸಾಯಿಸ್ತ ಇದೀರಿ, ಅಷ್ಟೇ!"

ತಬ್ಬಿಬ್ಬಾದ ರಕ್ಷಣಾಸಿಬ್ಬಂದಿ, ತೆಪ್ಪಗಾಗಿ ಹಗೇವಿನ ಕೆಳಗಡೆಯೆ ನೋಡುತ್ತಿದ್ದರು! ಎಂಟುಗಂಟೆ ವೇಳೆಗೆ ಸರಿಯಾಗಿ, 'ಲಾಂಗ್‌ಟನ್‌ಹೋಂ' ನಲ್ಲಿದ್ದ ಬ್ರಿಯಾನ್ ಕೋಪ್‌ಗೆ ಟೆಲಿಫೋನ್ ಕರೆ! ಅದು ತುರ್ತು ಕರೆ! ಬ್ರಿಯಾನ್ ಗಣಿ, ಸುರಂಗ, ಕಲ್ಲಿದ್ದಲು ಸಾಗಿಸುವ ನೌಕೆಗಳಲ್ಲಿ ಸುಮಾರು ೩೪ ವರ್ಷಗಳ ದುಡಿಮೆಯ ಅನುಭವವುಳ್ಳಾತ. ತುಂಬ ಆಳವಾದ ಗಣಿ, ಆಳವಾದ ಸುರಂಗ, ಇರುಕಲು–ಕೊರಕಲುಗಳಲ್ಲಿ ತಗಲುವಂತಹ ಗುಳಾಂತರಗಳನ್ನು ಆತ ಅರಿತು, ಅದನ್ನು ಪರಿಹರಿಸಬಲ್ಲ ಬುದ್ಧಿಶಾಲಿಯಾಗಿದ್ದ. ತಕ್ಕ ದೃಢಕಾಯ ಅವನದು. ಟೆಲಿಫೋನ್ ಕರೆ ಬಂದ ಕೂಡಲೆ ಹೇಗಿದ್ದನೊ ಹಾಗೆಯೆ ಕಾರಿನಲ್ಲಿ ಧಾವಿಸಿದ ಬ್ರಿಯಾನ್, ಹೆವ್‌ಹೆಯಿತ್ ಪರಿಸರದಲ್ಲಿದ್ದ ಸಿಮೆಂಟ್ ಹಗೇವನ್ನು ಕೇವಲ ಹತ್ತೇ ನಿಮಿಷದಲ್ಲಿ ತಲುಪಿದ್ದು! ತೂಗೇಣಿಯನ್ನು ಹಿಡಿದ, ಹಗೇವಿನೊಳಗಡೆ ಹೊಕ್ಕು, ಒಮ್ಮೆ ಕಣ್ಣಾಡಿಸಿದ.

ಬ್ರಿಯಾನನಿಗೆ ಪರಿಸ್ಥಿತಿಯ ಗಂಭೀರತೆ ಅರಿವಾಯಿತು. ವಿತ್ ಪೊಸೆಲ್ಸ್ ಕ್ರಿಸ್ ಎಲ್ಲಿಸನಿಗೆ, ಆಗಾಗ್ಗೆ ಆಮ್ಲಜನಿಕ ನೀಡುತ್ತ, ಜತೆಜತೆಗೇ ಅವನನ್ನು ಆವರಿಸಿದ್ದ ಸಿಮೆಂಟನ್ನು ಹೆಕ್ಕಿ ಹಾಕುತ್ತಿದ್ದ. ಎಲ್ಲಿಸನ ಎದೆಭಾಗದಲ್ಲಿದ್ದ ಸಿಮೆಂಟಿನ ಒತ್ತಡದ ಭಾರ, ಹಗುರಾಗಿಸುವುದು ಪ್ರೊಸೆಲ್ಸರ್ ಉದ್ದೇಶ. ಬ್ರಿಯಾನ್ ಕಂಡುದೇನು

ಅಂತೀರಿ? ಪ್ರತಿ ಕ್ಷಣವೂ ಎರಡು ಹಿಡಿ ಸಿಮೆಂಟು ತೆಗೆದುಹಾಕಿದರೆ, ಇನ್ನೆರಡರಷ್ಟು ಸಿಮೆಂಟು ಉದುರುತ್ತಿತ್ತು! ಇಷ್ಟಾದರೂ ಜಾನ್‌ಪಾರ್ಕರ್, ದುರಂತದಲ್ಲಿ ಸಿಲುಕಿ ಮುದುಡಿಹೋಗಿದ್ದ ಎಲ್ಲಿಸನೆಡೆಯಿಂದ ಅಲ್ಲಾಡಿರಲಿಲ್ಲ! ಮತ್ತೆ ಗೆಳೆಯನ ಮುಖದ ಮೇಲೆಯೆ ಸಿಮೆಂಟು ಕವಿದರೆ? ಪಾರ್ಕರನ ಬೆನ್ನು, ಪಕ್ಕೆಗಳಿಗೆ ಕವಿದಿದ್ದ ಸಿಮೆಂಟನ್ನು ತೆಗೆದ ಬ್ರಿಯಾನ್‌ಕೋಪ್, ಪಾರ್ಕರನ ಚಲನವಲನಗಳಿಗೆ ಅನುವು ಮಾಡಿಕೊಟ್ಟ. ಅನಂತರ ಅವನು, ಪಾರ್ಕರ್, ಇಬ್ಬರೂ ಸಿಮೆಂಟು ಅಗೆಯಲು ಪ್ರಾರಂಭಿಸಿದರು! ಯಾವುದೇ ಮೊರ, ಮೊರಗುದ್ದಲಿ ಬಳಸಲು ಎಡೆಯಿಲ್ಲ! ಅವರಲ್ಲಿದ್ದ ಹೆಲ್ಮೆಟ್ ಅನ್ನೇ ಮೊರವಾಗಿ ಬಳಸಿದರು, ಹೆಕ್ಕಿ ಹೆಕ್ಕಿ ಹಾಕಿದರು. ಪುಣ್ಯವೆಂಬಂತೆ, ಸಿಮೆಂಟಿನ ಉದುರುವಿಕೆ ಕಡಿಮೆಯಾಯಿತು!

ಇಪ್ಪತ್ತು - ಇಪತ್ತೈದು ನಿಮಿಷದ ನಂತರ, ಕಲ್ಲಿದ್ದಲು ಗಣಿನಾವೆಯ ಡೆಪ್ಯುಟಿ ಮೇನೇಜರ್ ರೋನ್‌ಸೇಲ್ಸ್ ಬಂದ. ಆ ವೇಳೆಗಾಗಲೆ ಅವನಿಗೆ ಸುದ್ದಿ ತಲುಪಿತ್ತು. ಬಂದವನೆ ನೇರ, ಹಗೇವಿನೊಳಗಿಳಿದದ್ದೆ! ಮರದ ಹಲಗೆಗಳು ಒಂದರ ಹಿಂದೆ, ಅವುಗಳನ್ನು ೧೮ ಮೀಟರುಗಳಷ್ಟು ಎತ್ತರ, ಹಗೇವಿನೆಡೆಯಿಂದ ಎತ್ತಿ ಹಿಡಿದು, ವೀಕ್ಷಣೆಯ ಕಂಡಿಯ ಮೂಲಕ ಎತ್ತಿ ಇಳಿಬಿಡುವುದು, ಇದರಿಂದ ಎಲ್ಲಿಸನಿಗೆ ಸಿಮೆಂಟು ಇನ್ನು ಕವಿಯುವುದು ನಿಲ್ಲಲೆಂದು! ಅವನಿಗೂ ಒಂದೇ ಗೋಡೆ ಏರ್ಪಾಡದಂತಾಗುತ್ತದೆ. ಅನಂತರ ಅವನ ಸುತ್ತ ಕವಿದ ಸಿಮೆಂಟು ಹೆಕ್ಕಿದರೆ ಸಾಕು, ಅವನನ್ನು ಉಳಿಸಲು ಸಾಧ್ಯ. ಇದು ಎಲ್ಲರ ಆಲೋಚನೆ.

ಕ್ರಿಸ್ ಎಲ್ಲಿಸನ ಮುಖ, ಶರೀರದ ಸುತ್ತಲೂ ಮರದ ಹಲಗೆಗಳನ್ನು ಸೇರಿಸಿದರು. ಪಾರ್ಕರ್, ಅವರೆವಿಗೂ, ಮಿತ್ರನಿಗೆ ಸಾಕಷ್ಟು ರಕ್ಷಣೆ ನೀಡಿದ್ದ. ತನ್ನನ್ನು ತಾನೇ ಅವನ ಮೇಲೆ ಕವಿದುಕೊಂಡು! ಮುಂದ ಹಲಗೆಗಳನ್ನು ಸರಿಯಾಗಿ ಇಳಿಸಿ, ಕೂರಿಸಿದ ಮೇಲೆ, ಸೇಲ್ಸ್, ಪಾರ್ಕರನಿಗೆ ಹೇಳಿದ: "ಇನ್ನು ಅವನನ್ನು ಕವಿದುಕೊಳ್ಳಬೇಡ.... ದಣಿದಿದ್ದೀಯ....ಮೇಲೇರಿ ಹೋಗು.... ಎಲ್ಲಿಸನಿಗಾಗಿ ಒಂದು ದೊಡ್ಡ ಪರಿಣತ ತಂಡವೇ ಬಂದಿದೆ...."

ಎಷ್ಟು ಸಮಯ ಜಾನ್ ಹಗೇವಿನಲ್ಲಿದ್ದದ್ದು? ಎರಡು ತಾಸಿನಷ್ಟು! ಆತ ಹೊರ ಬಂದಾಗ ಅಲ್ಲಿ ನಡೆದಿದ್ದ ಪರಿಹಾರ ಕಾರ್ಯ ಚಟುವಟಿಕೆ ಕಂಡು ನಿಬ್ಬೆರಗಾದ! ಅಗ್ನಿಶಾಮಕದಳದ ಎಂಜಿನ್‌ಗಳು, ತಂಡದ ಪರಿಣತರು, ಹೊನಲುಬೆಳಕಿನವರು, ಆಳದಾದ ಸುರಂಗದೊಳಗೆ ಇಳಿಯಬಲ್ಲ ಗಣಿತಜ್ಞ ತಂಡ, ಇದೆಲ್ಲವನ್ನು ಸಜೀವವಾಗಿ ಸೆರೆಹಿಡಿಯಲು ಕಾದಿದ್ದ ವೃತ್ತ ಪತ್ರಿಕಾ ಛಾಯಾಗ್ರಾಹಕರು! ಹೊರಗಣ ಏಣಿಯನ್ನು ಹಿಡಿದು ಹಾಗೆಯೆ ಬಂದು, ಮೇಲೇರಿ, ನೆಲದಂಚುತಲುಪಿ, ಅನಂತರ ಆ ತನಕ ತಾಳದ ಹೊರೆ, ದಣಿವು, ತಡೆಯಲಾಗದ ಪಾರ್ಕರ್, ಕುಸಿದುಬಿದ್ದ! ತಕ್ಷಣ, ಅವನ ಉಪಚಾರಕ್ಕೆ ಪರಿಹಾರ ತಂಡ, ಆಸ್ಪತ್ರೆಯವರು ಧಾವಿಸಿದರು.

ಇಷ್ಟರಲ್ಲಿ, ಇತ್ತ, ಸಿಮೆಂಟು ಹಗೇವಿನಲ್ಲಿ ಕಾರ್ಯನಿರತರಾಗಿದ್ದ ರಕ್ಷಣಾ ತಂಡ, ಮರದ ಹಲಗೆಗಳನ್ನು ಎಲ್ಲಿಸನ ಸುತ್ತ ಪೇರಿಸಿದರು! ಎಲ್ಲಿಸನಿಗೆ ಕತ್ತಲು ಕವಿಯಿತು, ಪ್ರಜ್ಞೆ ಹೋಗವುದು, ನರಳುವ ಸ್ಥಿತಿ ಆರಂಭ!

ಮತ್ತೆ ಎಚ್ಚರವಾದ, ತನ್ನ ಸುತ್ತ ಒಟ್ಟಿರುವ ಹಲಗೆ, ಹೆಣದ ಪೆಟ್ಟಿಗೆಗೆ ಮರ, ಮೊಳೆ ಜಡಿದಹಾಗೆ! ಇದೇನು ತಾನು ಶವದ ಪೆಟ್ಟಿಗೆ ಸೇರಿಬಿಟ್ಟೆನೇ ಎಂಬ ಭ್ರಮೆ ಅವನಿಗೆ ಕವಿಯಿತು. ಅನಂತರ ತನ್ನನ್ನು ತಾನೇ ಸಾವರಿಸಿಕೊಂಡ, ಸಿಮೆಂಟು ಸೇರುವುದನ್ನು ತಡೆಗಟ್ಟಲು, ತನಗಾಗಿ, ಹೀಗೆ ಮಾಡಿದಾರೆ ಎನ್ನಿಸಿತು ಹಾಗೂ ಭಾರವಾಗಿ ಒತ್ತುತ್ತಿದ್ದ ಸಿಮೆಂಟಿನ ಹೊರೆ ಕಳೆದು ಎದೆ ಹಗುರಾಗಿದೆ, ಅವನ ಪ್ರಾಣವೂ ಸ್ವಲ್ಪಸ್ವಲ್ಪವೇ ಸ್ಪಂದಿಸುತ್ತ ಮರಳುತ್ತಿದೆ!

"ಇನ್ನು, ಇನ್ನೊಂದು ಗಂಡಾಂತರ! ಮರದ ಹಲಗೆಗಳು ಸಿಮೆಂಟಿನ ಭಾರದಿಂದಾಗಿ ಎಲ್ಲಿಸನ ಮೇಲೆಯೆ ಕುಸಿದರೆ! ಅದಾಗುವ ಮುನ್ನ ಅವನನ್ನು ಪಾರುಮಾಡಬೇಕು!" ಬ್ರಿಯಾನಿನಗನ್ನಿಸಿದ್ದು. ಪೊಸೆಲ್ಸ್, ಆಮ್ಲಜನಕ ನೀಡುವುದನ್ನು ಮುಂದುವರೆಸಿದ. ರೋವ್‌ಸೇಲ್ಸ್, ಸಿಮೆಂಟ್ ಅಗೆದರೆ, ಬ್ರಿಯಾನ್ ಹಲಗೆಗಳನ್ನು ಹಾಗೆಯೆ ಜೋಡಿಸುವುದು. ಮತ್ತೊಂದು ಅಪಾಯದ ಸೂಚನೆ! ಹಗೇವಿನ ಪಕ್ಕಗಳಿಗೆ ಬಿದ್ದ, ಬೀಳುತ್ತಿದ್ದ ಸಿಮೆಂಟು, ಒಂದು ಸಮಾಧಿಯನ್ನೆ ನಿರ್ಮಿಸುತ್ತಿತ್ತು! ಅವರು ಕೂಡ ಅಗೆದಂತೆಲ್ಲ, ಕುಸಿದರೆ! ಬಕೆಟುಗಳನ್ನಿಳಬಿಟ್ಟರು ಪರಿಹಾರ ತಂಡದವರು. ಬಕೆಟುಗಟ್ಟಲೆ ಸಿಮೆಂಟು, ಸೇಲ್ಸ್–ಬ್ರಾಯಾನ್ ತೇಗೆದು, ಹೊರದಬ್ಬಿ ಹಾಕಿದ್ದು!

ಹೆಮ್‌ಹೆಯಿತ್ ಪರಿಸರವಿಡೀ ಒಂದು ವಿಲಕ್ಷಣ ಮೌಲ್ಯ ಆವರಿಸಿದಂತೆನ್ನಿಸಿತು! ಕಾರ್ಯಾಚರಣೆ, ಮುಗಿದ ಮೇಲೆ ಮೌನ! ಹಗೇವಿನಲ್ಲಿಯೊ ಎಲ್ಲಿಸ್ ಮುಂದಿವರೆವಿಗೂ ಸಿಮೆಂಟನ್ನು ಹೆಕ್ಕಿ ತೆಗೆದಿದ್ದರು. ಒಳಗಡೆ ಇಬ್ಬರು ಸೇರಿ ಅವಿರತವಾಗಿ ದುಡಿದು, ಸಿಮೆಂಟ್ ಹೊರೆ ತಗ್ಗಿಸಿದ್ದರು. ಆದರೆ, ಎಲ್ಲಿಸನು ಮಾತ್ರ ಭದ್ರವಾಗಿಯೆ ಸಿಮೆಂಟ್‌ನೊಂದಿಗೆ ಸಿಮೆಂಟಾಗಿಬಿಟ್ಟಿದ್ದ! ಅದೇ ಸಾಯ್ತೊ, ಆತನಿಗೆ! ಒಮ್ಮೆಲೆ ಕಿರಲಿದ: ಏಯ್, ಪಾರ್ಕರ್! ನನ್ನ ಕಾಲುಗಳು ಏಣಿಯ ಮೆಟ್ಟಲಿಂದ ಜಾರಿವೆ ಕಣ್ರೊ! ಕೆಳಗೆ ಕುಸಿದರೂ ಸರಿಯೆ, ನನ್ನನ್ನು ಮೇಲೇರಿಸಿರೊ, ಎಳೆಯಿರೊ, ಎಳೆಯಿರೊ ಮೇಲುಗಡೆಗೆ ......" ಅಷ್ಟೇ ಅವನ ಪ್ರಾಣ! ಕುಸಿದು, ಏಣಿಗೆ ಜೋತು ಬಿದ್ದ.

ಒಂದು ಡೋಲಿಯನ್ನೂ ಕೆಳಗಡೆ ಇಳಿಸಿ ಹಾಗೂ ಹೀಗೂ ಎಲ್ಲಿಸನನ್ನು ಅದರಲ್ಲಿ ಹಾಕಿದರು. ಪೊಸೆಲ್ಸ್ ಗೆಳೆಯನನ್ನು ಚುಂಬಿಸಿ, ತಳ್ಳಿದ, ಅವನ ಜತೆಗೇ ಏಣಿಯೇರಿದ, ಸಿಮೆಂಟು ಧೂಳು ಎಲ್ಲಿಸನ ಮುಖಕ್ಕೆ ರಾಚಿದಂತೆ, ರಕ್ಷಣೆ ನೀಡುತ್ತ ಗಾಬರಿ, ಕಳವಳ! ಕಾತರದ ಕೈಗಳು, ವೀಕ್ಷಣೆಯ ಕಿಟಕಿಯ ಮೂಲಕ ಡೋಲಿಯನ್ನು ಆಚೆಗೆಳೆದುಕೊಂಡವು. ಎಲ್ಲಿಸನು ಅಡಿಯಿಂದ ಮುಡಿಯತನಕ ಸಿಮೆಂಟಿಂದ ಕವಿದು ಹೋಗಿದ್ದ. ನಾಲ್ಕು ಗಂಟೆಗಳಿಗೂ ಹೆಚ್ಚು ಸಮಯ ಅವನು ಆ ಹಗೇವಿನಲ್ಲಿದ್ದದ್ದು! ಹೊರಗಿನ ಗಾಳಿಯನ್ನು ಒಮ್ಮೆ ಕಷ್ಟಾಪಟ್ಟು ಹೀರಿದ ಎಲ್ಲಿಸನ ಕಣ್ಣು ಇನ್ನೂ ಅಗಲವಾದವು.

ಹೈಡ್ರಾಲಿಕ್ ವೇದಿಕೆಯ ನೆರವು ಪಡೆದು ಎಲ್ಲಿಸನನ್ನು ಮೇಲಕ್ಕೆ ಒಯ್ದು ನೆಲದಲ್ಲಿಳಿಸಿದರು. ಅಲ್ಲಿಯೆ ಕಾದಿದ್ದ ವೈದ್ಯರ ತಂಡ ಅವನನ್ನು ಆಸ್ಪತ್ರೆಗೆ ಕರೆದೊಯ್ದರು.

ಎಕ್ಸ್‌ರೇ ಕಿರಣಗಳಿಂದ ಎಲ್ಲಿಸನ ಶರೀರ ದೊಳಭಾಗದಲ್ಲಿ ಏನೂ ಮಾರಕ ಗಾಯ ಗಳಾಗಿಲ್ಲವೆಂಬುದು ತಿಳಿದು ಬಂದಿತು. ಸದ್ಯ! ಪಾರಾದ ಆತ ಗಂಡಾಂತರದ ಅಂಚಿನಿಂದ!

ಸಿಮೆಂಟಿನ ಧೂಳು, ಅವನ ಕಣ್ಣುಗಳಿಗೆ ಕವಿದುಕವಿದು ತತ್ಕಾಲಿಕ ಕುರುಡನಾಗಿಸಿ ಬಿಟ್ಟಿದ್ದವು! ಆದರೆ, ಸಂತೋಷದ ಸಂಗತಿ, ಯಾವುದೆ ಶಾಶ್ವತವಾದ ಶರೀರಿಕ ಊನತೆ ಕಂಡು ಬಾರದಿದ್ದುದು ಎಲ್ಲಿಸನ ಅದೃಷ್ಟವೇ ಸರಿ! ಅವನ ಕಣ್ಣುಗಳನ್ನು ತೊಳೆದರು ಹಾಗೂ ಕೆಲವು ಔಷದೋಪಚಾರ, ದಣಿ ವಾರಿಸುವ ಪೇಯ, ಎಲ್ಲವನ್ನೂ ನೀಡಿದರು. ಕಾತರದಿಂದ ಕಾದಿದ್ದ ಹೆಂಡತಿ, ಮಗ ನೊಂದಿಗೆ ಎಲ್ಲಿಸ್ ಎಲ್ಲಿ ಬೇಕೊ ಅಲ್ಲಿಗೆ ಹೋಗಿ ಆರಾಮಾಗಿದ್ದು ಬರಲೆಂದು ಮೇನೇಜರ್ ತಿಳಿಸಿದ. ಎಲ್ಲರೂ ಅವನನ್ನು ಹೊಗಳುವವರೆ! ತಿಂಗಳಿಡೀ ಹಿಡಿಯಿತು, ಎಲ್ಲಿಸನ ದೃಷ್ಟಿ ಮುಂಚಿನಂತಾಗಲು ಹಾಗೂ ಅವನ ಕಟ್ಟಿದ ಗಂಟಲು ಸರಿ ಹೋಗಿ, ಅವನು ಮಾತಾಡಲು ಸಾಧ್ಯ ವಾಗಲು! ಆದರೂ ಎಲ್ಲಿಸ್ ಭೂಮಿಯಲ್ಲಿ ಒಬ್ಬ ಅದೃಷ್ಟಶಾಲಿ, ಬದುಕುಳಿದವ, ಅಂತಹ ಪರಿಸರದಿಂದ!

ಕ್ರಿಸ್ ಎಲ್ಲಿಸನನ್ನು ಜೀವದೊರಸೆ ಉಳಿಸಲು ಶ್ರಮಿಸಿದವರೆಷ್ಟು ಮಂದಿ! ಮೇನೇಜರನಿಂದ ಆಳಿನತನಕ! ಸೇಲ್ಸ್, ಪಾರ್ಕರ್, ಬ್ರಿಯಾನ್, ಪೊಸೆಲ್ಸ್ ಹಾಗೂ ಹಗೇವಿನಾಚೆ ಜೀವದ ಹಂಗು ತೇರೆದು ದುಡಿದ ರಕ್ಷಣಾದಳ! ಮರದ ಹಲಗೆ ಪೇರಿಸಿದವರು, ತಜ್ಞರದೆಷ್ಟು! ಒಟ್ಟಾರೆ ಹೆವ್‌ಹೆಯಿತ್ ಪರಿಸರ ಮಸಣ ಮೌನವಾಗಿದೆ, ಜೀವಂತ ಹಸುರಾಗಿದ್ದು, ಎಲ್ಲಿಸ್ ಬದುಕುಳಿದ ಪ್ರಯುಕ್ತ ಎಂದರೆ ಉಪ್ರೇಕ್ಷೆಯಲ್ಲ.

ಎಲ್ಲಿಸ್ ಮತ್ತೆಮತ್ತೆ ಬಡಬಡಿಸಿದಂತೆ 'ನನ್ನ ಬದುಕಿಡೀ ಕೃತಜ್ಞತೆಯಿಂದ ವಂದಿಸ ಬೇಕಾದ ಪಾರ್ಕರ್, ಪೊಸೆಲ್ಸ್ ಅದೆಷ್ಟೊ ಮಂದಿ! ಎಲ್ಲರಿಗೂ ನನ್ನ ನಮನ! ಇದು ಸತ್ಯಸ್ಯಸತ್ಯತಾನೆ.'

ಸ್ವಂತ ಕಾರ್ಯಮಾಡದವನು ಹಾಗಿರಲಿ. ಆದರೆ ಅವನು ಮಾಡುವ ಮೂರ್ಖ ತನವೆಂದರೆ ಇತರರು ಮಾಡಿರುವುದನ್ನು ಟೀಕಿಸುವುದು. ಅದ್ದರಿಂದ ಸ್ವಂತ ಕಾರ್ಯ ಮಾಡದಿದ್ದರೂ ಚಿಂತೆಯಿಲ್ಲ. ಇತರರು ಮಾಡಿದ್ದನ್ನು ಟೀಕಿಸುವ ಹೆಡ್ಡಕಾರ್ಯ ಮಾತ್ರ ಎಂದೂ ಯಾರೂ ಮಾಡದಿರಿ.

—ಎಡಿಸನ್

ಈ ಸಂಚಿಕೆಯ ಲೇಖಕರು—

ಸರ್ವಶ್ರೀಗಳಾದ—

1. ಲತಾರಾಜಶೇಖರ್, ನಂ. 16, ಟೆಂಪಲ್ ರಸ್ತೆ, ಜಯಲಕ್ಷ್ಮಿಪುರಂ, ಮೈಸೂರು-12
2. ಪರಮಶಿವ ನಡುಬೆಟ್ಟ
   ನಂ. 13, ಸಾರ್ವಜನಿಕ ಹಾಸ್ಟೆಲ್ ರಸ್ತೆ, ಚಾಮುಂಡಿಪುರಂ
   ಹಳೆಬಾಗಿಲು ಹತ್ತಿರ, ವಿದ್ಯಾರಣ್ಯಪುರಂ, ಮೈಸೂರು–8
3. ಸಿ. ನಾಗಣ್ಣ, ಪ್ರಾಧ್ಯಾಪಕರು, ನಂ. ಎಲ್. 10, ವಿಶ್ವವಿದ್ಯಾನಿಲಯ ವಸತಿಗಳು
   ಮಾನಸಗಂಗೋತ್ರಿ ಕ್ಯಾಂಪಸ್, ಮೈಸೂರು–6
4. ಡಾ॥ ದೇ. ಜವರೇಗೌಡ, ವಿಶ್ರಾಂತ ಉಪಕುಲಪತಿಗಳು
   'ಕಲಾ ನಿಲಯ' ಕಾಳಿದಾಸ ರಸ್ತೆ, ಜಯಲಕ್ಷ್ಮೀಪುರಂ, ಮೈಸೂರು–12
5. ಟಿ. ಆರ್. ನಾಗಪ್ಪ, ನಂ. 2904, ಚಾಮುಂಡಿಪುರಂ, ಮೈಸೂರು
6. ಚಂದ್ರಶೇಖರಾರಾಧ್ಯ, ಸಹ-ಸಮನ್ವಯಾಧಿಕಾರಿ
   ಅನೌಪಚಾರಿಕ ಶಿಕ್ಷಣ ವಿಭಾಗ, ಕ.ರಾ.ಮ.ಶಿ.ಸ, ಮೈಸೂರು–6
7. ಸರಸ್ವತಿ ಬಡೆಕ್ಕಿಲ, ನಂ. 1757, 4ನೇ ಅಡ್ಡ ರಸ್ತೆ, ಅನಿಕೇತನ ಮಾರ್ಗ
   ಕುವೆಂಪುನಗರ, ಮೈಸೂರು–23
8. ಶಂಸ ಐತಾಳ, ನಂ. 611, 'ಚಂದನ', 7ನೇ ಕ್ರಾಸ್, ಅನಿಕೇತನ ರಸ್ತೆ
   ಕುವೆಂಪುನಗರ, ಮೈಸೂರು–23
9. ಸುಧಾಹರೀಶ್, ನಂ. 198/199, ಸಿಂಹ ಕಾಟೇಜ್
   2ನೇ ಕ್ರಾಸ್, 2ನೇ ಸ್ಟೇಜ್, ಗೋಕುಲಂ, ಮೈಸೂರು–2
10. ಪಿ. ಶಿವಕುಮಾರಿ, ಹಿಂದಿ ಉಪನ್ಯಾಸಕಿ
    ವಿಜಯಾ ಕಾಲೇಜ್, ಮೂಲ್ಕಿ, ಮಂಗಳೂರು–574 154
11. ಮಾಧವರಾವ್ ಮುಧೋಳ್, "ರಾಮಶ್ರೀ" ನಂ. 1167–ಬಿ1,
    ಹೆಚ್.ಐ.ಜಿ. 2ನೇ ಹಂತ, ಶ್ರೀರಾಮಪುರ, ಮೈಸೂರು
12. ಕೆ. ಶಾಂತಾಮಣಿ, ನಂ. 1009, ಇ ಮತ್ತು ಎಫ್ ಬ್ಲಾಕ್,
    ಕಲ್ಪದ್ರುಮ, ಉದಯರವಿ ರಸ್ತೆ ಕುವೆಂಪುನಗರ, ಮೈಸೂರು
13. ಎನ್.ಕೆ. ರಾಮಶೇಷನ್, ನಂ. 1904,
    ಕೆ ಬ್ಲಾಕ್, ಕುವೆಂಪುನಗರ, ಮೈಸೂರು-570 023

ನೀವು ಓದಲೇಬೇಕಾದ ಪುಸ್ತಕಗಳು...

ಯುದ್ಧ ಮತ್ತು ಶಾಂತಿ (3 ಸಂಪುಟಗಳಲ್ಲಿ)

ಶರಣಚರಿತಾಮೃತ

ಪ್ರಥಮ ಚಿಕಿತ್ಸೆ

ನನ್ನೂರು

ನಳಚರಿತ್ರೆ ಸಂಗ್ರಹ

ವಿದ್ಯಾಪೀಠಗಳು

ನೈಟಿಂಗೇಲ್ ಮತ್ತು ಇತರ ಕಥೆಗಳು

ರಾಮಕೃಷ್ಣಪರಮಹಂಸ

ಬಸವಣ್ಣನವರ ಮಾತು

ಹಿಂದೂಧರ್ಮ ಭಾಗ ೧ ಮತ್ತು ೨

ನಾಗರಮರಿ

ಮಹಾಶ್ವೇತೆ

ಅಶೋಕನ ಶಿಲಾ ಶಾಸನಗಳು

ಶ್ರೀಶಂಕರಾಚಾರ್ಯ

Reg. No. KRNN 29 / WPP 6

LICENSE No. 21
LICENSED TO POST WITH PAYMENT

ಪುಸ್ತಕ ಪ್ರಪಂಚ

(ಮಾಸ ಪತ್ರಿಕೆ)

ಡೆಮ್ಮಿ ಅಷ್ಟದಳ ೮೦ ಪುಟಗಳು

ಚಂದಾ ವಿವರಗಳು :

ಬಿಡಿ ಪತ್ರಿಕೆ ರೂ. 6-00

ವಾರ್ಷಿಕ ಚಂದಾ ರೂ. 60-00

ಆಜೀವ ಸದಸ್ಯತ್ವದ ಚಂದಾ ವಿವರ:

ಸಂಸ್ಥೆಗೆ ರೂ. 600-00

ವ್ಯಕ್ತಿಗೆ ರೂ. 400-00

ಕಛೇರಿ ವಿಳಾಸ :

ಪ್ರಧಾನ ಸಂಪಾದಕರು
'ಪುಸ್ತಕ ಪ್ರಪಂಚ' ಮಾಸಪತ್ರಿಕೆ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ನಂ. 5/1, ವಿನೋಬ ರಸ್ತೆ, ಮಾನಸಗಂಗೋತ್ರಿ ಕ್ಯಾಂಪಸ್
ಮೈಸೂರು-570006

ದೂರವಾಣಿ : 520435

Edited & Printed by H. V. Sreenivasachar (I/c Editor), Printed at Karnataka State Adult Education Council Press and Published by Karnataka State Adult Education Council, 5/1, Vinoba Road, Gangothri Compus, Mysore-570 006.